## 8. ನಿಯಮ 69 ರ ಮೇರೆಗೆ

**ವಿಷಯ : ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಬೋರ್‌ವೆಲ್‌ಗಳನ್ನು ದುರಸ್ತಿಗೊಳಿಸದಿರುವುದು ಹಾಗೂ ಸತತವಾಗಿ ವಿದ್ಯುತ್ ನೀಡದಿರುವುದರಿಂದ ಉಂಟಾಗುವ ತೊಂದರೆಗಳ ವಿಚಾರ.**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ)** : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯ ಎದುರಿಸುತ್ತಿರುವಂತಹ ಬಹಳ ಗಂಭೀರವಾಗಿ ಮೂರು ಸಮಸ್ಯೆಗಳನ್ನು ನಾವು ನಿಲುವಳಿ ಸೂಚನೆ ಮುಖಾಂತರ ಕೊಟ್ಟಿದ್ದೆವು. ಅದಕ್ಕೆ ತಾವು ನಿಯಮ 69 ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಬಹಳ ಪ್ರಮುಖವಾಗಿ ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ ಒಂದು ರೇಷನ್ ಕಾರ್ಡ್, ಕುಡಿಯುವ ನೀರು ಹಾಗೂ ವಿದ್ಯುಚ್ಛಕ್ತಿ ಈ ಮೂರು ಸಮಸ್ಯೆಗಳನ್ನು ಪ್ರಸ್ತಾಪ ಮಾಡಿ ಚರ್ಚೆಗೆ ಅನುಮತಿ ಕೇಳಿದ್ದೆವು. ಈಗಾಗಲೇ ನಮ್ಮ ಸ್ನೇಹಿತರೆಲ್ಲಾ ಮಾತನಾಡಿದ್ದಾರೆ. ಸರ್ಕಾರ ಬಹಳ ಹೆಮ್ಮೆಯಿಂದ ಹೇಳುತ್ತಿದೆ ಪ್ರೋ ರೂರಲ್ ಎಂದು ನಾವು ಹಳ್ಳಿಗಾಡಿನ ಪರವಾಗಿ ಇರತಕ್ಕಂಥ ಸರ್ಕಾರ ಎಂದು. ನಾವು ಹಳ್ಳಿ ಪರ ಸರ್ಕಾರ ಎಂದು ಬಹಳ ಹೆಮ್ಮೆಯಿಂದ ಪದೇ ಪದೇ ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲಾ ಮಂತ್ರಿಗಳೂ ಕೂಡ ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ. ಆದರೆ ಸರ್ಕಾರ ಆ ರೀತಿ ಹೇಳುತ್ತಿದೆಯೇ ಹೊರತು ವಾಸ್ತವ ಅಂಕಿಅಂಶಗಳ ಪ್ರಕಾರ ನಾವು ಪರಿಶೀಲನೆ ಮಾಡಿ ನೋಡಿದರೆ ನಿಜವಾಗಿಯೂ Not Pre-Rural. It pro-urban-aboslution ಅದು ಹಳ್ಳಿಗಾಡಿನ ಪರ ಈ ಸರ್ಕಾರ ಇಲ್ಲ, ಪಟ್ಟಣ ವಾಸಿಗಳು ಮತ್ತು ಈ ದೇಶದ ಬಂಡವಾಳಗಾರರು, ಕಾರ್ಖಾನೆ ಮಾಲೀಕರ ಪರವಾಗಿ ಹೆಚ್ಚು ವಾಲಿದೆಯೇ ಹೊರತು ಅದು ಹಳ್ಳಿಗಾಡಿನ ಪರ ಇಲ್ಲ, ಅವರೇ, ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ ಕುಡಿಯುವರಿಗೆ ಇಡೀ ರಾಜ್ಯಕ್ಕೆ ಕೊಟ್ಟಿರತಕ್ಕ ಹಣ 522 ಕೋಟಿ ರೂಪಾಯಿಗಳು ರಸ್ತೆಗಳು ಮತ್ತು ಬ್ರಿಡ್ಜ್‌ಗಳಿಗೆ ಕೊಟ್ಟಿರುವುದು ಈ ವರ್ಷ 146 ಕೋಟಿ ರೂಪಾಯಿಗಳು. ಎಂಪ್ಲಾಯ್‌ಮೆಂಟ್ ಮತ್ತು ವಾಟರ್‌ಶೆಡ್ ಸ್ಕೀಮ್‌ಗೆ 694 ಕೋಟಿ ರೂಪಾಯಿ. ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ 1,362 ಕೋಟಿ ರೂಪಾಯಿಗಳಾಗುತ್ತದೆ. ಇನ್ನು ಕೃಷಿಗೆ, ನಮ್ಮ ಕೃಷಿ ಮಂತ್ರಿಗಳು ಕೃಷಿ ಪರ ನಾನು ಎಂದು ಹೇಳುತ್ತಾರೆ, ಅವರು ಕೃಷಿಗೆ ಕೊಟ್ಟಿರತಕ್ಕಂಥ ಹಣ ಎಷ್ಟೆಂದರೆ 833 ಕೋಟಿ ರೂಪಾಯಿಗಳು. ಮತ್ತು ಸ್ವಜಲ ವಾಟರ್ ಶೆಡ್ ಡೆವಲಪ್ ಮೆಂಟ್ 100 ಕೋಟಿ ರೂಪಾಯಿ, ಪವರ್ ಸಬ್ಸಿಡಿಗೆ 1800 ಕೋಟಿ ರೂಪಾಯಿ ಕೊಟ್ಟಿದ್ದಾರೆ, ಕರ್ನಾಟಕದ ಒಟ್ಟು ಜನಸಂಖ್ಯೆ ಎಷ್ಟು? ಹಳ್ಳಿಗಳು ಎಷ್ಟು? ಆ ಹಳ್ಳಿಗಳಲ್ಲಿ ಇಡೀ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಕೃಷಿ ಮೇಲೆ ಆಧಾರವಾಗಿದ್ದು ಜೀವನ ಮಾಡುತ್ತಿರತಕ್ಕಂಥ ಜನ ಎಷ್ಟು? ಹಳ್ಳಿಗಾಡಿನ ಪ್ರದೇಶಗಳಲ್ಲಿ ಇರತಕ್ಕಂಥ ಜನಸಂಖ್ಯೆ ಎಷ್ಟು? ಅವರು ಕೊಟ್ಟಿರುವಂತಹ ಹಣ ಎಷ್ಟು? ಇದನ್ನೆಲ್ಲಾ ಭಾಗ ಮಾಡಿದರೆ ಒಂದೊಂದು ತಲೆಗೆ 40 ರೂಪಾಯಿ ಬರುತ್ತದೆ. ಆ 40 ರೂಪಾಯಿಗಳಲ್ಲಿ ಹಳ್ಳಿಗಾಡಿನ ಪ್ರದೇಶದಲ್ಲಿ ಇರತಕ್ಕಂಥ ಜನರ ಜೀವನವನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆಲ್ಲ ಎಂದು ಪ್ರಾಮಾಣಿಕವಾಗಿ ನಾವು ಎಲ್ಲರೂ ಆಲೋಚನೆ ಮಾಡಬೇಕಾಗುತ್ತದೆ. ಇದು ನಾನು ಕೊಟ್ಟಿರುವ ಲೆಕ್ಕವಲ್ಲ, ಅವರೇ ಕೊಟ್ಟಿರತಕ್ಕಂಥ ಲೆಕ್ಕ. ನಾನು ಎಲ್ಲಾ ವಿಚಾರಗಳನ್ನು ಮಾತನಾಡುವುದಕ್ಕೆ

ಹೋಗುವುದಿಲ್ಲ. ಇಲ್ಲಿ ಪ್ರಸ್ತಾಪ ಮಾಡಿರುವುದು ಮೂರು ವಿಚಾರ. ಕುಡಿಯುವ ನೀರು, ರೇಷನ್ ಕಾರ್ಡ್ ಮತ್ತು ಪವರ್. ಕುಡಿಯುವ ನೀರಿನ ವಿಚಾರದಲ್ಲಿ ಪರಿಸ್ಥಿತಿ ಇವತ್ತು ಗಂಭೀರವಾಗಿದೆ. ಕುಡಿಯುವ ನೀರಿನ ಬಗ್ಗೆ ಪ್ರತಿದಿವಸ ಪತ್ರಿಕೆಗಳನ್ನು ತೆಗೆದು ನೋಡಿದರೆ ಸರ್ಕಾರದ ಒಂದು ಹೇಳಿಕೆ ಇರುತ್ತದೆ. ಅದೇನೆಂದರೆ ಅಲ್ಲಿ ಇಷ್ಟು ಹಣ ಕೊಡುತ್ತಿದ್ದೇವೆ, ಒಂದು ಜಿಲ್ಲೆಗೆ ಇಷ್ಟು ಕೊಡುತ್ತಿದ್ದೇವೆ ಎಂದು. ಈಗ ತಾನೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದರು. ಅದನ್ನು ನೀವು ಕೇಳಿಸಿಕೊಂಡಿರಿ. ಈಗಾಗಲೇ ಒಂದು ಸುದ್ದಿ ಇದೆ. ಒಂದು ಜಿಲ್ಲೆಗೆ ಒಂದು ಕೋಟಿ ರೂಪಾಯಿ ಕೊಡುತ್ತೇವೆಂದು. ಅದು ಪ್ರಮೋಸಲ್ ಇದೆ. ಸರಾಸರಿ ಒಂದು ಜಿಲ್ಲೆಗೆ ಹತ್ತು ತಾಲ್ಲೂಕುಗಳು ಇವೆ. ಕೆಲವು ಕಡೆ 12 ತಾಲ್ಲೂಕುಗಳು ಬರುತ್ತವೆ. ಒಂದು ತಾಲ್ಲೂಕಿಗೆ ಹತ್ತು ಲಕ್ಷ ರೂಪಾಯಿ ಬರುತ್ತದೆ. ಇವತ್ತು ಒಂದು ಬೋರ್‌ವೆಲ್ ಕೊರೆದು ಪಂಪ್‌ಸೆಟ್ ಅಳವಡಿಸಿ, ಭೂಮಿಯಿಂದ ನೀರು ತೆಗೆದು ಕೊಡಬೇಕಾದರೆ ಒಂದು ಲಕ್ಷ 70 ಸಾವಿರ ರೂಪಾಯಿಗಳು ಬೇಕಾಗುತ್ತದೆ. 10 ಲಕ್ಷ ರೂ ಒಂದು ತಾಲ್ಲೂಕಿಗೆ ಕೊಟ್ಟರೆ ನೀವು ಎಷ್ಟು ಹಳ್ಳಿಗಳಿಗೆ ನೀರು ಸರಬರಾಜು ಕೊಡಬಹುದು? ಹಾಗಾಗಿ ನಾಣು ಪ್ರಾಮಾಣಿಕವಾಗಿ ಕೇಳುತ್ತಿದ್ದೇನೆ, ಬಡ ಜನರ ಪರವಾಗಿ ಹಳ್ಳಿಗಾಡಿನ ಜನರ ಪರವಾಗಿ ಇರತಕ್ಕಂಥ ಸರ್ಕಾರ ಅಲ್ಲ ಇದು. ಹಾಗೆ ಇದ್ದರೆ ಪ್ರಾಮಾಣಿಕವಾಗಿ ಕುಡಿಯುವ ನೀರಿಗೆ ಒಂದು ತಾಲ್ಲೂಕಿಗೆ, ಇವತ್ತು ಬರಗಾಲವಿರುವಂತಹ ಪರಿಸ್ಥಿತಿಯಲ್ಲಿ, ಕುಡಿಯುವ ನೀರಿಗೆ ಕೆಲವು ಬರಗಾಲ ಪೀಡಿತವಾದಂತಹ ಜಿಲ್ಲೆಗಳು ಇವೆ, ತಾಲ್ಲೂಕುಗಳು ಇವೆ. ಒಂದು ತಾಲ್ಲೂಕಿಗೆ ಸರಾಸರಿಯಾಗಿ ಒಂದು ಕೋಟಿ ರೂಪಾಯಿಗಳು, ಒಂದು ಅಸೆಂಬ್ಲಿ ಕ್ಷೇತ್ರದ ಲೆಕ್ಕದಲ್ಲಿ ಕೊಟ್ಟರೂ ಸಹ ಸಾಕಾಗುವುದಿಲ್ಲ. ಮಾನ್ಯ ಶ್ರೀನಿವಾಸ ಗೌಡರಿಗೂ ಇದು ಗೊತ್ತಿದೆ. 29ನೇ ತಾರೀಖಿನ ದಿವಸ ಕೆ.ಡಿ.ಪಿ. ಮೀಟಿಂಗ್ ಇದೆ, ಅಲ್ಲಿ ಇದು ಗಂಭೀರ ಚರ್ಚೆಗೆ ಬರುತ್ತದೆ. ಅಲ್ಲಿ ಮಾನ್ಯ ಶ್ರೀನಿವಾಸ ಗೌಡರ ಎದುರಿಗೆ ಅಧಿಕಾರಿಗಳಿಗೆ ಮಾತನಾಡುವುದಕ್ಕೆ ಭಯ. ಅವರು ಹಣ ಇದೆಯೆಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಅದರ ಹತ್ತಿರ ಹಣವಿಲ್ಲ. ಈಗ ನಮ್ಮ ಜಿಲ್ಲೆಯಲ್ಲೇ ತೆಗೆದುಕೊಂಡರೆ ಒಂದೊಂದು ತಾಲ್ಲೂಕಿಗೆ ಸರಾಸರಿಯಾಗಿ 30 ರಿಂದ 40 ಹಳ್ಳಿಗಳಿಗೆ ಮೂರು ತಿಂಗಳುಗಳಿಂದ ಕುಡಿಯುವ ನೀರನ್ನು ಟ್ರಾನ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಅಲ್ಲಿ ಬೋರ್‌ವೆಲ್‌ಗಳು ಇಲ್ಲದೇ ಟ್ರಾನ್ಸ್‌ಪೋರ್ಟ್ ಮಾಡುತ್ತಿದ್ದೇವೆ. ನಾವೇ ಒಂದು ಟ್ರಾಕ್ಟರ್‌ಗೆ 350 ರೂ.ಗಳಿಂದ 400 ರೂಪಾಯಿಗಳನ್ನು ಬಾಡಿಗೆ ಕೊಡಬೇಕೆಂದು ಕೆ.ಡಿ.ಪಿ. ಮೀಟಿಂಗ್‌ನಲ್ಲಿ ನಿಗದಿ ಮಾಡಿದ್ದೇವೆ. ಆ ರೀತಿಯಲ್ಲಿ ನಮ್ಮ ಜಿಲ್ಲೆಗೆ ಕಳೆದ ಮೂರು, ನಾಲ್ಕು ತಿಂಗಳುಗಳಿಂದ ಕುಡಿಯುವ ನೀರನ್ನು ಸಪ್ಲೈ ಮಾಡುತ್ತಿದ್ದೇವೆ. ಈ ಪರಿಸ್ಥಿತಿ ಬೇರೆ ಜಿಲ್ಲೆಗಳಲ್ಲೂ ಇದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ನಾವು ಹಳ್ಳಿಗಾಡಿನ ಪರವೆಂದು ಹೇಳುವಂಥ ಸರ್ಕಾರ, ನಾವು ಕುಡಿಯುವ ನೀರಿಗೆ ಪ್ರಾಶಸ್ತ್ಯವನ್ನು ಕೊಡುತ್ತೇನೆಂದು ಹೇಳುವಂತಹ ಸರ್ಕಾರ, ಇವತ್ತಿಗೂ ಕೂಡ ಹಣವನ್ನು ಬಿಡುಗಡೆ ಮಾಡಿಲ್ಲ. ಇಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲವೆಂದರೆ ಏನೂ ಮಾಡಿಲ್ಲವೆಂದು ಅರ್ಥವಲ್ಲ. ಇಲ್ಲಿ ಕುಡಿಯುವ ನೀರಿಗೆ ಸಾಕಾಗುವಷ್ಟು ಹಣವನ್ನು ಬಿಡುಗಡೆ ಮಾಡಿಲ್ಲ. ನೀವು ಬೇರೆ ಯೋಜನೆಗಳಿಗೆ ಕೊಡುವಂಥಾದ್ದನ್ನು 3–4 ತಿಂಗಳು ನಿಧಾನ ಮಾಡಿ. ಅದಕ್ಕೆ ಅಷ್ಟೇನೂ ತೊಂದರೆಯಾಗುವುದಿಲ್ಲ. ಇಲ್ಲಿ ನಾವು ಶಾಸಕರಾಗಿ ಎಲ್ಲೂ ಹಳ್ಳಿಗಳಲ್ಲಿ ಓಡಾಡುವ ಹಾಗೆ ಇಲ್ಲ. ಇವರು ಮಾತನಾಡಿದರೆ ವಿಕೇಂದ್ರಿಕರಣ ಎಂದು ಹೇಳುತ್ತಾರೆ. ಪಂಚಾಯತ್ ರಾಜ್‌ಗಳಿಗೆ ಅಧಿಕಾರವನ್ನು ಕೊಟ್ಟುಬಿಟ್ಟಿದ್ದೇವೆಂದು ಹೇಳುತ್ತಿದೆ. ಈ ವಿಚಾರವನ್ನು ಆದರೆ ಏನಾದರೂ ನಾವು

ಹೇಳುತ್ತಾರೆ ಮಾತನಾಡಿದರೆ, ಮಾನ್ಯ ಡಿ.ಆರ್ ಪಾಟೀಲ್‌ರವರಿಗೆ ಸಿಟ್ಟು ಬರುತ್ತದೆ. ಅವರು ಸರಿಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಇಲ್ಲಿ ಪಂಚಾಯತ್‌ನವರಿಗೆ ಹಣವನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ಪಂಚಾಯತ್‌ನವರು ನಮಗೆ ಹಣವನ್ನು ಕೊಟ್ಟಿಲ್ಲವೆಂದು ಹೇಳುತ್ತಾರೆ. ಇವತ್ತು ಪಂಚಾಯತ್ ವ್ಯವಸ್ಥೆ ಏನು ಆಗಿದೆ? ಇವತ್ತು ಕುಡಿಯುವ ನೀರಿಗೆಂದು ಹಣವನ್ನು ಕೊಟ್ಟರೆ. ಪಂಚಾಯತ್‌ಗಳು ಬೇರೆ ಬೇರೆ ಯೋಜನೆಗಳಿಗೆ ಹಣವನ್ನು ಭಾಗವಾಗಿ ಇಟ್ಟುಕೊಂಡು ಉಪಯೋಗ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಶಾಸಕರು ಹಳ್ಳಿಗಳಿಗೆ ಹೋದರೆ ಜನರು ನಮಗೆ ನೀರು ಕೇಡಿ ಎಂದು ಕೇಳುತ್ತಾರೆ. ಅವರು ಗ್ರಾಮ ಪಂಚಾಯತ್ ಸದಸ್ಯರುಗಳನ್ನು ಕೇಳುವುದಿಲ್ಲ. ಜಿಲ್ಲಾ ಪಂಚಾಯತ್ ಮೆಂಬರ್‌ಗಳನ್ನು ಕೇಳುವುದಿಲ್ಲ, ಮಂತ್ರಿಗಳನ್ನು ನೀರು ಕೊಡಿಯೆಂದು ಘೇರಾವ್ ಮಾಡುತ್ತಾರೆ. ಆಗ ನಾವು ನಮಗೆ ಸಂಬಂಧವಿಲ್ಲ, ಗ್ರಾಮ ಪಂಚಾಯತ್ ಸದಸ್ಯರು ನೀರು ಕೊಡುತ್ತಾರೆ, ಜಿಲ್ಲಾ ಪಂಚಾಯತ್ ಸದಸ್ಯರು ನೀರು ಕೊಡುತ್ತಾರೆ. ನಮ್ಮನ್ನು ಕೇಳಬೇಡಿ. ಎಂದು ನಾವು ಹೇಳಿದರೆ..

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಮಾನ್ಯ ಶ್ರೀರಾಮರೆಡ್ಡಿಯವರೇ, ಈ ವಿಚಾರದಲ್ಲಿ ರಾಂಗ್ ಮೆಸೇಜ್ ಹೋಗುವುದು ಬೇಡ. ನಿಮ್ಮದು ಕಮಿಟ್‌ಮೆಂಟ್ ಇದೆ. ಡಿಸೆಂಟ್ರಲ್‌ಜೇಷನ್ ಬಗ್ಗೆ, ಜನರಲ್ ಆಗಿ ಪಂಚಾಯತ್‌ಗಳಲ್ಲಿ ಆ ಒಂದು ಟೆನ್‌ಡೆಂನ್ಸಿ ಇದೆ. ಏನಾದರೂ ಒಂದು ಗ್ರಾಂಟ್ ಬಂದರೆ ಅದನ್ನು ಮೆಂಬರ್‌ವಾರು ಹಂಚಿಕೊಳ್ಳುವಂತಹ ಪದ್ಧತಿ ಪ್ರಾರಂಭವಾಗಿದೆ. ಅದು ಗಬಾರದು ನಿಜ. ಇಲ್ಲಿ ಕುಡಿಯುವ ನೀರಿಗೆಂದು ಪ್ರತ್ಯೇಕವಾಗಿ ದೊಡ್ಡ ಮೊತ್ತದಲ್ಲಿ ಹಣವನ್ನು ಬಿಡುಗಡೆ ಮಾಡಿರುವಂಥಾದ್ದು ಇಲ್ಲ. ಆ ರೀತಿ ಬಿಡುಗಡೆ ಮಾಡಿದರೆ, ಅವರಲ್ಲಿ ಏನು ವ್ಯವಸ್ಥೆ ಇದೆ, ಏನು ಇನ್‌ಫ್ರಾಸ್ಟ್ರಕ್ಚರ್ ಇದೆ? ನಾವು ಹೇಳುವಂಥಾದ್ದು, ಈ ಸಮಸ್ಯೆ ಆಗಾಧವಾದದ್ದು. ಅವರು ಇದನ್ನು ನಿಭಾಯಿಸುವುದಕ್ಕೆ ಚೈತನ್ಯವಿಲ್ಲ. ಇವು ನಮ್ಮದೇ ಸಂಸ್ಥೆಗಳಾದುದ್ದರಿಂದ, ಎಲ್ಲೋ ನಾವು ಸಿಟ್ಟಿನ ಭರದಲ್ಲಿ, ವೈಲ್ಡ್ ಅಲಿಗೇಷನ್ಸ್ ಮಾಡಿಬಿಟ್ಟರೆ, ಮತ್ತು ಆ ಕೂಸನ್ನು ನಾಳೆ ಬೆಳೆಸಬೇಕಾಗುತ್ತದೆ. ಇದು ನನ್ನ ಅಪೀಲು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೇ, ನಾನು ವಿಕೇಂದ್ರೀಕರಣವನ್ನು ವಿರೋಧ ಮಾಡಿ ಮಾತನಾಡುತ್ತಿಲ್ಲ. ನಾನು ಹೇಳುತ್ತಿರುವಂಥಾದ್ದು, ವಿಕೇಂದ್ರೀಕರಣದಲ್ಲಿ ಅವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆಂದು ನೀವು ಹೇಳುತ್ತಿದ್ದೀರಿ. ನಾವು ಶಾಸಕರು ಅಲ್ಲಿ ಹೋದರೆ, ನೀರು ಕೊಡಿ, ಎಂದು ನಮ್ಮನ್ನು ಹಿಡಿದುಕೊಳ್ಳುತ್ತಾರೆ. ನಮ್ಮ ಹತ್ತಿರ ಹಣ ಇಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ವಾಸ್ತವವಾಗಿ ಹೇಳಬೇಕೆಂದರೆ, ನಾವು ನೇರವಾಗಿ ಒಬ್ಬ ಎ.ಡಬ್ಲ್ಯೂ ಇ.ಗೆ ಒಂದು ಬೋರ್‌ವೆಲ್ ಅನ್ನು ಹಾಕಿ ಎಂದು ಹೇಳುವಂತಹ ಶಕ್ತಿ ಇವತ್ತು ನಮಗೆ ಇಲ್ಲ. ಆದರೆ ಜನರು ನಮ್ಮನ್ನು ಕೇಳುತ್ತಾರೆ. ಇದಕ್ಕೆ ನಾವು ಏನು ಮಾಡಬೇಕೆಂದು ಹೇಳಿ? ನಾನು ವಿಕೇಂದ್ರೀಕರಣದ ವಿರೋಧವೂ ಇಲ್ಲ, ಮತ್ತೆ ಪಂಚಾಯತ್ ರಾಜ್ ವ್ಯವಸ್ಥೆಯ ವಿರೋಧವೂ ಇಲ್ಲ. ನಾನು ನಮ್ಮ ಪಕ್ಷದವರನಾಗಿ ಹೇಳುವುದಾದರೆ, ನಾವೇ ಮೊದಲು ಇಂಡಿಯಾ ದೇಶದಲ್ಲಿ ಜಾರಿಗೆ ತಂದಿದ್ದು, ಈ ವಿಕೇಂದ್ರಿಕರಣವನ್ನು ಮೊದಲು ಬಂಗಾಳದಲ್ಲಿ

162 ಯಾರು ತಪ್ಪು ತಿಳಿದುಕೊಳ್ಳಬಾರದು. ಆದರೆ ಇವತ್ತು ಪ್ರಾಕ್ಟಿಕಲ್ ರಿಯಾಇಲಟಿ ಏನು?

**ಶ್ರೀ ಎಸ್.ಎಸ್.ಪಾಟೀಲ್** : ತಾವು ಈಗ ನಮ್ಮನ್ನು ಕೇಳುವುದು ಸರಿ. ಅದನ್ನು ನಾವೂ ಒಪ್ಪಿಕೊಳ್ಳುತ್ತೇವೆ, ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಅದಕ್ಕೆ ಏನು ಮಾಡಬೇಕೆಂಬ ಸಲಹೆಯನ್ನು ತಾವು ಹೇಳಿ.

**ಶ್ರೀ ಡಿ.ಆರ್.ಪಾಟೀಲ್** : ಮಾನ್ಯ ಅಧ್ಯಕರೆ, ಈ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ಕೊಟ್ಟು ಎರಡು ತಿಂಗಳು ಅಯಿತು. ಪ್ರತಿವರ್ಷ ಈ ಕುಡಿಯುವ ನೀರಿನ ಸಮಸ್ಯೆ, ಈ ಟೈಮನಲ್ಲಿ ಇದ್ದೆ ಇರುತ್ತದೆ. ಆಗ ಜಿಲ್ಲಾ ಪಂಚಾಯತ್ಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಶಾಸಕರುಗಳಿಗೆ, ಜವಾಬ್ದಾರಿ ಇತ್ತೋ, ಆಗ ಹೇಗೆ ನಿಭಾಯಿಸಿದರೋ ಹಾಗೆ ಈಗಲೂ ಇರುತ್ತದೆ. ಈಗ ಕೆಲಸ ಮಾಡುವವರು ಯಾರು? ಶಾಸಕರು ಅಗಲಿ, ತಾಲ್ಲೂಕು ಪಂಚಾಯತ್‌ರವರಾಗಲಿ, ಜಿಲ್ಲಾ ಪಂಚಾಯತ್‌ನವರಾಗಲಿ, ಕೆಲಸ ಮಾಡುವುದಕ್ಕೆ ಒಂದು ವ್ಯವಸ್ಥೆ ತಾಲ್ಲೂಕು ಪಂಚಾಯತ್‌ವರಿಗೆ ಹೇಳಿದರೂ ಮಾಡಬೇಕು, ಗ್ರಾಮ ಪಂಚಾಯತ್ನವರಿಗೂ ಹೇಳಿದರೂ ಮಾಡಬೇಕು.

**ಶ್ರೀ ಕೆ. ಜಯಪ್ರಕಾಸ್ ಹೆಗ್ಡೆ** : ಮಾನ್ಯ ಅಧಕ್ಷರೆ, ನೀವು ಈ ಕೆಲಸವನ್ನು ಮಾಡಲು ಅದಿಕಾರವನ್ನು ಮಾಡಲು ಅಧಿಕಾರವನ್ನು ಕೊಟ್ಟಿದ್ದೀರಿ. ಯಾವ ಅಧಿಕಾರಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರು ಹೇಳಿದ ಕೆಲಸವನ್ನು ಮಾಡುತ್ತಾರೆ? ಇಲ್ಲಿ ಜ್ಯೂನಿಯರ್ ಇಂಜಿನಿಯರ್ ಯಾವ ಪಂಚಾಯತ್‌ನಲ್ಲಿ, ಯಾವ ವಾರ್ಡ್‌ನಲ್ಲಿ ಎಷ್ಟು ಕುಡಿಯುವ ನೀರಿನ ಸಮಸ್ಯೆ ಇದೆಯೆಂಬ ಪಟ್ಟಿಯನ್ನು, ಮಾಡಿದ್ದಾರೆಂಬುದನ್ನು ನಾನು ಮಾತನಾಡುವಂತಹ ಸಂದರ್ಭದಲ್ಲಿ ಅವರು ಕಳುಹಿಸರುವಂತಹ ಪಟ್ಟಿಯನ್ನು ಓದುತ್ತೇನೆ. ಅವು ಆ ಭಾಗಗಳಿಗೆ ಹೋಗುವುದೇ ಇಲ್ಲ. ಅವರಿಗೆ ಎಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೆಂಬುದು ಗೊತ್ತಿಲ್ಲ. ಇದು ಇರುವಂತಹ ಪರಿಸ್ಥಿತಿ. ನಾಲ್ಕು ಪಂಚಾಯತ್‌ಗಳಿಗೆ ಒಬ್ಬ ಸೆಕ್ರೆಟರಿ ಇರುತ್ತಾರೆ, ಎರಡು ಪಂಚಾಯತ್‌ಗಳಿಗೆ ಒಬ್ಬರು ಇರುತ್ತಾರೆ. ಇವತ್ತು ಅಲ್ಲಿ ಹೋದರೂ ಇಲ್ಲ, ಇಲ್ಲಿ ಹೋದರೂ ಇಲ್ಲ.

**ಶ್ರೀ ಡಿ.ಆರ್.ಪಾಟೀಲ್** : ನಾವು ಇಲ್ಲಿ ಜಿಲ್ಲಾ ಪಂಚಾಯತ್‌ನವರನ್ನು, ತಾಲ್ಲೂಕು ಪಂಚಾಯತ್‌ನವರನ್ನು ಕೇಳಿ. ಆ ಆಫೀಸರ್ಸ್‌ಗಳನ್ನು ವರ್ಗಾವಣೆ ಮಾಡುವುದಿಲ್ಲ. ಇಲ್ಲಿ ನಾವು ಶಾಸಕರು ಕೊಟ್ಟ ಲೆಟರ್ ಮೇಲೆ ಅವರನ್ನು ವರ್ಗಾವಣೆ ಮಾಡುತ್ತೇವೆ. ಅದಕ್ಕೆ ಅವರು ನಾವು ಏಕೆ ಅವರ ಮಾತನ್ನು ಕೇಳಬೇಕು, ಇವರ ಮಾತು ಏಕೆ ಕೇಳಬೇಕೆಂದು ಆಫೀಸರ್ಸ್ ಹೇಳುತ್ತಾರೆ. ನೀವು ಅವರಿಗೆ ಮುಗದಾಳವನ್ನು ಕೊಡಿರಿ.

**ಶ್ರೀ ಕೆ. ಜಯಪ್ರಕಾಶ್** : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಆ ರೀತಿಯ ವರ್ಗಾವಣೆಯನ್ನು ಮಾಡಿಸುತ್ತಿಲ್ಲ. ನಿಮ್ಮ ಭಾಗದಲ್ಲಿ ಆ ರೀತಿಯ ವರ್ಗಾವಣೆಯನ್ನು ಮಾಡಿಸಿರಬಹುದು. ನಮ್ಮ ಭಾಗದಲ್ಲಿ ಅಷ್ಟು ವರ್ಗಾವಣೆಯನ್ನು ನಾವು ಮಾಡಿಸಿಲ್ಲ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಆ ಚರ್ಚೆ ಈಗ ಇಲ್ಲಿ ಬೇಕಾಗಿಲ್ಲ. ಇಲ್ಲಿ ನಾವು ವಿಕೇಂದ್ರಿಕರಣದ ಬಗ್ಗೆ ಚರ್ಚೆ ಮಾಡುತ್ತಿಲ್ಲ. ನಾನು ಇಲ್ಲಿ ಇಷ್ಟೇ ಕೇಳುವಂಥಾದ್ದು. ಜನರು ನಮ್ಮನ್ನು ಕೇಳುತ್ತಾರೆ, ನಾವು ಏನು ಹೇಳಬೇಕು? ನೀವು ಯಾರಿಗೆ ಅಧಿಕಾರವನ್ನು ಕೊಡುತ್ತೀರಿ, ಎಂಬ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಅವರ ಅಧಿಕಾರವನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಈಗ ನಾನು ಒಂದು ವಿಚಾರವನ್ನು ಹೇಳುತ್ತೇನೆ.

> "Drinking water allocation is Rs. 522 crores, yet there are several hamlets with no source of water supply, while about 200 villages get temporary supply through tankers, Nearly half of the 56,682 hamlets have saline contaminated ground water, but the Centrally funded rajiv Gandhi De-salination Scheme is crawling along."

ಅಂದರೆ 200 ಹಳ್ಳಿಗಳಿಗೆ, ಇವತ್ತೂ ಕೂಡ ಸ್ವಚ್ಛವಾದಂತಹ, ಕುಡಿಯುವುದಕ್ಕೆ ಯೋಗ್ಯವಾದಂತಹ ನೀರು ಕೊಡುವಂತಹ ಶಕ್ತಿ ಇಲ್ಲವೆಂದರೆ, ನಾವು ಸರ್ಕಾರವನ್ನು ನಡೆಸುವಂತಹ ವಿಧಾನ ಏಕೆ? ಹೇಗೆ? ಯಾರಿಗೋಸ್ಕರ ಎಂಬ ಪ್ರಶ್ನೆ ನನ್ನದು ಇದೆ. ಆ ರೀತಿಯಲ್ಲಿ ಇವತ್ತು ಸರ್ಕಾರ ಮಾತಿನಲ್ಲಿ ಇವತ್ತು ನಾವು ಬಡವರ ಪರ ಇದ್ದೇನೆ, ಹಳ್ಳಿಗಳ ಪರವಿದ್ದೇವೆಂದು ಹೇಳಿದರೆ, ಪ್ರಯೋಜನವಾಗುವುದಿಲ್ಲ. ಇದಕ್ಕೆ ಒಂದು ಸರಿಯಾದ ರೀತಿಯಾದಂಥ ವ್ಯವಸ್ಥಿತ ರೀತಿಯಾದಂಥ ವೈಜ್ಞಾನಿಕ ರೀತಿಯಾಗಿ, ಪ್ರತಿಯೊಬ್ಬ ಮನುಷ್ಯನಿಗೂ ಇವತ್ತು ನೀರು ಕುಡಿಯುವುದಕ್ಕೆ ಎಷ್ಟು ಬೇಕೋ, ಅಷ್ಟನ್ನು ಒದಗಿಸುವಂತಹ ಒಂದು ಸ್ಪಷ್ಟವಾದಂತಹ ಯೋಜನೆ ಇವತ್ತಿಗೂ ಸಹಿತ ಸರ್ಕಾರದ ಮುಂದೆ, ಇಲ್ಲ. ನಮ್ಮ ಹಳ್ಳಿಗಾಡಿನ ಜನಸಂಖ್ಯೆ ಎಷ್ಟು? ಆ ಜನಸಂಖ್ಯೆಗೆ ವೈಜ್ಞಾನಿಕವಾಗಿ ಪ್ಲಾನಿಂಗ್ ಕಮಿಷನ್‌ನವರು ನಿಗದಿ ಮಾಡಿರುವಂತಹ ರೀತಿಯಲ್ಲಿ ಒಬ್ಬ ಮನುಷ್ಯನಿಗೆ ಒಂದು ದಿವಸಕ್ಕೆ ಎಷ್ಟು ನೀರಿನ ಅವಶ್ಯಕತೆ ಇದೆ? ಅವರು 124 ಲೀಟರ್ ನೀರಿನ ಅವಶ್ಯಕತೆ ಇದೆಯೆಂಬುದು ಹೇಳುತ್ತಾರೆ. ಒಂದು ದಿವಸಕ್ಕೆ ಈ 124 ಲೀಟರ್ ನೀರನ್ನು ಸಪ್ಲೈ ಮಾಡುವುದಕ್ಕೆ ಸಾಧ್ಯ ಆಗಿದೆಯಾ? ಅದರಲ್ಲಿ ಅರ್ಧ, ಕಾಲು ಭಾಗ ಅದರಲ್ಲಿ 10ನೇ ಒಂದು ಭಾಗವಾದರೂ ಇವತ್ತು ನೀರನ್ನು ಕೊಡುತ್ತಿದ್ದೇವಾ? ಈ ಹಳ್ಳಿಗಾಡಿನ ಜನರಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅಂತಹ ಒಂದು ಪರಿಸ್ಥಿತಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಇದೆ. ಆ ಪರಿಸ್ಥಿತಿಯಿಂದ ಇವತ್ತು ನಾವು ಹೊರಗೆ ಬರಬೇಕಾಗಿದೆ. ಸರ್ಕಾರ ಬೇರೆ ಯೋಜನೆಗಳನ್ನು ಮಾಡುತ್ತದೋ ಅದು ಅಲ್ಲಿ ಪ್ರಶ್ನೆ. ಇಲ್ಲಿ ಮನುಷ್ಯನಿಗೆ ಗಾಳಿ, ನೀರು ಎರಡೂ ಮುಖ್ಯವಾದದ್ದು. ಇದು ಇಲ್ಲದಿದ್ದರೆ ಬದುಕುವುದಕ್ಕೆ ಆಗುವುದಿಲ್ಲ. ಮನುಷ್ಯ ಒಂದು ಹೊತ್ತು ಊಟವಿಲ್ಲದಿದ್ದರೆ ಬದುಕುತ್ತಾನೆ. ಆದರೆ ನೀರು ಇಲ್ಲದೇ ಬದುಕುವುದಕ್ಕೆ ಸಾಧ್ಯವಿಲ್ಲ. ಅಂತಹ ಒಂದು ಪರಿಸ್ಥಿತಿ, ಇವತ್ತು ನಮ್ಮ ರಾಜ್ಯದಲ್ಲಿ ನಿರ್ಮಾಣವಾಗಿದೆ. ನಾನು ಇದರ ಬಗ್ಗೆ ಡಿಸ್ಟ್ರಿಕ್ಟ್ ವೈಸ್ ರಿಪೋರ್ಟ್ ಇದೆ, ಎಲ್ಲೆಲ್ಲಿ ಯಾವ ರೀತಿಯಲ್ಲಿ ಇದೆಯೆಂಬುದು ಇದೆ. ಇದೆಲ್ಲವನ್ನೂ ಹೇಳುವುದಕ್ಕೆ ಸಮಯ ಹೆಚ್ಚು ಆಗುತ್ತದೆ. ನಾನು ನಮ್ಮ ಕೋಲಾರ ಜಿಲ್ಲೆಯ ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಸತತವಾಗಿ ಇದು 4ನೇ ವರ್ಷ, ಮಳೆ ಇಲ್ಲ. ನಮಗೆ ಯಾವುದೇ ನದಿಗಳು ಇಲ್ಲ, ನಾಲೆಗಳು ಇಲ್ಲ, ಕೆರೆಗಳು ಬತ್ತಿಹೋಗಿ ನಾಲ್ಕು ವರ್ಷಗಳು ಆಗಿವೆ. ಈ ಕೆರೆಗಳಿಗೆ ನೀರು ಬಂದಿಲ್ಲ. ನಾವು ಒಂದು ಸಾವಿರ ಅಡಿ ಆಳಕ್ಕೆ ಹೋದರೂ ನೀರು ಇಲ್ಲ. ನೀವು ಒಂದು ವಾಟರ್ ಸಪ್ಲೈಗೆ ಇಷ್ಟು ಹಣವೆಂದು ಏನು ನಿಗದಿ ಮಾಡುತ್ತೀರಿ, ಅದು ನಮ್ಮ ಕೋಲಾರ ಜಿಲ್ಲೆಗೆ ಸಾಕಾಗುವುದಿಲ್ಲ. 800 ಅಡಿಯಿಂದ 1,000 ಅಡಿಯವರೆಗೂ ಭೂಮಿಯೊಳಗೆ ಹೋಗಬೇಕಾಗುತ್ತದೆ. ಈ ರೀತಿ 1,000 ಅಡಿ ಒಳಗೆ ಹೋದರೆ ಏಳೂವರೆ ಹೆಚ್.ಪಿ. ಮೋಟರ್ ಕೆಲಸ ಮಾಡುವುದಿಲ್ಲ. ಅದಕ್ಕೆ 15 ಹೆಚ್.ಪಿ. ಮೋಟಾರ್ ಬೇಕು. ಈ 15 ಹೆಚ್.ಪಿ. ಮೋಟಾರ್‌ಗೆ ಕಾಸ್ಟ್ ಜಾಸ್ತಿಯಾಗುತ್ತದೆ. ನೀವು ವಾಟರ್ ಸಪ್ಲೈಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದರೆ, ಅದು ಸಾಕಾಗುವುದಿಲ್ಲ. ಇನ್ನೊಂದು ದುರಂತವೇನೆಂದರೆ ಕೆ.ಇ.ಬಿ. ಯವರಿಗೆ 50,000 ರೂಪಾಯಿಗಳ ಡಿಪಾಸಿಟ್ ಅನ್ನು ಕೊಡಬೇಕು. ಜಿಲ್ಲಾ ಪಂಚಾಯತ್‌ನವರು ಬೋರ್‌ವೆಲ್‌ಗಳನ್ನು ಕೊರೆಸಿದರೆ 50,000 ರೂಪಾಯಿಗಳ ಡಿಪಾಸಿಟ್ ಅನ್ನು ಕೊಡಬೇಕು, ಸ್ಕೇರ್‌ಸಿಟಿಗೆ ಇಲ್ಲ. ಮತ್ತೆ ಶಿಫ್ಟಿಂಗ್ ಚಾರ್ಜ್ ಹಾಕುತ್ತಾರೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಿನಿವಾಟ್‌ರ್ ಸಪ್ಲೈಗೆ 50,000 ರೂಪಾಯಿಗಳು, ಪೈಪ್ ವಾಟರ್ ಸಪ್ಲೈಗೆ ಒಂದು ಲಕ್ಷ ರೂಪಾಯಿಗಳು ಇದೆ. ಶಿಫ್ಟಿಂಗ್ ಚಾರ್ಜಸ್ 15 ಸಾವಿರ

ರೂಪಾಯಿಗಳನ್ನು ಕೊಡಬೇಕು. ಸ್ಕೇರ್ಸಿಟಿಗಾದರೆ ಮಾತ್ರ ಇವತ್ತು ಡೆಪಾಸಿಟ್ ಇಲ್ಲ. ಸ್ಕೇರ್ಸಿಟಿ ಹಣದಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಯಬಾರದೆಂದು ಸರ್ಕಾರದವರು ನಿಯಮಾವಳಿಗಳನ್ನು ರೂಪಿಸಿದ್ದೀರಿ, ಮಾನ್ಯ ಶ್ರೀನಿವಾಸಗೌಡರು ನಾನು ಹೇಳುವುದನ್ನು ಕೇಳಿಸಿಕೊಳ್ಳಬೇಕು, ಏಕೆಂದರೆ ಅವರೇ ಇದಕ್ಕೆ ಉತ್ತರ ಕೊಡಬೇಕು. ಈಗ ಅವರು ರೂರಲ್ ಡೆವೆಲಪ್‌ಮೆಂಟ್ ಮಿನಿಸ್ಟರ್ ಹತ್ತಿರ ಮಾತನಾಡುತ್ತಿದ್ದಾರೆ. ಸ್ಕೇರ್ಸಿಟಿಯಲ್ಲಿ ಹಣ ಕೊಡುತ್ತೇವೆ ಎಂದು ಹೇಳಿದ್ದಾರೆ. ಹಣ ಕೊಡುತ್ತೀರಿ ನೀವು ನಾವು ಇಲ್ಲವೆನ್ನುವುದಿಲ್ಲ. ಆದರೆ ನೀವು ಏನು ನಿಯಮಾವಳಿಯನ್ನು ರೂಪಿಸಿದ್ದೀರಾ? ಸ್ಕೇರ್ಸಿಟಿಯಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವ ಹಾಗಿಲ್ಲ ಎಂದು ಹೇಳಿದ್ದೀರಿ. ಹಾಗಾಗಿ ನೀವು ಕರೆಂಟ್ ಚಾರ್ಜ್ ಕೊಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ನೀವು ಎಷ್ಟು ಬುದ್ಧಿವಂತರು ನೋಡಿ. ಮಿನಿ ವಾಟರ್ ಸಪ್ಲೈ ಆದರೆ ಕರೆಂಟ್ ಚಾರ್ಜ್ ಕಟ್ಟಬೇಕು, ಸ್ಕೇರ್ಸಿಟಿಯಲ್ಲಿ ಇಲ್ಲ ಎಂದು ಹೇಳುತ್ತೀರಿ.

**ಶ್ರೀ ಕೆ. ಶ್ರೀನಿವಾಸಗೌಡ** : ನೀವು ಬೋರ್‌ವೆಲ್ಲನ್ನು ಯಾರಿಂದಾದರೂ ಡ್ರಿಲ್ ಮಾಡಿಸಿ. ಅದರ ಪೈಪ್, ಮೋಟರ್, ಪಂಪ್ ಇವುಗಳಿಗೆ ಕಟ್ಟುವಂಥ ದುಡ್ಡು ಕಟ್ಟಬೇಕಾಗಿಲ್ಲ. ಏಕೆಂದರೆ, ಸ್ಕೇರ್ಸಿಟಿ ಪರ್ಪಸ್‌ಗೋಸ್ಕರವೇ ಆ ಬೋರ್‌ವೆಲ್ಲನ್ನು ತೋಡಿಸಿರುವುದು. ಅದಕ್ಕೆ ಏನೂ ಕೊಡಬೇಕಾಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು, ಅವುಗಳಿಗೆ ಅಂದರೆ ಮಿನಿ ವಾಟರ್ ಸಪ್ಲೈ ಸ್ಕೀಂಗೆ 50 ಸಾವಿರ ರೂಪಾಯಿ ಡೆಪಾಸಿಟ್ ಕೊಡಬೇಕು, ಮತ್ತು ಎನ್.ಆರ್. ಡಬ್ಲ್ಯೂ. ಎಸ್.ಗೆ ಒಂದು ಲಕ್ಷ ರೂಪಾಯಿ ಡೆಪಾಸಿಟ್ ಕೊಡಬೇಕು. ಅದನ್ನು ನಾನು ಒಪ್ಪುತ್ತೇನೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್** : ಎಗ್ಸಿಸ್ಟಿಂಗ್ ಎನ್.ಆರ್. ಡಬ್ಲ್ಯು.ಎಸ್. ಸ್ಕೀಂನಲ್ಲಿ ಕೊರೆದ ಬೋರ್‌ವೆಲ್ ಫೇಲ್ ಆಗಿದ್ದು, ಹೊಸ ಬೋರ್‌ವೆಲ್ ಡ್ರಿಲ್ ಮಾಡಿದರೆ, ಅದಕ್ಕೆ ಏನು ಮಾಡಬೇಕು?

**ಶ್ರೀ ಕೆ. ಶ್ರೀನಿವಾಸಗೌಡ** : ಅದನ್ನೂ ಕೂಡ ಈಗ ಸ್ಕೇರ್ಸಿಟಿಗೆ ತೆಗೆದುಕೊಳ್ಳಲು ಹೇಳಿದ್ದೇವೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಇದು ಇಡೀ 224 ಜನರ ಕ್ಷೇತ್ರಗಳಿಗೆ ಸಂಬಂಧಪಟ್ಟದ್ದು. ಮಂತ್ರಿಗಳಾಗಿ ನೀವೇನಾದರೂ ಉಪಯೋಗ ಮಾಡಿಕೊಂಡಿದ್ದೀರೇನೋ ನನಗೆ ಗೊತ್ತಿಲ್ಲ. ಕಳೆದ 7–8 ತಿಂಗಳಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ತಗೆದಿದ್ದೀರಿ? ನೀರು ಬಂದಿದೆಯೇ? ಈಗತಾನೇ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದಂತೆ, 100ಕ್ಕೆ 30ರಷ್ಟು ಪೈಪ್ಡ್ ವಾಟರ್ ಸಪ್ಲೈ ನಿಂತುಹೋಗಿವೆ. ಟ್ಯಾಂಕ್ ಇದೆ, ಆದರೆ ಬೋರ್‌ವೆಲ್ ಫೇಲ್ ಆಗಿದೆ. ಪಕ್ಕದಲ್ಲಿ ಒಂದು ಬೋರ್‌ವೆಲ್ ತೆಗೆಯಿರಿ ಎಂದರೆ ಜಿಲ್ಲಾ ಪಂಚಾಯಿತಿ ದುಡ್ಡಿಲ್ಲ, ತಾಲ್ಲೂ ಪಂಚಾಯಿತಿಯಲ್ಲಿ ದುಡ್ಡಿಲ್ಲ, ಗ್ರಾಮ ಪಂಚಾಯಿತಿಯಲ್ಲಿ ದುಡ್ಡಿಲ್ಲ. ಮುಂದಕ್ಕೆ ಏನು ಮಾಡುತ್ತೀರಿ ಎನ್ನುವುದು ಬೇರೆ ವಿಷಯ. ಕಳೆದ 8 ತಿಂಗಳಿಂದ ಈ ನಿಮಿಷದವರೆಗೆ, ನಾವು ಬೋರ್‌ವೆಲ್ ತೆಗೆಸುತ್ತಿದ್ದೇವೆ ಯಡಿಯೂರಪ್ಪನವರೇ, ನಮಗೆ ಅನುಕೂಲವಾಗಿದೆ ಎಂದು ನಿಮ್ಮ ಆಡಳಿತ ಪಕ್ಷದ ಒಬ್ಬರಿಂದ ಹೇಳಿಸಿ ಬಿಡಿ ಸಾಕು. ಇಲ್ಲಿ ನಾವು ಸುಮ್ಮನೆ ಚರ್ಚೆ ಮಾಡುತ್ತಿದ್ದೇವೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಶ್ರೀನಿವಾಸಗೌಡರು ಹೇಳಿದುದ್ದನ್ನು ನಾನು ಒಪ್ಪುತ್ತೇನೆ. ನೀವು ಸ್ಕೇರ್ಸಿಟಿಯಿಲಿ ಮೋಟಾರ್, ಪೈಪ್‌ಲೈನ್ ಎಲ್ಲವನ್ನೂ ಮಾಡಿಸಿ ಎಂದು ಹೇಳಿದರೆ

ಅಲ್ಲಿ ಪವರ್ ಸಪ್ಲೈ ಇರುವುದಿಲ್ಲ. ಆದರೆ ಆ ಬೋರ್‌ವೆಲ್ ಅನ್ನು ಕೊರೆಸಿರತಕ್ಕಂಥಾದ್ದು ಯಾರು? ಯಾವ ಸ್ಕೀಂನಲ್ಲಿ ಕೊರೆಯುತ್ತೀರಿ? ಸ್ಕೇರ್ಸಿಟಿಯಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವುದಿಲ್ಲ. ಕೊರೆದಿರತಕ್ಕಂಥ ಬೋರ್‌ವೆಲ್‌ಗಳಿಗೆ ಪೈಪ್, ಮೋಟಾರನ್ನು ಸ್ಕೇರ್ಸಿಟಿಯಲ್ಲಿ ಸಪ್ಲೈ ಮಾಡುತ್ತೇವೆ ಎಂದು ಹೇಳುತ್ತೀರಿ. ಆದರೆ ಬೆಸ್ಕಾಂ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಸ್ಕೇರ್ಸಿಟಿಯಲ್ಲಿ ಅಪ್ರೂವ್ ಆಗಿರತಕ್ಕಂಥ ಬೋರ್‌ವೆಲ್‌ಗಳ ಲಿಸ್ಟ್‌ನ್ನು ಕೊಡಬೇಕೆಂದು ಹೇಳುತ್ತಾರೆ. ಡಿ.ಸಿ.ಯವರು ಅಧ್ಯಕ್ಷರಾಗಿರುವುದರಿಂದ, ಡಿ.ಸಿ.ಯವರು ಇವರಿಗೆ ಪಟ್ಟಿ ಕೊಡಬೇಕು. ಯಾವ ಯಾವ ಬೋರ್‌ವೆಲ್‌ಗಳನ್ನು ಸ್ಕೇರ್ಸಿಟಿಯಲ್ಲಿ ಕೊರೆಸಿದ್ದೇವೆ ಎನ್ನುವ ಪಟ್ಟಿಯನ್ನು ಡಿ.ಸಿ.ಯವರು ಕೊಟ್ಟಾಗ ಮಾತ್ರ ಅವರು ಅದನ್ನು ಕನ್ಸಿಡರ್ ಮಾಡುತ್ತಾರೆ. ಡಿ.ಸಿ.ಯವರು ಲಿಸ್ಟ್‌ನಲ್ಲಿ ಇಲ್ಲದೇ ಇರತಕ್ಕಂಥಾದ್ದನ್ನು ಅವರು ಕನ್ಸಿಡರ್ ಮಾಡುವುದಿಲ್ಲ. ಇದು ನಿಜವಲ್ಲವೇ? ಆಗ ನಾವೇನು ಮಾಡಬೇಕೆಂದು ಹೇಳಿ. 50 ಸಾವಿರ ರೂಪಾಯಿ ಡೆಪಾಸಿಟ್ ಎಲ್ಲಿಂದ ತಂದು ಕೊಡಬೇಕು? 15 ಸಾವಿರ ರೂಪಾಯಿ ಶಿಫ್ಟಿಂಗ್ ಚಾರ್ಜ್ ಎಲ್ಲಿಂದ ತಂದು ಕೊಡಬೇಕು? ಹೋಗಲಿ, 50 ಸಾವಿರ ರೂಪಾಯಿ ಡೆಪಾಸಿಟ್, 15 ಸಾವಿರ ರೂಪಾಯಿ ಶಿಫ್ಟಿಂಗ್ ಚಾರ್ಜ್ ಕೊಡೋಣ. ಝಡ್.ಪಿ. ಯವರಿಗೆ ನೀವು ಹಣವನ್ನು ಬಿಡುಗಡೆ ಮಾಡಿ. ಪವರ್ ಸಪ್ಲೈಗೆ ಎಂದು ನೀವು ಝಡ್.ಪಿ.ಯವರಿಗೆ ಒಂದೇ ಒಂದು ರೂಪಾಯಿಯನ್ನೂ ಬಿಡುಗಡೆ ಮಾಡುವುದಿಲ್ಲ. ಪವರ್ ಸಪ್ಲೈ ಮಾಡಲು ಡೆಪಾಸಿಟ್ ಕೊಡಲು ನೀವು ಅವರಿಗೆ ಹಣ ಕೊಡುವುದಿಲ್ಲ. ಡೆಪಾಸಿಟ್ ಮಾಡಿ ಎಂದರೆ ಅವರಿಗೆ ಹೇಗೆ ಸಾಧ್ಯವಾಗುತ್ತದೆ? ಅದು ಸಾಧ್ಯವಿಲ್ಲ. ಇವತ್ತು ಅದರ ಪರಿಣಾಮ ಏನಾಗಿದೆ ಎಂದರೆ, ಮೂರುವರೆ ಕೋಟಿ ಜನಸಂಖ್ಯೆ ಇರತಕ್ಕಂಥ ಹಳ್ಳಿಗಳಿಗೆ ನೀವು ಇವತ್ತು ಕೊಡುತ್ತಿರತಕ್ಕಂಥ ಹಣ ಪರ ಹೆಡ್ 40 ರೂಪಾಯಿ ಆಗುತ್ತದೆ. ಹೀಗಿರುವಾಗ, ಕುಡಿಯುವ ನೀರಿನ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡುತ್ತೀರಿ ಹೇಳಿ. ಆದ್ದರಿಂದ, ಸಭಾಧ್ಯಕ್ಷರೇ, ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡತಕ್ಕಂಥದ್ದು, ಕೇಳತಕ್ಕಂಥಾದ್ದು, ಏನೆಂದರೆ, ಅವರಿಗೆ ಪ್ರಾಮಾಣಿಕವಾಗಿ ಹಳ್ಳಿಗಾಡಿನ ಜನರ ಬಗ್ಗೆ ಕಾಳಜಿ ಇದ್ದರೆ, ಒಂದೊಂದು ಕ್ಷೇತ್ರಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕು, ಬೋರ್‌ವೆಲ್ ಕೊರೆಸತಕ್ಕಂಥ ಪ್ರೋಸೆಸ್‌ನಲ್ಲಿ ಶಾಸಕರಿಗೂ ಕೂಡ ತೀರ್ಮಾನ ತೆಗೆದುಕೊಳ್ಳತಕ್ಕಂಥ ಅಧಿಕಾರವನ್ನು ಕೊಡಬೇಕು. ಇಲ್ಲದಿದ್ದರೆ, ಏನಾಗುತ್ತದೆಂದರೆ, ಜನರು ನಮಗೆ ನೀರು ಕೇಳುತ್ತಾರೆ. ನಮ್ಮ ಹತ್ತಿರ ಹಣವಿಲ್ಲ, ನಾವು ಏನೂ ಜವಾಬು ಹೇಳಲಿಕ್ಕೆ ಆಗುವುದಿಲ್ಲ. ಆ ರೀತಿಯಲ್ಲಿ ತಕ್ಷಣವೇ ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಡೆಪಾಸಿಟ್ ತೆಗೆದುಕೊಳ್ಳತಕ್ಕಂಥಾದ್ದನ್ನು ನಿಲ್ಲಿಸಬೇಕು ಅಥವಾ ಸರ್ಕಾರದವರು ಬೇರೆ ಏನಾದರೂ ಮೆಕಾನಿಸಂಅನ್ನು ಕಂಡು ಹಿಡಿದು, ಅವರಿಗೆ ಹಣ ತುಂಬತಕ್ಕಂಥ ಕೆಲಸವನ್ನಾದರೂ ಮಾಡಬೇಕು. ಬೋರ್‌ವೆಲ್‌ಗಳನ್ನು ಕೊರೆಸಿ 3–4 ತಿಂಗಳುಗಳಾಗಿದೆ. ಕರೆಂಟ್ ಚಾರ್ಜಿಗೆ ಡೆಪಾಸಿಟ್ ಮಾಡಿಲ್ಲ ಎಂದು ಕರೆಂಟ್ ಕೊಡುತ್ತಿಲ್ಲ. ಇಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ತಕ್ಷಣ ಇದನ್ನು ಪರಿಹಾರ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಅಧ್ಯಕ್ಷರು** : ಈಗ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು. ತಾವು ಮಾತನಾಡಿ, ಬೇಗ ಮುಗಿಸಬೇಕು ಹೆಗ್ಡೆಯವರೇ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ)** : ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಇದೇ ಸಂದರ್ಭದಲ್ಲಿ ನಾವು ನಮ್ಮ ವಿಧಾನಸಭಾ ಚುನಾವಣೆಗಾಗಿ ಜನಗಳ ಬಳಿಗೆ ಹೋಗಿದ್ದೆವು. ಆಗ

ಸಹ, ನಾವು ಮನೆಮನೆಗೆ ಹೋದಾಗ ಕುಡಿಯುವ ನೀರಿನ ಸಮಸ್ಯೆ ಇತ್ತು. ಈ ವರ್ಷ, ಪುನಃ ಇದೇ ಸಮಯದಲ್ಲಿ ಗ್ರಾಮ ಪಂಚಾಯಿತಿಯ ಚುನಾವಣೆಗಾಗಿ ಹೋಗುವ ಪರಿಸ್ಥಿತಿ ಇದೆ. ಪುನಃ ನಾವು ಮನೆಮನೆಗೆ ಹೋದರೆ, ಅವರು ಇದನ್ನೇ ಅಂದರೆ ಕುಡಿಯುವ ನೀರು ಕೊಡಿ ಎಂದೇ ಕೇಳುತ್ತಾರೆ. ಈ ಸಂದರ್ಭದಲ್ಲಿ ಚುನಾವಣೆಗಳಾದರೆ ಎರಡು ಸಮಸ್ಯೆಗಳು ಬರುತ್ತವೆ. ಒಂದು– ಕುಡಿಯುವ ನೀರಿನ ಸಮಸ್ಯೆ. ಇನ್ನೊಂದು–ಬೇರೆ ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡಲೂ ಆಗುವುದಿಲ್ಲ. ಸಾಮಾನ್ಯವಾಗಿ, ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಎಲ್ಲಾ ಚುನಾವಣೆಗಳು ಬರುವಂಥಾದ್ದು ಆಗುತ್ತದೆ. ಈ ಸಮಯದಲ್ಲಿ ಯಾವುದೇ ಚುನಾವಣೆಗಳು ಬಂದರೆ ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತವೆ. ಏಕೆಂದರೆ ಕೆಲಸಗಳಿಗೆ ಹಣ ಬಿಡುಗಡೆಯಾಗುವುದು ಈಗ, ಕೆಲಸ ಮಾಡಲು ಅವಕಾಶವಿರುವಂಥಾದ್ದು ಈಗ. ಆದ್ದರಿಂದ, ಈ ವಿಷಯದಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಬೇಕಾಗುತ್ತದೆ. ಇನ್ನು, ವಿಕೇಂದ್ರೀಕರಣವನ್ನು ನಾನು ಒಪ್ಪುತ್ತೇನೆ. ಅಧಿಕಾರವನ್ನು ವಿಕೇಂದ್ರೀಕರಣ ಮಾಡಲು ನಾವು ಇದೇ ಸದನದಲ್ಲಿ ಒಪ್ಪಿದ್ದೇವೆ. ಆದರೆ ಅಧಿಕಾರ ವಿಕೇಂದ್ರೀಕರಣ ಮಾಡಿ, ಅವರಿಗೆ ಅಧಿಕಾರವನ್ನೇ ಕೊಡದಿದ್ದರೆ, ಮಾನ್ಯ ಪಾಟೀಲ್‌ರವರು ಹೇಳಿದಂತೆ ಉಗುರೂ ಇಲ್ಲ, ಹಲ್ಲೂ ಇಲ್ಲದಂಥ ಸಂಸ್ಥೆಗಳನ್ನು ಮಾಡಿ ಕೂಡಿಸಿದ್ದೇವೆ, ಈಗ ಅಧಿಕಾರ ನಡೆಸುತ್ತಾ ಇರತಕ್ಕಂಥಾದ್ದು ಸಂಸ್ಥೆಗಳಲ್ಲ, ಅಧಿಕಾರಿಗಳ ಕೈಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ. ಅದನ್ನು ಬದಲಾವಣೆ ಮಾಡಿ ಸಂಸ್ಥೆಗಳಿಗೇ ಅಧಿಕಾರ ಕೊಡುವಂಥಾದ್ದನ್ನು ಮಾಡಬೇಕು, ಮಾನ್ಯ ಪಾಟೀಲರು ಇನ್ನೊಂದು ಮಾತನ್ನು ಹೇಳಿದರು. ಇಂಜಿನಿಯರುಗಳನ್ನು ಟ್ರಾನ್ಸ್‌ಫರ್ ಮಾಡಿಸುತ್ತೇವೆ ಎಂದು ಹೇಳಿದರು. ನನ್ನ ಕ್ಷೇತ್ರದಲ್ಲಿ ಕೆಲವು ಇಂಜಿನಿಯರ್‌ಗಳು 10–12 ವರ್ಷಗಳಿಂದ ಖಾಯಂ ಆಗಿ ಇದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಇಂಜಿನಿಯರುಗಳ ಟ್ರಾನ್ಸ್‌ಫರ್ ಅಲ್ಲ, ಇಂಜಿನಿಯರ್‌ಗಳನ್ನು ಸೆಲೆಕ್ಟೆಡ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಹೈರ್ ಮಾಡಿಕೊಳ್ಳಬೇಕು ಎಂದು ಸರ್ಕ್ಯುಲರ್ ಇದೆ. ನಿಮ್ಮ ವ್ಯವಸ್ಥೆಯಲ್ಲಿ ಇಂಜಿನಿಯರುಗಳನ್ನು ಅಪಾಯಿಂಟ್ ಮಾಡುವ ಪ್ರಶ್ನೆಯೇ ಉಳಿದಿಲ್ಲ. ಪಂಚಾಯಿತಿಯವರು ಇಂಥಿಂಥ ಸಂಸ್ಥೆಗಳಲ್ಲಿ ಇಂಜಿನಿಯರುಗಳನ್ನು ಕರಾರಿನ ಮೇಲೆ ತೆಗೆದುಕೊಳ್ಳಿ ಎಂದು ಕೂಡ ಸರ್ಕ್ಯುಲರ್ ಹೊರಡಿಸಿದ್ದೀರಿ. ಇದೆಲ್ಲಾ ಮುಂದೆ ಒಂದು ದಿವಸ ಎಲ್ಲಿಗೆ ಹೋಗುತ್ತದೆ?

**ಅಧ್ಯಕ್ಷರು** : ಮಾಧುಸ್ವಾಮಿಯವರೇ, ಜನತೆಯ ಕೈಗೆ ಅಧಿಕಾರ ಎಂದು ಹೇಳಿ ಅಧಿಕಾರವನ್ನು ಕೆಳಮಟ್ಟದವರೆಗೆ ಕೊಟ್ಟಿದ್ದಾರೆ. ನೀರಿನ ವಿಚಾರದಲ್ಲಿ ಶಾಸಕರನ್ನೂ ಜನ ಕೇಳುತ್ತಾರೆ ಎನ್ನುವುದನ್ನು ಒಪ್ಪುತ್ತೇನೆ. ಆದರೆ ಸಮನ್ವಯವಾಗಿ ಎಲ್ಲಾ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಯಾವ ರೀತಿಯಲ್ಲಿ ನಿವಾರಣೆ ಮಾಡಬೇಕು ಎನ್ನುವುದರ ಬಗ್ಗೆ ಪ್ರಮುಖವಾಗಿ ಒಂದು ತೀರ್ಮಾನಕ್ಕೆ ಬರಬೇಕೇ ಹೊರತು, ಅಧಿಕಾರ ಇವರಲ್ಲಿರಬೇಕು, ಅವರಲ್ಲಿರಬಾರದು ಅಥವಾ ಅವರಲ್ಲಿದ್ದರೆ ತೊಂದರೆಯಾಗುತ್ತದೆ, ಇವರಲ್ಲಿದ್ದರೆ ತೊಂದರೆಯಾಗುತ್ತದೆ ಎನ್ನುವುದು ಸರಿಯಲ್ಲ. ನನಗೆ ಗೊತ್ತಿರುವ ಹಾಗೆ, ಹಿಂದೆ ಮಂಡಲ ಪಂಚಾಯಿತಿಗಳಿದ್ದಾಗ ಈಗಿನಂತೆ ತಾಲ್ಲೂಕು ಪಂಚಾಯಿತಿ ಇರಲಿಲ್ಲ. ಒಂದು ಅಡ್ವೈಸರಿ ಕಮಿಟಿ ಇತ್ತು. ಶಾಸಕರ ಅಧ್ಯಕ್ಷತೆಯಲ್ಲಿದ್ದಂಥ ಈ ಕಮಿಟಿಯಲ್ಲಿ ಪಂಚಾಯಿತಿಯ ಪ್ರಧಾನರುಗಳು, ಮತ್ತು ಜಿಲ್ಲಾ ಪರಿಷತ್ತಿನ ಸದಸ್ಯರುಗಳು ಎಲ್ಲರೂ ಇದ್ದರು. ಆಗ ಸಮನ್ವಯ ಬಹಳ ಚೆನ್ನಾಗಿತ್ತು. ಆ ರೀತಿಯ ಯಾವುದಾದರೂ ಮೆಕಾನಿಸಂಅನ್ನು ಯೋಚನೆ ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಅಧ್ಯಕ್ಷರೇ, ನಾವು ಕೇಳಿದ್ದೂ ಅಷ್ಟನ್ನೇ, ಒಂದು ಟಾಸ್ಕ್ ಫೋರ್ಸ್ ಮಾಡಿ ಅದಕ್ಕೆ ಎಂ.ಎಲ್.ಎ.ಗಳನ್ನು ಅಧ್ಯಕ್ಷರನ್ನಾಗಿ ಮಾಡಿ. ಎಲ್ಲಾ ಪಂಚಾಯಿತಿಗರೂ ಕುಳಿತುಕೊಂಡಾಗ, ಏನು ಸಮಸ್ಯೆಯಿದೆ ಎನ್ನುವುದನ್ನು ಹೇಳುತ್ತಾರೆ, ಅದನ್ನು ಪರಿಹಾರ ಮಾಡೋಣ ಎಂದೇ ನಾವೂ ಕೇಳಿರುವುದು.

**ಅಧ್ಯಕ್ಷರು** : ಆ ದಿಕ್ಕಿನಲ್ಲಿ ಯೋಚನೆ ಮಾಡಿದರೆ ಒಳ್ಳೆಯದು.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಯಾವ ದಿಕ್ಕಿನಲ್ಲಿ ಈಗ ಯೋಚನೆ ಮಾಡಿದರೂ ಹಣ ಇಲ್ಲ. ಹಣ ಇಲ್ಲ. ಹಣ ಇಲ್ಲದೇ ಇರತಕ್ಕಂಥ ಸಮಯದಲ್ಲಿ ಕಮಿಟಿಗಳನ್ನು ಮಾಡಿ ನೀವು ಏನು ಮಾಡುತ್ತೀರಿ? ಒಂದು ಜಿಲ್ಲೆಗೆ ಒಂದು ಕೋಟಿ ರೂಪಾಯಿ ಕೊಡಿ ಎಂದರೆ ಆ ಕಮಿಟಿಗಳವರು ಎಲ್ಲಿಂದ ತಂದುಕೊಡುತ್ತಾರೆ? ಪ್ರಪೋಸಲ್ ಇರಬಹುದು, ಆದರೆ ಇದುವರೆಗೂ ಹಣ ಕೊಟ್ಟಿಲ್ಲ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಕುಡಿಯುವ ನೀರಿನ ವ್ಯವಸ್ಥೆಯನ್ನು ಜಾರಿಗೆ ತರುವಂಥಾದ್ದು ಜಿಲ್ಲಾ ಪಂಚಾಯಿತಿ. ಅದನ್ನು ನಡೆಸಿಕೊಂಡು ಹೋಗುವಂಥಾದ್ದು ಗ್ರಾಮ ಪಂಚಾಯಿತಿಗೆ ಸೇರಿದ್ದು. ಗ್ರಾಮ ಪಂಚಾಯಿತಿಯವರು ಏನೇನು ಹೇಳುತ್ತಾರೋ, ಅದನ್ನು ಜಿಲ್ಲಾ ಪಂಚಾಯಿತಿಯವರು ಅವರಿಗೆ ಏನೇನು ಬೇಕೋ ಅದನ್ನು ಮಾಡುತ್ತಿದ್ದರು. ಹಸ್ತಾಂತರ ಮಾಡಿದಾಗ, ಅದನ್ನು ನಡೆಸಿಕೊಂಡು ಹೋಗಲು ಗ್ರಾಮ ಪಂಚಾಯಿತಿಯವರಿಗೆ ಆಗುತ್ತಿರಲಿಲ್ಲ. ಇವತ್ತು ನಮ್ಮ ಪರಿಸ್ಥಿತಿಯೂ ಹಾಗೆಯೇ ಆಗಿದೆ. ಒಂದು ಟ್ಯಾಪ್ ಹಾಕಬೇಕು ಎಂದರೂ ನಮ್ಮಿಂದ ಆಗುತ್ತಿಲ್ಲ. ಪ್ರತಿಯೊಬ್ಬ ಜನರೂ ಬಂದು ನಮ್ಮನ್ನು ಕೇಳುತ್ತಾರೆ. ಅದಕ್ಕೋಸ್ಕರವಾಗಿ, ಅಧಿಕಾರವನ್ನು ಗ್ರಾಮ ಪಂಚಾಯಿತಿಯಿಂದ ತೆಗೆದು ನಮಗೆ ಕೊಡಿ, ಜಿಲ್ಲಾ ಪಂಚಾಯಿತಿಯಿಂದ ತೆಗೆದು ನಮಗೆ ಕೊಡಿ ಎಂದು ಕೇಳುವುದಲ್ಲ. ಇವತ್ತು ಅಧಿಕಾರ ವಿಕೇಂದ್ರೀಕರಣ ಮಾಡಿದಂಥ ಸಂದರ್ಭಗಳಲ್ಲಿ ಸರಿಯಾದ ವ್ಯವಸ್ಥೆ ಜಾರಿಗೆ ಬರುವವರೆಗೆ ಯಾವ ರೀತಿ ನಡೆಸಿಕೊಂಡು ಹೋಗಬೇಕು ಎನ್ನುವ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕಾಗಿದೆ. ಅಧಿಕಾರಿಗಳು ಯಾರ ಮಾತು ಕೇಳುತ್ತಾರೆ, ಯಾರ ಹತ್ತಿರ ಸ್ವಲ್ಪ ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಎನ್ನುವುದನ್ನು ನೋಡಿ ಪ್ರಯತ್ನವನ್ನು ಮಾಡಬೇಕೇ ಹೊರತು, ಕೇವಲ ಇವತ್ತು ನೇರವಾಗಿ ಚುನಾವಣೆಗೆ ಹೋದಾಗ ಅಲ್ಲಿ ಗ್ರಾಮಪಂಚಾಯತಿಯ ಬಾಡಿ ಇರುವುದಿಲ್ಲ ಅಲ್ಲಿ ಕಾರ್ಯದರ್ಶಿ ಮಾಡಬೇಕು. ಅಲ್ಲಿ ಒಬ್ಬ ಕಾರ್ಯದರ್ಶಿ ಎರಡು ಗ್ರಾಮ ಪಂಚಾಯತಿಗೆ ಇದ್ದಾಗ ಅವನು ಏನು ಮಾಡುತ್ತಾನೆ? ಇವತ್ತು ನಮ್ಮ ಜಿಲ್ಲಾಪಂಚಾಯತ್‌ನಿಂದ ಯಾವ ರೀತಿಯಲ್ಲಿ ಯೋಜನೆ ರೂಪಿಸಿದೆ ಎನ್ನುವ ಒಂದು ವರದಿಯನ್ನು ಕಳುಹಿಸಿದ್ದಾರೆ. ಒಟ್ಟು ಜಿಲ್ಲೆಗೆ 81 ಕಾಮಗಾರಿಗಳು ಸಾಕಂತೆ. ನನ್ನ ಕ್ಷೇತ್ರಕ್ಕೆ 14 ಕಾಮಗಾರಿಗಳನ್ನು ಕೊಟ್ಟಿದ್ದಾರೆ. ಈ ಬೇಸಿಗೆಯಲ್ಲಿ ನಮ್ಮ ಕಡೆ ಮಳೆ ಬರುತ್ತದೆ. ಮಳೆ ಬಂದರೆ porous nature of the soil ನಿಂದಾಗಿ ಸಂಪೂರ್ಣ ಮಳೆಯ ನೀರು ಸಮುದ್ರಕ್ಕೆ ಹೋಗುತ್ತದೆ. ನಾನು ಇದನ್ನು ಹಲವಾರು ಬಾರಿ ಈ ಸದನದಲ್ಲಿ ಹೇಳಿದ್ದೇನೆ. ನಾವೆಲ್ಲಾ ಹೇಳಿದರು ಕೂಡ ನಿಮ್ಮಲ್ಲಿ ಸಾಕಷ್ಟು ಮಳೆಯಾಗಿದೆಯೆಂದು' ಇಲಾಖೆಯಿಂದ ಜಿಲ್ಲಾಧಿಕಾರಿಗಳ ಕಚೇರಿಯಿಂದ ವರದಿಯನ್ನು ತರಿಸಿಕೊಳ್ಳುತ್ತಾರೆ. ಮಳೆ ಆಗಿದೆ ಹೌದು, ಆದರೆ ನೀರು ಎಲ್ಲಿಗೆ ಹೋಗುತ್ತದೆ? ಆ ನೀರನ್ನು ತಡೆಯಲಿಕ್ಕೆ ಅಣೆಕಟ್ಟುಗಳನ್ನು ಮಾಡಿಲ್ಲ. ನೀರು ಸಂಪೂರ್ಣವಾಗಿ ಸಮುದ್ರಕ್ಕೆ ಹೋದಾಗ ನಮ್ಮಲ್ಲಿ ನೀರಿನ ಒರತೆ ಬರಬೇಕಾದರೆ ಮಲೆನಾಡಿನಲ್ಲಿ gradually ಮಳೆ ಬರಬೇಕಾಗುತ್ತದೆ. ಆ ಮಳೆ ಜಾಸ್ತಿ ಇಲ್ಲದಿದ್ದಾಗ ನಮ್ಮಲ್ಲಿ ಕುಡಿಯುವ ನೀರಿನ

ಸಮಸ್ಯೆ ಬೇಸಿಗೆಯಲ್ಲಿ ಇದ್ದೇ ಇದೆ. ಕಳೆದ ಬಾರಿ ನಾವೂ ಸಹ ಟ್ಯಾಂಕರ್‌ನಲ್ಲಿ ನೀರನ್ನು ಸಪ್ಲೈ ಮಾಡಿದ್ದೇವೆ. ಒಂದು ಕ್ಷೇತ್ರಕ್ಕೆ 14 ಕಾಮಗಾರಿಗಳು ಸಾಕೆಂದು ಜಿಲ್ಲಾಪಂಚಾಯತ್‌ನ ಅಧಿಕಾರಿಗಳು ವರದಿಯನ್ನು ಕೊಡುತ್ತಾರೆ. ಅದನ್ನು ನಂಬಿಕೊಂಡು ನಾವಿಲ್ಲಿ ಕುಳಿತುಕೊಳ್ಳುವುದು, ಸರ್ಕಾರದವರು ಅದನ್ನೇ ನಂಬಿಕೊಂಡು ಹಣವನ್ನು ಬಿಡುಗಡೆ ಮಾಡುವಂಥದ್ದು, ಈ ಜವಾಬ್ದಾರಿ ನಮ್ಮ ಮೇಲೆ ಹೊರಿಸುವಂಥದ್ದು ಅದು ಆಗಬಾರದು. ನೀವು ಒಂದೂ task force ಅನ್ನು ಮಾಡಿ. ಈ ಇಂಜಿನಿಯರ್ಸ್ ಬರಲಿ, ಜೊತೆಗೆ ಸ್ಥಳೀಯ ಸಂಸ್ಥೆಗಳವರು ನಾವೆಲ್ಲಾ ಒಟ್ಟಿಗೆ ಕ್ಷೇತ್ರಕ್ಕೆ ಹೋಗೋಣ. ಎಲ್ಲೆಲ್ಲಿ ಏನೇನು ಕಾಮಗಾರಿಗಳು ಆಗಬೇಕೆನ್ನುವಂಥದ್ದನ್ನು ಸ್ವಲ್ಪ ಪರಿಶೀಲನೆ ಮಾಡಿ ಜಾರಿಗೆ ತರುವಂಥದ್ದು ಆಗಬೇಕು.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ)** : ಮಾನ್ಯ ಅಧ್ಯಕ್ಷರೆ, ಎಲ್ಲರೂ ಅವರ ಜೊತೆಗೆ ಹಳ್ಳಿಗಳಿಗೆ ಹೋಗೋಣ ಎಂದು ಹೇಳುತ್ತಾರೆ. ನಿಮ್ಮ ಆರ್‌ಡಿಪಿಆರ್ ಕಾರ್ಯದರ್ಶಿಯವರು ಬಂದು ಮೀಟಿಂಗ್ ಮಾಡುತ್ತಾರೆ, ಎಲ್ಲಾ ಪಂಚಾಯತ್‌ನವರಿಗೆ ಅಧಿಕಾರ ಕೊಟ್ಟುಬಿಟ್ಟಿದ್ದೇವೆ. ಶಾಸಕರು ವಿರೋಧ ಮಾಡಿದರೂ ನಾವು ನಿಮಗೆ ಅಧಿಕಾರ ಕೊಟ್ಟುಬಿಟ್ಟಿದ್ದೇವೆಂದು ಹೇಳುತ್ತಾರೆ ಆ ಮನುಷ್ಯ ಎಷ್ಟು arrogance ಇರಬಹುದೆಂದು ಅರ್ಥಮಾಡಿಕೊಳ್ಳಿ. ಅವರು ಹೇಳಿರುವುದು ಟಿ.ವಿ.ಯಲ್ಲಿ ಬಂದಿದೆ. ಬೇಕಾದರೆ ತೆಗೆದು ನೋಡಿ.

**ಶ್ರೀ ಕೆ.ಆರ್. ರಮೇಶ್‌ಕುಮಾರ್(ಶ್ರೀನಿವಾಸಪುರ)** : ಸನ್ಮಾನ್ಯ ಅಧ್ಯಕ್ಷರೆ Commitment towards decentralization ಅನ್ನು ನೀವು distort ಮಾಡಿ ಈ ತರಹ ಹೇಳಿದರೆ ಹೇಗೆ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, Distort ಮಾಡತಕ್ಕಂಥ ಅವಶ್ಯಕತೆ ನನಗಿಲ್ಲ ಅವರು ಹೇಳಿದ್ದಾರೆ. ಟಿ.ವಿ.ಯಲ್ಲಿ ಬಂದಿದೆ. ಬೇಕಾದರೆ ಅದರ ರೆಕಾರ್ಡ್‌ನ್ನು ತರಿಸಿ ನೋಡಿ.

**(ಗೊಂದಲ)**

**SRI. J.C. MADHUSWAMY** : De-centralization ಎಂದರೆ collapse of the system ಎಂದು ಅರ್ಥವೇ? Entire collapse of the system ಅಂತ

**(ಗೊಂದಲ)**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಶಾಸಕರ ವಿರೋಧದ ಮಧ್ಯೆ ಕೂಡ ನಾವು ನಿಮಗೆ ಅಧಿಕಾರ ಕೊಡುತ್ತಿದ್ದೇವೆ, ಕುಡಿಯುವ ನೀರಿಗೆ ಹಣ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದನ್ನು ಹೇಳಲಿಲ್ಲವೆಂದು ಇವತ್ತು ಆ ಅಧಿಕಾರಿ ಇಲ್ಲಿ ಹೇಳಬಿಡಲಿ ನೋಡೋಣ.

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಆರ್‌ಡಿಪಿಆರ್ ಸ್ಕ್ರೆಟರಿಯವರು ನಮ್ಮಲ್ಲಿಗೂ ಸಹ ಬಂದಿದ್ದರು. ನಮ್ಮಲ್ಲೂ ಮೀಟಿಂಗೂ ಮಾಡಿದರು. ನಾವೆಲ್ಲರೂ ಹಾಜರಿದ್ದೆವು. ರೆವಿನ್ಯೂ ಕಮಿಷನರ್‌ರವರೂ ಸಹ ಬಂದಿದ್ದರು. ಅಲ್ಲಿ ಯಾವ ಸಮಸ್ಯೆ ಸಹ ತಲೆದೋರಲಿಲ್ಲವಲ್ಲಾ. ಅವತ್ತು ಇದೇನೂ ಬರಲಿಲ್ಲವಲ್ಲಾ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಆ ರೀತಿ ಹೇಳಲಿಲ್ಲವೆಂದು ಅವರು ಹೇಳಲಿ ನೋಡೋಣ. ಅವರು ಹೇಳಿರುವುದು ಟಿ.ವಿ.ಯಲ್ಲಿ ಬಂದಿರುವುದನ್ನು ನಾವೆಲ್ಲಾ ನೋಡಿದ್ದೇವೆ.

**ಶ್ರೀ ಹೆಚ್.ಸಿ. ಮಹದೇವಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)** : ಮಾನ್ಯ ಅಧ್ಯಕ್ಷರೆ, ಕಾರ್ಯದರ್ಶಿಗಳು ಹೊಸದಾಗಿ ಯೋಜನೆಗಳನ್ನು ಅಥವಾ ಪಾಲಿಸಿಗಳನ್ನು ಅನೌನ್ಸ್ ಮಾಡುವುದಕ್ಕಾಗುವುದಿಲ್ಲ ಅಥವಾ ಹಾಗೆ ಮಾತನಾಡುವುದಕ್ಕಾಗುವುದಿಲ್ಲ. ನಾವು ಸಂವಿಧಾನದ ಕೆಳಗಡೆ ಕೆಲಸ ಮಾಡಲಿಕ್ಕೆ ಅವರಿಗೆ ಏನು ಅಧಿಕಾರ ಕೊಟ್ಟಿದ್ದೇವೆ ಅಷ್ಟಕ್ಕೆ ಸೀಮಿತ ಹೊರತು ಬೇರೆ ಆ ರೀತಿ ಮಾಡಲಿಕ್ಕೆ ಅವರಿಗೆ ಅಧಿಕಾರ ಇಲ್ಲ. ಅವರು ಒಬ್ಬ ನಿಷ್ಠಾವಂತ ಮತ್ತು ಪ್ರಾಮಾಣಿಕ ಅಧಿಕಾರಿ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಾನ್ಯ ಸಚಿವರೇ, ನಾನು ಅದನ್ನು ಇಲ್ಲಿ ನಿರೂಪಿಸುತ್ತೇನೆ. ಕ್ರಮ ತೆಗೆದುಕೊಳ್ಳುವುದಕ್ಕೆ ತಮಗೆ ಶಕ್ತಿ ಇದೆಯೇ ಎಂದು ಕೇಳುತ್ತಿದ್ದೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನೋಡಿ, ನೀವು ಸರ್ಟಿಫಿಕೇಟ್ ಕೊಡಲಿಕ್ಕೆ ನಾವು ಹೇಳುತ್ತಿಲ್ಲ. ನಾವು ನಿರೂಪಣೆ ಮಾಡುತ್ತೇವೆ. ನಿಮಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಶಕ್ತಿ ಇದೆಯೇ? ನಾವು ಇಲ್ಲಿ ಪ್ರೂವ್ ಮಾಡುತ್ತೇವೆ. ಕ್ರಮ ತೆಗೆದುಕೊಳ್ಳುತ್ತಾರೆಯೇ ಎನ್ನುವುದನ್ನು ಇವರು ಹೇಳಲಿ.

**(ಗೊಂದಲ)**

**ಅಧ್ಯಕ್ಷರು** : ಏಕೆ ಈ ತರಹ ಮಾತನಾಡುತ್ತಿದ್ದೀರಿ? ಒಬ್ಬರು ಮಾತನಾಡುತ್ತಿದ್ದಾಗ ಎಲ್ಲರೂ interfere ಆಗಿ ಗೊಂದಲ ಮಾಡುತ್ತಿದ್ದೀರಿ.

**(ಗೊಂದಲ)**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅವರು ಹೇಳಿರುವುದನ್ನು ನಾವು ಪ್ರೂವ್ ಮಾಡುತ್ತೇವೆ. ಟಿ.ವಿ. ರೆಕಾರ್ಡ್ ಇದೆ. ಕ್ರಮ ತೆಗೆದುಕೊಳ್ಳುತ್ತೀರಾ?

**ಅಧ್ಯಕ್ಷರು** : ಶ್ರೀ ಶ್ರೀರಾಮರೆಡ್ಡಿಯವರೆ, ದಯಮಾಡಿ ಕುಳಿತುಕೊಳ್ಳಬೇಕು. ಬಹಳಷ್ಟು ಸದಸ್ಯರು ಮಾತನಾಡಬೇಕೆಂದು ಚೀಟಿ ಕಳುಹಿಸುತ್ತಿದ್ದಾರೆ. ಇವತ್ತು ಈ ವಿಷಯದ ಮೇಲಿನ ಚರ್ಚೆ ಮುಗಿಯಬೇಕು.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ನೋಡಿ, ಅವರು ಆ ರೀತಿ ಸರ್ಟಿಫಿಕೇಟ್ ಕೊಡತಕ್ಕಂಥದ್ದು, ಅವರು ಹೇಳುವ ಉತ್ತರ ನೋಡಿ. ನಾವು ಪ್ರೂವ್ ಮಾಡುತ್ತೇವೆ, ಹಾಗಾದರೆ ಅವರು ಕ್ರಮ ತೆಗೆದುಕೊಳ್ಳುತ್ತಾರೋ ಕೇಳಿ. ಆ ಶಕ್ತಿ ಇದೆಯಾ?

**ಅಧ್ಯಕ್ಷರು** : ಬೇರೆ ಸದಸ್ಯರು ಮಾತನಾಡುತ್ತಿದ್ದಾಗ ನೀವು ಮಧ್ಯೆ ಬಂದು ಹಿರಿಯ ಸದಸ್ಯರಾಗಿ ನೀವು ಹೀಗೆ ಸಮಯವನ್ನು ಹಾಳು ಮಾಡಿದರೆ ಹೇಗೆ? ಈಗ ನೀರಿನ ವಿಚಾರಕ್ಕೆ ಸಂಬಂಧಿಸಿದಂತೆ ಮಾತ್ರ ಮಾತನಾಡಿ.

**ಶ್ರೀ ಕೆ.ಆರ್. ರಮೇಶ್ ಕುಮಾರ್** : ಮಾನ್ಯ ಅಧ್ಯಕ್ಷರೆ ಒಂದ್ನಿಮಿಷ, ನಾನು ಏನು ವಿನಂತಿ ಮಾಡಿಕೊಳ್ಳುತ್ತಿದ್ದೆ ಎಂದರೆ, ಶ್ರೀ ವಾಟಾಳ್‌ರವರು ಮಾತನಾಡುವಾಗ ಎಲ್ಲಾ ಹೇಳಿದರು. ಇತ್ತೀಚಿನ ದಿನಗಳಲ್ಲಿ ದಿನ ಕಳೆದಂತೆಲ್ಲಾ basic honesty ಇರತಕ್ಕಂಥವರು ಬಹಳ ಕಡಿಮೆಯಾಗುತ್ತಿದ್ದಾರೆ. ಪ್ರಾಮಾಣಿಕರು ಇಲ್ಲವೇ ಇಲ್ಲ. ಇಲ್ಲಿ ನಮ್ಮ ಕಾರ್ಯದರ್ಶಿಗಳಾಗಿರತಕ್ಕಂಥವರು ನಮ್ಮಲ್ಲಿಗೆ ವಿಸಿಟ್ ಮಾಡಿ ಕೆಲಸ ಮಾಡಿದ್ದಾರೆ. ಒಂದು ವೇಳೆ ಅವರಿಗೆ ಸ್ವಲ್ಪ ಹೆಚ್ಚು ಆಸಕ್ತಿ ವಿಕೇಂದ್ರೀಕರಣದಲ್ಲಿದೆ ಎಂದು ಇಟ್ಟುಕೊಳ್ಳೋಣ. ಪ್ರಾಮಾಣಿಕತೆಯಲ್ಲಿ ಕೊರತೆ ಇಲ್ಲ ಎಂದು ನಾವು ತಾವು ಎಲ್ಲಾ ಒಪ್ಪಿಕೊಳ್ಳುತ್ತೇವೆ. ನಾವು ಈ ಸದನದಲ್ಲಿ ಚರ್ಚೆ ಮಾಡುವ ವೇಳೆಗೆ ನಮ್ಮ

ವೈಮನಸ್ಸನ್ನೋ, ಆಕ್ರೋಶವನ್ನೋ ಆವೇಶವನ್ನೋ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಅವರ ಕಡೆಗೆ divert ಮಾಡಿದಾಗ ಏನಾಗುತ್ತದೆಂದರೆ, ನಿಜ, ಅವರು ಒಂದು ವೇಳೆ ಅಗತ್ಯ ಇಲ್ಲದೆ ಇರತಕ್ಕಂಥ ಆಸಕ್ತಿ ತೋರಿಸಿರಬಹುದು. ಪ್ರಾಮಾಣಿಕರಾಗಿರತಕ್ಕಂಥವರ ಉತ್ಸಾಹ ಕಡಿಮೆಯಾಗುತ್ತದೆ. ಅಪ್ರಾಮಾಣಿಕರಿಗೆ ಶಿಕ್ಷೆಯೇ ಇಲ್ಲ, ಇದರ ಮಧ್ಯೆ ಇರತಕ್ಕಂಥವರು ಇವರೂ ಸಹ ನಿರುತ್ಸಾಹರಾದರೆ ಸಂಪೂರ್ಣ ಅಪ್ರಮಾಣಿಕತೆ.....

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಶ್ರೀ ರಮೇಶ್‌ಕುಮಾರ್‌ರವರ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದೇನೆ. ಇವತ್ತು ಬೆಳಿಗ್ಗೆ ಅವರು ಅಧಿಕಾರಿಗಳ ಬಗ್ಗೆ ಮಾತನಾಡಿದ ವಿಧಾನ ಏನು? ನಾವು ಮಾತನಾಡಿದಾಗ ಮಾತ್ರ hurt ಆಗುತ್ತದೆ. ಅವರು ಮಾತನಾಡಿದಾಗ hurt ಆಗುವುದಿಲ್ಲವೇ? ಬೆಳಗ್ಗೆ ತಾವು ಮಾತನಾಡಿದಾಗ ಅಧಿಕಾರಿಗಳ ಬಗ್ಗೆ ಯಾವ ಭಾಷೆಯನ್ನು ಉಪಯೋಗಿಸಿದಿರಿ? ಯಾವ ರೀತಿ ಮಾತನಾಡಿದಿರಿ? ಇವತ್ತು ನಾವು ಹೇಳಿದರೆ, ಮಾತನಾಡಿದರೆ ಮಾತ್ರ as prsion create ಆಗುತ್ತದೆಯೇ?

**ಅಧ್ಯಕ್ಷರು** : ದಯಮಾಡಿ ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿ. ಶ್ರೀ ಹೆಗ್ಡೆಯವರೆ, ದಯಮಾಡಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಮಾತ್ರ ಮಾತನಾಡಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನಾವು ಪ್ರೂವ್ ಮಾಡುತ್ತೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ. ನಾವು ಪ್ರೂವ್ ಮಾಡುತ್ತೇವೆ. ಆ ಮನುಷ್ಯ ಟಿ.ವಿ.ಯಲ್ಲಿ ಹೇಳಿದ್ದಾರೆ. ಶಾಸಕರ ವಿರೋಧದ ಮಧ್ಯೆಯೂ ನಾವು ಅಧಿಕಾರ ಕೊಟ್ಟಿದ್ದೇವೆಂದು ಹೇಳಿರುವುದನ್ನು ಪ್ರೂವ್ ಮಾಡುತ್ತೇವೆ ಅದರ ಬಗ್ಗೆ privilege move ಮಾಡುತ್ತೇವೆ.

**ಅಧ್ಯಕ್ಷರು** : ಇಲ್ಲ, ಇಲ್ಲ, ಈಗ ಶ್ರೀ ಜಯಪ್ರಕಾಶ್ ಹೆಗ್ಡೆಯವರು ಚರ್ಚೆ ಮುಂದುವರಿಸಲಿ. ದಯಮಾಡಿ ಎಲ್ಲರು ಕುಳಿತುಕೊಳ್ಳಬೇಕು.

**(ಗೊಂದಲ)**

**ಅಧ್ಯಕ್ಷರು** : ಶ್ರೀರಾಮರೆಡ್ಡಿಯವರೆ ದಯಮಾಡಿ ಕುಳಿತುಕೊಳ್ಳಿ. ಶ್ರೀ ಹೆಗ್ಡೆಯವರನ್ನು ಮಾತನಾಡುವುದಕ್ಕೆ ಕರೆದಿದ್ದೇನೆ. ದಯಮಾಡಿ ಎಲ್ಲಾ ಕುಳಿತುಕೊಳ್ಳಬೇಕು.

**(ಗೊಂದಲ)**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನಾವು ಬೇಜಬ್ದಾರಿಯಿಂದ ಇಲ್ಲಿ ಮಾತನಾಡಿದರೆ ಕೇಳಲಿ. ನಮ್ಮ ಹತ್ತಿರ ದಾಖಲೆ ಇದೆ. ಆ ಮನುಷ್ಯ ನಮ್ಮ estimate committee ಗೆ ಬಂದಿದ್ದಾಗ ಹೇಗೆ ಮಾತನಾಡಿದ್ದರೆ ಎನ್ನುವ ದಾಖಲೆ ಇದೆ.

**ಅಧ್ಯಕ್ಷರು** : ಗಂಭೀರ ವಿಚಾರವಾದ ಕುಡಿಯುವ ನೀರಿನ ಬಗ್ಗೆ ಮಾತನಾಡಿ ಎಂದರೆ ಏನೇನೋ ಮಾತನಾಡಿಕೊಂಡು ಸಮಯ ಹಾಳು ಮಾಡುತ್ತಿದ್ದೀರಿ, ಇನ್ನೂ ಅನೇಕ ಜನ ಸದಸ್ಯರು ಮಾತನಾಡುವುದಕ್ಕೆ ಇಚ್ಛೆಪಡುತ್ತಿದ್ದಾರೆ. ನೀವು ಈ ರೀತಿ ಮಾಡುತ್ತಿರುವುದು ಏನಿದು?

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಈಗ ಅದೊಂದು ಇತ್ಯರ್ಥ ಆಗಬೇಕಾಗುತ್ತದೆ. ಅಧ್ಯಕ್ಷರೆ,

**ಅಧ್ಯಕ್ಷರು** : ಏನು ಇತ್ಯರ್ಥವಾಗಬೇಕು? ದಯಮಾಡಿ ನೀರಿಗೆ ಸಂಬಂಧಿಸಿದಂತೆ ಮಾತನಾಡಿ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಒಬ್ಬ ಅಧಿಕಾರಿ ಈ ರೀತಿ ಹೇಳಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಹೌದೋ ಅಥವಾ ಇಲ್ಲವೋ ಎನ್ನುವುದನ್ನು ಮಾನ್ಯ ಸಚಿವರು ಇತ್ಯರ್ಥ ಮಾಡ್ಲಿಬಿಡಲಿ. ಒಂದು ವೇಳೆ ಅವರು ಹೇಳಿದ್ದು ಹೌದಾದರೆ ಅದು ತಪ್ಪಾಗುತ್ತದೆ.

**ಶ್ರೀ ಹೆಚ್.ಸಿ. ಮಹದೇವಪ್ಪ** : ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬಳಿಗಾರ್‌ರವರು ಹಳ್ಳಿಗಾಡಿನಿಂದ ಬಂದಿರತಕ್ಕಂಥವರು. ನಾವೆಲ್ಲಾ ಹಳ್ಳಿಯಿಂದ ಬಂದ ಹಾಗೆ ಆ ಅಧಿಕಾರಿ ಕೂಡ ಹಳ್ಳಿಗಾಡಿನಿಂದ ಬಂದಿರತಕ್ಕಂಥವರು. ಮೂಲತಃ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಇಟ್ಟುಕೊಂಡು ಸರ್ಕಾರದ ಕೆಲಸವನ್ನು ಮಾಡುತ್ತಿದ್ದಾರೆ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ನಾವು ಯಾರೂ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆಯನ್ನೇ ಮಾಡಲಿಲ್ಲ.

**ಶ್ರೀ ಹೆಚ್.ಸಿ. ಮಹದೇವಪ್ಪ** : ಅವರು ಪಂಚಾಯತ್ ರಾಜ್ institutions ನ ಸಂವಿಧಾನದ ಕೆಳಗಡೆ ಕೊಟ್ಟಿರತಕ್ಕಂಥ ಅಧಿಕಾರದ ವ್ಯಾಪ್ತಿ ಒಳಗಡೆಯೇ ಕೆಲಸ ಮಾಡಬೇಕೇ ವಿನಃ ಅದನ್ನು ಮೀರಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಆ ರೀತಿ ನಡೆದುಕೊಳ್ಳುವುದಿಲ್ಲ ಎಂದು ನಮ್ಮ ಸದಸ್ಯರಿಗೆ ಮನವಿ ಮಾಡುತ್ತೇನೆ.

**ಅಧ್ಯಕ್ಷರು** : ಪದೇ ಪದೇ ಈ ತರಹ interfere ಆಗುವುದು ಸರಿಹೋಗುವುದಿಲ್ಲ. ವಿರೋಧ ಪಕ್ಷದ ಮುಖಂಡರುಗಳು ನೀವು ಮಾರ್ಗದರ್ಶಕರಾಗಬೇಕಾದವರು ನೀವೇ ಈ ತರಹ ಮಾಡಿದರೆ ಹಿಂದೆ ಕುಳಿತುಕೊಂಡಿರುವವರಿಗೆ ಏನು ಮಾರ್ಗದರ್ಶನವಾಗುತ್ತದೆ? ಎಲ್ಲದಕ್ಕೂ ನೀವು ಸುಮ್ಮನೆ ಬಾಯಿ ಹಾಕುತ್ತೀರಿ. No, no, no, this is not the way. ದಯಮಾಡಿ ಮಾತನಾಡಿ.

**ಶ್ರೀ ಮಹದೇವ (ಕೃಷ್ಣರಾಜನಗರ)** : ಮಾನ್ಯ ಅಧ್ಯಕ್ಷರೆ, ಈ ವ್ಯವಸ್ಥೆ ಬಗ್ಗೆ ನಾವು ನಾಲ್ಕಾರು ವಿಚಾರಗಳನ್ನು ಹೇಳಬೇಕಾಗುತ್ತದೆ. ದಯವಿಟ್ಟು ನಮ್ಮನ್ನೂ ಸಹ ನಾವು ಕೇಳಬೇಕು. ಇವತ್ತು ವಿಕೇಂದ್ರೀಕರಣದ ಬಗ್ಗೆ ನಾವೆಲ್ಲರೂ ಸಹ ನಂಬಿಕೆ ಇಟ್ಟಿರುವಂಥವರೇ, ಮಾನ್ಯ ಇರಬಹುದು. ಸದನದಲ್ಲಿರತಕ್ಕಂಥ ಎಲ್ಲಾ ನಮ್ಮ ಸ್ನೇಹಿತರು ಎಲ್ಲಾ ಪಕ್ಷದವರು ಸಹ ಇವತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚಿಂತನೆ ಮಾಡಿದಾಗ Whether they should go to panchayat or whether they should stay with the legislature or with the zilla panchayat ಎಂದು ರೂರಲ್ ಹೌಸಿಂಗ್ ಮತ್ತು ರೂರಲ್ ವಾಟರ್ ಸಪ್ಲೈ ಬಗ್ಗೆ ಒಂದು ದೊಡ್ಡ ಚರ್ಚೆಯಾಗಬೇಕಾಗುತ್ತದೆ. ಇದು ಬಹಳ ಗಂಭೀರವಾದಂಥ ವಿಚಾರ. ನಾನು ಇದುವರೆವಿಗೂ ಕೂಡ ಆಶ್ರಯ ಸಮಿತಿ ಏಕೆ formation ಆಗಿಲ್ಲವೆಂದು ಸದನದಲ್ಲಿ ಒಂದು ಪ್ರಶ್ನೆಯನ್ನೂ ಸಹ ಮಂಡಿಸಿದ್ದೇನೆ. ಅದು Un starred question ಎಂದು ಹೇಳಿ ನೀವು ಉತ್ತರ ಹೇಳುವುದಕ್ಕೆ ಸಿದ್ಧ ಇಲ್ಲ. ಏಕೆಂದರೆ ಶಾಸಕರಾಗಿ ಏನು ಕೇಳುತ್ತಾರೆಂದರೆ, 'ಮನೆ ಕೊಡಪ್ಪಾ ಎಂದು ಕೇಳುತ್ತಾರೆ. ಬೋರ್‌ವೆಲ್ ಕೊಡಪ್ಪಾ ಎಂದು ಶಾಸಕರಾಗಿ ಏನು ಮಾಡುವುದಿದೆ? ವಿಕೇಂದ್ರೀಕರಣ ವಿಚಾರದಲ್ಲಿ ಎಲ್ಲರೂ ಕೂಡ ನಂಬಿಕೆ ಇಟ್ಟುಕೊಂಡಿರುವಂಥವರಾಗಿದ್ದೇವೆ. ಆದರೆ ಅಧಿಕಾರಿಗಳು. they have come to a point to lead politicians. ಶಾಸಕರುಗಳನ್ನು ಲೀಡ್ ಮಾಡತಕ್ಕಂಥ situation ಅನ್ನು ಅಧಿಕಾರಿಗಳು ತಂದಿದ್ದಾರೆ. ಯಾವುದೋ ಒಂದು ಘೋಷಣೆ ಆಧಾರವನ್ನು ಇಟ್ಟುಕೊಂಡು ಇವತ್ತು ಎಲ್ಲಾ ಹಕ್ಕುಗಳನ್ನು ಮೊಟಕು ಮಾಡುತ್ತಿದ್ದಾರೆ. ದಯವಿಟ್ಟು there should be discussion on

this. ಹೌಸ್‌ನಲ್ಲಿ one hour ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕಾಗುತ್ತದೆ.

**ಅಧ್ಯಕ್ಷರು** : ಈಗ ಈ ವಿಚಾರವನ್ನು ವಿಷಯಾಂತರ ಏಕೆ ಮಾಡುತ್ತೀರಿ? ಈಗ ನೀವು ತೌಡು ಕುಟ್ಟುವ ಕೆಲಸವನ್ನು ಮಾಡುತ್ತಿದ್ದೀರಿ. ಕುಡಿಯುವ ನೀರಿನ ವಿಚಾರದಲ್ಲಿ ಗಂಭೀರವಾಗಿ ಚರ್ಚೆಯಾಗಬೇಕೆಂದು ನೀವೇ ಹೇಳಿ 'ಈಗ ಈ ಕಡೆ ಆ ಕಡೆ ಮಾತನಾಡಿದರೆ ಅದು ಸರಿಯಲ್ಲ. ದಯಮಾಡಿ ಈಗ ಹೆಗ್ಡೆಯವರನ್ನು ಕರೆದಿದ್ದೇನೆ. ಅವರು ಮಾತನಾಡಲಿ.

**ಡಾ॥ ಎಂ.ಸಿ. ಸುಧಾಕರ್** : ದಯವಿಟ್ಟು ನನಗೊಂದು ಅವಕಾಶ ಕೊಡಿ ಮಾನ್ಯ ಅಧ್ಯಕ್ಷರೆ.

**ಅಧ್ಯಕ್ಷರು** : ಅನಂತರ ಮಾತನಾಡುವಿರಂತೆ. ಈಗ ಕುಳಿತುಕೊಳ್ಳಿ.

**SRI. MAHADEV** : Irrespective of parties, ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ.

**ಅಧ್ಯಕ್ಷರು** : ಶ್ರೀ ಮಹದೇವರವರೇ, ಯಾವುದಾದರು ನಿಯಮದಡಿಯಲ್ಲಿ ಬರೆದು ಕಳುಹಿಸಿ. ಆಗ ಅದನ್ನು ತೆಗೆದುಕೊಳ್ಳಬಹುದು.

**ಡಾ॥ ಎಂ.ಸಿ. ಸುಧಾಕರ್** : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತೇನೆ.

**ಅಧ್ಯಕ್ಷರು** : ದಯವಿಟ್ಟು ಕುಳಿತುಕೊಳ್ಳಿ. ಇವರು ಮಾತನಾಡುತ್ತಾರೆ. ಅನಂತರ ನಿಮಗೂ ಅವಕಾಶ ಕೊಡುತ್ತೇನೆ.

**ಡಾ॥ ಎಂ.ಸಿ. ಸುಧಾಕರ್** : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಮಹದೇವರವರು ಒಳ್ಳೆಯ ಒಂದು ವಿಚಾರವನ್ನು ಇಟ್ಟಿದ್ದಾರೆ.

**ಅಧ್ಯಕ್ಷರು** : ಶ್ರೀ ಹೆಗ್ಡೆಯವರೆ, ತಾವು ಈಗ ಮಾತನಾಡುತ್ತೀರೋ ಇಲ್ಲವೋ? ಈಗ ಯಾರೋ ಮಾತನಾಡುತ್ತಾರೆಂದು ನಿಮ್ಮ ನಿಮ್ಮೊಳಗೆ ಒಳಒಪ್ಪಂದ ಆಗಿದೆಯೇ? ನಾನು ಕರೆಯುತ್ತಿದ್ದೇನೆ. ನೀವು ಕುಳಿತುಕೊಳ್ಳುತ್ತೀರಿ, ಈ ತರಹ ಆದರೆ ಹೇಗೆ? ಈಗ ದಯಮಾಡಿ ನಿಮಗೆ ಮಾತನಾಡುವುದಕ್ಕೆ ಇಷ್ಟ ಇದ್ದರೆ ಮಾತನಾಡಿ. ಇಲ್ಲದಿದ್ದರೆ ಮುಕ್ತಾಯ ಮಾಡಿ, ಬೇರೆ ಸದಸ್ಯರನ್ನು ಮಾತನಾಡುವುದಕ್ಕೆ ಕರೆಯುತ್ತೇನೆ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಆಯಿತು. ನಾನು ಮುಂದುವರಿಸುತ್ತೇನೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟರು. ಅದರ ಬಗ್ಗೆ ಅವರು ತನಿಖೆಯನ್ನು ಮಾಡಿಸಲಿ. ಏನು ತನಿಖೆಯನ್ನು ಮಾಡಿಸುತ್ತಾರೆ. ಅದರ ಬಗ್ಗೆ ಶಾಸಕರೆಲ್ಲಾ ಕುಳಿತು ಚರ್ಚೆ ಮಾಡಬೇಕಾಗುತ್ತದೆ.

**ಅಧ್ಯಕ್ಷರು** : ಈಗ ನೀರಿನ ವಿಚಾರ ಚರ್ಚೆಗೆ ತೆಗೆದುಕೊಂಡಿರುವಾಗ ಅದರ ಮಧ್ಯದಲ್ಲಿ ಯಾವ್ಯಾವುದೋ ವಿಚಾರವನ್ನು ಚರ್ಚೆಗೆ ತೆಗೆದುಕೊಂಡರೆ ಹೇಗೆ? ಬೇರೆ ನಿಯಮಾವಳಿಯಲ್ಲಿ ಅದನ್ನು ತರಲಿ ನಂತರ ಚರ್ಚೆ ಮಾಡಲಿ. ನನ್ನದೇನು ಅಡ್ಡಿ ಇದೆ?

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಮಾನ್ಯ ಅಧ್ಯಕ್ಷರೆ, ನಾವು ಪ್ರತಿ ಸಲ ಬೇಸಿಗೆ ಬರುವಾಗ ಮಾತ್ರ scarcity ಬಗ್ಗೆ ಆಲೋಚನೆ ಮಾಡುತ್ತೇವೆ. ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಏನೂ ಆಲೋಚನೆ ಮಾಡುತ್ತಿಲ್ಲವೆಂದು ಕಾಣುತ್ತದೆ. ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಆಲೋಚನೆ ಮಾಡಿದರೆ ಈ ಬೇಸಿಗೆ ಬರುವಾಗ ನಾವು ಓಡಾಡುವುದು, ಶಾಸಕರಿಗೆ ಅಧಿಕಾರ ಕೊಡಿ, ಪಂಚಾಯತ್‌ನವರಿಗೆ ಕೊಡಿ ಎನ್ನುವ ಚರ್ಚೆ ಬರುವುದಿಲ್ಲ. ನೀವು ಕುಡಿಯುವ

ನೀರಿನ ಯೋಜನೆಯನ್ನು ಮಾಡುತ್ತೀರಿ, ಪ್ರತಿಯೊಂದು ಭಾಗದಲ್ಲೂ ಎಷ್ಟು ಹಣವನ್ನು ಕೊಡಬಹುದೆನ್ನುವುದನ್ನು ಮೊದಲೇ ಕುಳಿತು ತಯಾರು ಮಾಡಿ. ಕೊನೆಯಲ್ಲಿ ಬಂದು ಬೇಸಿಗೆ ಕಾಲದಲ್ಲಿ ಇದ್ದ ನೀರಿನಲ್ಲೇ ಒಂದು ಭಾಗವನ್ನು ನಾಲ್ಕು ಜನರು ಹಂಚಿಕೊಳ್ಳುವ ಪರಿಸ್ಥಿತಿ ಬರಬಾರದು. ಇಂಜಿನಿಯರ್ಸ್ ಒಂದೇ ಭಾಗದಲ್ಲಿ ಸಾಧಾರಣವಾಗಿ 10–12 ವರ್ಷಗಳ ಕಾಲ ಕೆಲಸ ಮಾಡಿದವರು ಅವರಿಗೆ ಯಾವ ಭಾಗದಲ್ಲಿ ಸ್ಕೇರ್‌ಸಿಟಿ ಬರುತ್ತದೆಂದು ಗೊತ್ತಿಲ್ಲದೆ ಕೆಲಸ ಮಾಡುವುದಾದರೆ, ಕೊನೆ ಘಳಿಗೆಯಲ್ಲಿ ಪಟ್ಟಿ ಕೊಡುವುದಾದರೆ, ಅವರೇಕೆ ಅಲ್ಲಿರಬೇಕು? ಯಾರು ಶಾಶ್ವತವಾಗಿ 3 ವರ್ಷಗಳಿಗಿಂತ ಜಾಸ್ತಿ ಇದ್ದಾರೆ, ಅವರನ್ನು ಅಲ್ಲಿಂದ ಎತ್ತಿ ಹಾಕಿ. ಹೊಸಬರನ್ನು ತನ್ನಿ. ಏಕೆಂದರೆ, ಸ್ವಲ್ಪ ಬದಲಾವಣೆಯನ್ನು ಮಾಡುತ್ತಿದ್ದರೆ, ಅಲ್ಲಿ ಚುರುಕು ಮುಟ್ಟುತ್ತದೆ. ನಮ್ಮಲ್ಲಿದ್ದ ನೀರು ಸಮುದ್ರಕ್ಕೆ ಹೋದಾಗ ಅಲ್ಲಿ ಉಪ್ಪು ನೀರಿನ ಅಣೆಕಟ್ಟುಗಳನ್ನು ಹಾಕಬೇಕಾಗುತ್ತದೆ. ಆ ಪಶ್ಚಿಮ ವಾಹಿನಿ ಕಾರ್ಯಕ್ರಮ ಎಲ್ಲಿಗೆ ಹೋಯಿತೋ ಗೊತ್ತಿಲ್ಲ. ಕುಮಾರ್ ಬಂಗಾರಪ್ಪನವರು ಸಣ್ಣ ನೀರಾವರಿ ಮಂತ್ರಿಗಳಾಗಿದ್ದಾಗ ಅದನ್ನು ಪ್ರಾರಂಭಿಸಿದ್ದು, ಅವರ ಜೊತೆಗೇ ಹೋಯಿತೆಂದು ಕಾಣುತ್ತದೆ. ಅದನ್ನಾದರೂ ಜಾರಿಗೆ ತರಬೇಕು. ನಮ್ಮಲ್ಲಿ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಯಾವುದೂ ಇಲ್ಲ. ಇದನ್ನು ಮಾಡಿದರೆ ಜಲದ ಮಟ್ಟ ಮೇಲೆ ಬರುತ್ತದೆ. ಬಾವಿಗಳಲ್ಲಿ ನೀರು ಬರುತ್ತದೆ. ರೈತರಿಗೂ ಸಹಾಯವಾಗುತ್ತದೆ. ಕುಡಿಯುವ ನೀರಿನ ವ್ಯವಸ್ಥೆಗೂ ಸಹಕಾರಿಯಾಗುತ್ತದೆ. ನಮಗೆ ಸ್ವಲ್ಪ 100,150 ಕೋಟಿ ರೂಪಾಯಿಗಳನ್ನು ಒದಗಿಸಿ, ಈ ಕೆಲಸ ಮಾಡಿದರೆ ಬಹಳ ಉಪಯೋಗವಾಗುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಸಮುದ್ರದ ನೀರು ಕೊಡಿ ಎಂದು ಸಲಹೆ ಕೊಟ್ಟರು. ಅವರು ಸಮುದ್ರದ ನೀರನ್ನು ಕೊಡಿ ಎಂದರೆ ಉಪ್ಪು ನೀರನ್ನು ಕೊಡಿ ಎಂದು ಹೇಳಿಲ್ಲ. ಡಿ–ಸಲಿನೇಷನ್ ಪ್ಲಾಂಟ್ ಹಾಕಿ ಅದನ್ನೇ ಪ್ಯೂರಿಫೈ ಮಾಡಿ ಕೊಡಲಿಕ್ಕಾಉತ್ತದೆಯೇ ಎಂದು ನೋಡಿ. ಅದನ್ನು ಗಲ್ಫ್‌ನಲ್ಲಿ ಮಾಡುತ್ತಿದ್ದಾರೆ. ಪ್ರಾರಂಭದಲ್ಲಿ ಕಾಸ್ಟ್ ಜಾಸ್ತಿಯಾಗಬಹುದು. ಆದರೆ, it is going to be a permanent solution. ಕರಾವಳಿ ಭಾಗದಲ್ಲಿ. ನೇತ್ರಾವತಿ ನೀರನ್ನು ತಿರುಗಿಸುವ ಆಲೋಚನೆ ಮಾಡುವುದಾದರೆ ಅದು ಎಷ್ಟರಮಟ್ಟಿಗೆ ಬರುತ್ತದೆಯೋ ನನಗೆ ಗೊತ್ತಿಲ್ಲ. ನಮ್ಮಲ್ಲಿ ವಿದ್ಯುಚ್ಛಕ್ತಿ ಸಮಸ್ಯೆ ಇದೆ.

**ಶ್ರೀ ಕೆ. ಶ್ರೀನಿವಾಸಗೌಡ(ಕೃಷಿ ಸಚಿವರು)** : ಮಾನ್ಯ ಹೆಗ್ಡೆಯರೇ, ಒಂದು ನಿಮಿಷ. ಸಮುದ್ರದ ನೀರಿನ ಬಗ್ಗೆ ಅವರು ಹೇಳುವುದು ನಿಜವಾದಂಥ ಅಂಶ. ನಾನು ಕ್ರಿಬ್ಕೋ ಅಧ್ಯಕ್ಷನಾಗಿದ್ದಾಗ ನೋಡಿದ್ದೇನೆ ಓಮನ್‌ನಲ್ಲಿ ನೀರಿಲ್ಲ, ಅಲ್ಲಿ ಸಮುದ್ರದ ನೀರನ್ನು ಪ್ಲಾಂಟ್ ಹಾಕಿ ಯೂರಿಯಾ ಪ್ರೊಡಕ್ಷನ್‌ಗೆ ಉಪಯೋಗಿಸುತ್ತಿದ್ದೇವೆ ಕುಡಿಯುವುದಕ್ಕೂ ಆ ನೀರನ್ನೇ ಉಪಯೋಗಿಸುವ ಮಟ್ಟಕ್ಕೆ ಹೋಗಿದ್ದೇವೆ. ಇದನ್ನು ನಾವು ಎಲ್ಲಿಯಾದರೂ ಯೋಚಿಸಬೇಕು. ಸರ್ಕಾರವೂ ಇವತ್ತು ಚಿಂತನೆ ಮಾಡಿದರೆ, ಎಲ್ಲೆಲ್ಲಿ ಈ ತರಹದ ಪರಿಸ್ಥಿತಿ ಇದೆ, ಅಲ್ಲಿ ಹಣ ಖರ್ಚಾಗಬಹುದು, ಈಗ ನಾವು ಎಲ್ಲಿಯಾದರೂ ಯೋಚಿಸಬೇಕು. ಸರ್ಕಾರವೂ ಇವತ್ತು ಚಿಂತನೆ ಮಾಡಿದರೆ, ಎಲ್ಲೆಲ್ಲಿ ಈ ತರಹದ ಪರಿಸ್ಥಿತಿ ಇದೆ, ಅಲ್ಲಿ ಹಣ ಖರ್ಚಾಗಬಹುದು, ಈಗ ನಾವು ಟ್ಯಾಂಕರ್‌ಗಳನ್ನು ಹೊಡೆಯುವುದು, ಬೋರ್‌ವೆಲ್ ಹಾಕುವುದು. ಭೂಗರ್ಭದಲ್ಲಿ ದಿವಸ ಎಕ್ಸ್‌ಪ್ಲಾಯಿಂಟ್ ಮಾಡುವುದಾದರೂ ನಿಲ್ಲಿಸುವುದಕ್ಕಾದರೂ ಚಿಂತನೆಯನ್ನು ನಾವೆಲ್ಲರೂ ಸೇರಿ ಮಾಡಬೇಕು. ಕೇವಲ ಸರ್ಕಾರದ ಒಂದೇ ಚಿಂತನೆ ಅಲ್ಲ. ಇಡೀ ನಮ್ಮ ವಿಧಾನ ಸಭೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿ, ಇದನ್ನು ಯಾವ ತರಹ ಮಾಡಬಹುದೆಂದು ಮಾಡಿದರೆ ನಿಜವಾಗಲೂ ಒಳ್ಳೆಯದು. ಏಕೆಂದರೆ ನಾನು ಸ್ವತಃ ಅಲ್ಲಿ

ಹೋಗಿ ನೋಡಿದ್ದೇನೆ. ಆದ್ದರಿಂದ ಹಾಗೆಯೇ ಇಲ್ಲಿಯೇ ಮಾಡಬಹುದಾಗಿದೆ ಮಾನ್ಯ ಹೆಗ್ಡೆಯವರು ಹೇಳಿದ ಮಾತಿಗೆ ನನ್ನ ಒಪ್ಪಿಗೆಯನ್ನು ಸೂಚಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಕಳೆದ ಬಾರಿ ಶಾಸಕರ ನಿಧಿ ಕೊಡುತ್ತಿದ್ದರು. ಅದರಲ್ಲಿ ನಮಗೆ ಸ್ವಲ್ಪ ಅಲ್ಲಿ ಇಲ್ಲಿ ಕೆಲಸ ಮಾಡಿಸಲು ಸಾಧ್ಯವಾಗುತ್ತಿತ್ತು. ಬರ ಬಂದ ಮೇಲೆ ನೆಪದಲ್ಲಿ ಶಾಸಕರ ನಿಧಿಯನ್ನು ನಿಲ್ಲಿಸಿದರು. ಆದರೆ. ನಮ್ಮ ಭಾಗಕ್ಕೆ ಕೂಲಿಗಾಗಿ ಕಾಳು ಯೋಜನೆಯೂ ಇಲ್ಲ, ಶಾಸಕರ ನಿಧಿಯೂ ಇಲ್ಲ. ಎಲ್ಲವನ್ನೂ ಸಂಪೂರ್ಣವಾಗಿ ನಿಲ್ಲಿಸಿದ್ದಾರೆ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಯಾವುದೇ ಒಂದು ಸಣ್ಣ ಕೆಲಸವನ್ನು ಮಾಡಿಸಲು ನಮ್ಮ ಕೈಯಲ್ಲಾಗುತ್ತಿಲ್ಲ. ನಾವು ಇಲಾಖಾ ಕಾರ್ಯದರ್ಶಿಗಳ ಜೊತೆ ಮಾತನಾಡಿದ್ದೇನೆ. ಕೆಲವೊಮ್ಮೆ ಮಾತನಾಡುವಾಗ ಡಾ॥ ಡಿ.ಎಂ. ನಂಜುಂಡಪ್ಪನವರ ವರದಿ ಬಗ್ಗೆ ಚರ್ಚೆಯಾದದ್ದು ಕಾಣುತ್ತದೆ. ನಾನು ಹೇಳಿದೆ. ಉಡುಪಿ-ಮಂಗಳೂರನ್ನು ತೆಗೆದುಕೊಂಡು ಹೋಗಿ ಗುಲ್ಬರ್ಗಾ, ಬಿಜಾಪುರ ಮಾಡಬೇಡಿ. ಉತ್ತರ ಕರ್ನಾಟಕ ಮಾಡಬೇಡಿ. ಅದನ್ನು ತಂದು ಉಡುಪಿ–ಮಂಗಳೂರಿನಲ್ಲಿ ಮಾಡಿ ಎಂದು ಹೇಳಿದೆ. ಏಕೆಂಬುದಕ್ಕೆ ನಾನು ಉದಾಹರಣೆ ಕೊಡುತ್ತೇನೆ. ಇವತ್ತು ಕುಡಿಯುವ ನೀರಿನ ಯೋಜನೆಗೆ ನಮ್ಮಲ್ಲಿ ಹಣವಿಲ್ಲ. ರಸ್ತೆಗಳಿಗೆಂದು ಒಂದು ಕ್ಷೇತ್ರಕ್ಕೆ 5 ಲಕ್ಷ ರೂಪಾಯಿ ಕೊಟ್ಟಂಥದ್ದಿದೆ. ಕೆಲವು ಕ್ಷೇತ್ರಗಳಿಗೆ 50–60 ಲಕ್ಷ ರೂಪಾಯಿಗಳು ಬಂದರೆ, ನನ್ನ ಕ್ಷೇತ್ರಕ್ಕೆ ಕೇವಲ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಲ್ಲಿ ರಸ್ತೆಗಳನ್ನು ಕೊಡುತ್ತೀರಿ. Length of the road and climatic conditions ನೋಡಿ ಕೊಡಬೇಕು. ಅದೇ ರೀತಿ, ಕುಡಿಯುವ ನೀರಿನ ವ್ಯವಸ್ಥೆ ಮಾಡುವಾಗ ಎಲ್ಲಿ ಕಾರ್ಟೇಜ್ ಬರುತ್ತದೆ. ಅಲ್ಲಿ ಜಾಸ್ತಿ ಹಣ ಕೊಡುವ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿ ಮಳೆ ನೀರು ಬಂದದ್ದು ಸಮುದ್ರಕ್ಕೆ ಹೋಗುವುದರಿಂದ, ನೀರೇ ಇರುವುದಿಲ್ಲ. ಮತ್ತು ಲೋಡ್ ಷೆಡ್ಡಿಂಗ್ ಸಮಸ್ಯೆ ಇದೆ. ನಾವು ನಮ್ಮ 2 ಜಿಲ್ಲೆಯವರೂ ಏನು ಮಾಡಿದ್ದೇವೆಂದರೆ, ಅರ್ಬನ್ ಫೀಡರ್‌ನಿಂದ ತೆಗೆದುಕೊಂಡು ಅರ್ಬನ್ ಟಾರಿಫ್ ಕಟ್ಟುತ್ತಿದ್ದೇವೆ. ಆದರೂ ಲೋಡ್ ಷೆಡ್ಡಿಂಗ್ ಸಮಸ್ಯೆ ಇದೆ. ಲೋಡ್ ಷೆಡ್ಡಿಂಗ್ ಆಗಿ ನೀರಿನ ವ್ಯವಸ್ಥೆಯನ್ನು ಸರಿಯಾಗಿ ವಿತರಣೆ ಮಾಡಲಿಕ್ಕಾಗುತ್ತಿಲ್ಲ. ಕೆಪಿಟಿಸಿಎಲ್ ನಮ್ಮ ಸಮಸ್ಯೆಯನ್ನು ಪರಿಹಾರ ಮಾಡಬೇಕಾಗುತ್ತದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಇದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗುತ್ತದೆ. ನಾನು ಮಾನ್ಯ ಸತ್ಯನಾರಾಯಣರವರನ್ನು ಕೇಳುತ್ತೇನೆ, ಒಂದು ವೇಳೆ ಒಂದು ಕೋಟಿ ರೂಪಾಯಿಗಳನ್ನು ಒಂದು ಜಿಲ್ಲೆಗೆ ಕೊಟ್ಟರೆ, ಅದನ್ನು ಯಾವ ರೀತಿಯಲ್ಲಿ ವಿತರಣೆ ಮಾಡುತ್ತೀರಿ? ನೀಡ್ ಬೇಸ್ಡ್ ಕಾರ್ಯಕ್ರಮವನ್ನೂ ಮಾಡಿ ಟಾರ್ಗೆಟ್ ಓರಿಯೆಂಟೆಡ್ ಕಾರ್ಯಕ್ರಮ ಮಾಡಬೇಡಿ. ಎಷ್ಟು ಹಣ ಎಲ್ಲಿ ಅಗತ್ಯವಿದೆ ಅಲ್ಲಿಗೆ ಅಷ್ಟು ಹಣವನ್ನು ಒದಗಿಸಿ. ಇಲ್ಲದಿದ್ದರೆ, ಜನರಿಗೆ ನೀರನ್ನು ಕೊಡದೆ, ನಾವು ಸುಮ್ಮನೆ ಜನಪ್ರತಿನಿಧಿಗಳೆಂದು ಕುಳಿತುಕೊಳ್ಳಲು ಸಾಧ್ಯವಾಗುವುದಿಲ್ಲ. ದಯವಿಟ್ಟು ಇದನ್ನು ಒಂದು ಟೀಮ್, ಟಾಸ್ಕ್‌ಫೋರ್ಸ್ ಮಾಡಿ, ಸರಿಯಾದ ರೀತಿಯಲ್ಲಿ, let there be co-co-ordination. ಶಾಸಕರು, ಜಿಲ್ಲಾ, ಗ್ರಾಮ, ತಾಲ್ಲೂಕು ಪಂಚಾಯಿಗಳ ಮಧ್ಯೆ ಕೋ–ಆರ್ಡಿನೇಷನ್ ಇರಲಿ. ಒಬ್ಬೊಬ್ಬರು ಒಂದೊಂದು ಕೆಲಸ ಮಾಡಿಕೊಂಡು ಅಧಿಕಾರ ವಿಕೇಂದ್ರೀಕರಣ ಸಂಪೂರ್ಣವಾಗಿ ಆಗುವವರೆಗೂ ಜನರಿಗೆ ತಿಳುವಳಿಕೆ ಮೂಡಿ, ಯಾರ್‍ಯಾರಿಗೆ ಮತ ಹಾಕುತ್ತಿದ್ದೇವೆಂದು ಅವರಿಗೆ ಮನದಟ್ಟು ಆಗುವವರೆಗೂ ಹೊಂದಾಣಿಕೆಯಿಂದ ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ದಯವಿಟ್ಟು ಈ ಒಂದು ಟಾಸ್ಕ್‌ಫೋರ್ಸ್ ಮಾಡಿ. ಹಣವನ್ನು

ಅತಿ ಶೀಘ್ರದಲ್ಲಿ ವಿತರಣೆ ವ್ಯವಸ್ಥೆ ಮಾಡಿ. ಪುನಃ ನಾವಿಲ್ಲಿ ಕುಳಿತು ಅಧಿಕಾರಿಗಳ ಮೇಲೆ ಆಪಾದನೆ ಮಾಡಬೇಕೆಂದು ಮಾಡಲಿಲ್ಲ. ಆದರೆ, ನಡೆದ ಘಟನೆಗಳನ್ನು ಹೇಳುತ್ತಿದ್ದೇವೆ. ನಾನು ನೇರವಾಗಿ ಇನ್ನೊಂದು ಸಂದರ್ಭ ಬಂದಾಗ ಹೇಳಲು ಇಚ್ಛಿಸುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಬಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎನ್. ಯೋಗೀಶಭಟ್(ಮಂಗಳೂರು)** : ಸನ್ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರಪಾಲಿಕೆಗೆ ಸಂಬಂಧಪಟ್ಟಂತೆ, ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪಿಸಲು ನಾನು ಇಚ್ಛಿಸುತ್ತಿದ್ದೇನೆ. ತಮ್ಮಲ್ಲಿ ನಾನು ವಿಶೇಷವಾಗಿ ವಿನಂತಿಸುತ್ತೇನೆ. ಒಂದು ಕಡೆ ಸಮುದ್ರದ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಒಂದು ಕಡೆ ಸಮುದ್ರದಲ್ಲಿ ಧಾರಾಳವಾಗಿ ನೀರು ಹರಿಯುತ್ತಿದೆ. ಇನ್ನೊಂದು ಬದಿಯಲ್ಲಿ ನದಿ ಇದೆ. ಅದರ ಮಧ್ಯದಲ್ಲಿ ನಮ್ಮ ಪಟ್ಟಣ ಪ್ರದೇಶವಿದೆ. ಈ ಪ್ರದೇಶದಲ್ಲಿ ನಲ್ಲಿ ನೀರನ್ನು ಅದಕ್ಕೋಸ್ಕರ ಟ್ಯಾಪ್ ಆನ್ ಮಾಡಿದರೆ ಅನೇಕ ಮನೆಗಳಲ್ಲಿ ಇವತ್ತು ಕಣ್ಣೀರು ಮಾತ್ರ. ದಿನಕ್ಕೆ 20 ಮಿಲಿಯನ್ ಗ್ಯಾಲನ್ ನೀರು ಇವತ್ತು ಬೇಕಾಗಿದೆ. ನಮಗೆ ಅಷ್ಟು ಸಾಲದಾಗಿದೆ. ಅಷ್ಟನ್ನು ಪಂಪ್ ಮಾಡಿದರೂ ಕೂಡ, ಇರುವ ವಿತರಣಾ ವ್ಯವಸ್ಥೆಯಲ್ಲಿ ನಮಗೆ ಎಲ್ಲಾ ಕಡೆಗಳಲ್ಲಿ ಸಮಗ್ರವಾಗಿ ನೀರು ವಿತರಣೆ ಮಾಡಲು ಸಾಧ್ಯವಾಗುತ್ತಿಲ್ಲ. ಇನ್ನೊಂದು ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ನಗರದ ಒಳಗಿರುವ ಬಾವಿ, ಕೆರೆಗಳಿಂದ ಎಲ್ಲಿಯಾದರೂ ನೀರನ್ನು ಪಂಪ್ ಮಾಡೋಣವೆಂದರೆ, ಒಳಚರಂಡಿ ಯೋಜನೆ ದುಸ್ಥಿತಿಯಲ್ಲಿದ್ದು, ಅದನ್ನೂ ನಾವು ಕಳೆದುಕೊಂಡಿದ್ದೇವೆ, ತ್ಯಾಜ್ಯಗಳು ಪೆನಿಟ್ರೇಟ್ ಆಗಿ, ಭಾವಿಗಳೆಲ್ಲಾ ಹಾಳಾಗಿದೆ. ಫ್ಲಾಟ್‌ಗಳಲ್ಲಿ 5,6,7ನೇ ಮಹಡಿಗಳವರಿಗೆ ನೀರು ಕೊಡಲು ಪಂಪಿಂಗ್ ವ್ಯವಸ್ಥೆಯಲ್ಲಿನ ನೀರನ್ನೇ ಕೊಡಬೇಕಾಗಿದೆ. ಇಂಥ ಒಂದು ದುಸ್ಥಿತಿಯಲ್ಲಿ ನಾವಿದ್ದೇವೆ. ಕರ್ನಾಟಕ ರಾಜ್ಯ ಸರ್ಕಾರ ನಮಗೆ ವಿಶೇಷವಾದ ವ್ಯವಸ್ಥೆಯನ್ನು, ಪ್ಯಾಕೇಜನ್ನೂ ಕೊಟ್ಟಿದೆ. ಏನೆಂದರೆ, ಎಡಿಬಿಗೆ ಸಂಬಂಧಪಟ್ಟಿದ್ದು. ನಾನು ಅದರ ಬಗ್ಗೆ ಪ್ರಸ್ತಾವನೆ ಮಾಡುವ ಮೊದಲು, ಇನ್ನೊಂದನ್ನು ತಮ್ಮ ಗಮನಕ್ಕೆ ತರುತ್ತೇನೆ. 20 ಮಿಲಿಯನ್ ಗ್ಯಾಲನ್ ನೀರು ದಿವಸಕ್ಕೆ ಬೇಕಾಗಿರುವುದಿದೆ. ಇದಕ್ಕೆ ಪಂಪ್ ಹಾಕಿರುವಂಥದ್ದು ನೇತ್ರಾವತಿ ವೆಂಟೆಡ್ ಡ್ಯಾಂ ಹತ್ತಿರದಿಂದ. ಇಲ್ಲಿ ಬಂದಿರುವ ಸಮಸ್ಯೆ ಎಂದರೆ, ವೆಂಟೆಡ್ ಡ್ಯಾಂನಲ್ಲಿ ಲೀಕೇಜ್ ಆರಂಭವಾಗಿದೆ. ಶಿಥಿಲತೆಯಿಂದ ಅಲ್ಲಲ್ಲಿ ನೀರು ಸೋರಿಕೆ ಆರಂಭವಾಗಿದೆ. ಮಾರ್ಚ್, ಏಪ್ರಿಲ್ ಆದ ನಂತರ ಅಲ್ಲಿ ಸಿಹಿ ನೀರಿನ ಆಸರೆ ಸಿಗುತ್ತಿಲ್ಲ. ಆದರೆ, ಅದು ಪೂರ್ಣವಾಗಿ ಸಮುದ್ರದ ಕಡೆಗೇ ಹೋಗುತ್ತಿದೆ. ಕೊನೆಗೆ, ಉಪ್ಪು ನೀರು ಬರುವಂಥದ್ದು ಇದೆ. ಇಂಥ ಒಂದು ದುಸ್ಥಿತಿಯಲ್ಲಿರುವುದರಿಂದ, ತಕ್ಷಣ ಈ ಹಳೆಯ ವೆಂಟೆಡ್ ಡ್ಯಾಂನಲ್ಲಿ ದುರಸ್ತಿ ಮಾಡಿ ಇನ್ನು ಕೇವಲ 2 ತಿಂಗಳಿದೆ. ನಾವು ಈಗ ಫೆಬ್ರವರಿ 10ರ ಹತ್ತಿರಕ್ಕೆ ಬರುತ್ತಿದ್ದೇವೆ. ಏಪ್ರಿಲ್ 15ರೊಳಗೆ ಎಲ್ಲಿಯಾದರೂ ವೆಂಟೆಡ್ ಡ್ಯಾಂ ದುರಸ್ತಿ ಸಂಪೂರ್ಣಗೊಂಡರೆ ಕನಿಷ್ಟ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಈಗಿರುವ ತತ್ಕಾಲದ ವ್ಯವಸ್ಥೆಯಲ್ಲಿ ನಾವೇನಾದರೂ ಸರಬರಾಜು ಮಾಡಲು ಆಗುತ್ತದೆ. ಇಲ್ಲದಿದ್ದರೆ ಹಾಹಾಕಾರ ಆಗುತ್ತದೆ. ಕಳೆದ ವರ್ಷ ನಮಗೆ ಜನರನ್ನು ಎದುರಿಸಲು ಕಷ್ಟವಾಗಿತ್ತು. ಅಂಥ ಒಂದು ದುಸ್ಥಿತಿಯನ್ನು ನಾವು ಎದುರಿಸಿದ್ದೆವು. ಇಂಥ ಸನ್ನಿವೇಶ ಉಂಟಾಗಿತ್ತು. ಎರಡನೆ ಸಮಸ್ಯೆಯನು ನಾವು ಎದುರಿಸುತ್ತಿರುವುದು ಎಂದರೆ, ಇಲ್ಲಿ ಪ್ರಮುಖವಾಗಿರುವುದು ಎಡಿಬಿ ವಿತರಣಾ ಜಾಲಕ್ಕೆ ಸಂಬಂಧಪಟ್ಟದ್ದು. ಸುಮಾರು 120 ಕೋಟಿ ರೂ. ವೆಚ್ಚದಲ್ಲಿ ಪಂಪಿಂಗ್ ಸ್ಟೇಷನ್‌ಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಪೈಪ್‌ಲೈನ್‌ಗಳ ಜಾಲಗಳನ್ನು ಹಾಕುತ್ತಿದ್ದೇವೆ. ಅದರಲ್ಲಿ

ಸಮಸ್ಯೆ ಏನಾಗಿದೆ ಎಂದರೆ ಇರುವ ಸೋರ್ಸ್ ಎಷ್ಟೆಂದರೆ, ಹಳೆಯ ಸೋರ್ಸ್‌ಗಳಲ್ಲಿ ಪಂಪಿಂಗ್ ಮಾಡುತ್ತಿದ್ದೇವೆ. ಈಗ ಇದರಲ್ಲಿ ನಮ್ಮ ಲೆಕ್ಕಾಚಾರ ಇದ್ದರೆ ಇದೇ ರೀತಿ ಪಂಪ್ ಆದರೆ, ಫೆಬ್ರವರಿ ಒಳಗೆ ಎಲ್ಲಾ ನೀರು ಖಾಲಿಯಾಗುತ್ತದೆ. ನಂತರ ಅಲ್ಲಿ ಶೇಖರಣೆ ಮಾಡುವ ವ್ಯವಸ್ಥೆ ನಮ್ಮಲ್ಲಿರುವುದಿಲ್ಲ. ಈ ನಿಟ್ಟಿನಲ್ಲಿ ವೆಂಟೆಡ್ ಡ್ಯಾಂ ಮಾಡುವಂಥದ್ದು ತೀರ ಅವಶ್ಯಕತೆ ಇದೆ. ಈ ಎರಡನೇ ವೆಂಟೆಡ್ ಡ್ಯಾಂ ಬಗ್ಗೆ ಮನವರಿಕೆ ಮಾಡುವ ದೃಷ್ಟಿಯಿಂದ ಮಾನ್ಯ ಸಚಿವರಲ್ಲಿ ವೈಯಕ್ತಿಕ ನೆಲೆಯಲ್ಲಿ ಹಾಗು ಅಲ್ಲಿಯ ಮಂಗಳೂರು ಮಹಾನಗರಪಾಲಿಕೆಯ ಮೇಯರ್, ಕಾರ್ಪೋರೇಟರ್‌ಗಳು ಬೇರೆ ಬೇರೆ ರೀತಿಯಲ್ಲಿ ಡೆಲಿಗೇಷನ್ ಮೇಲೆ ಬಂದು, ಕನ್‌ವಿನ್ಸ್ ಮಾಡುವ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ಆದರೆ, ಇವತ್ತು ಸಮಸ್ಯೆ ಬಂದಿರುವುದು, 120 ಕೋಟಿ ರೂ. ವೆಚ್ಚದಲ್ಲಿ ಈ ಜಾಲಗಳನ್ನು ಹಾಕುವಾಗ ಕನಿಷ್ಠ 20 ಕೋಟಿ ರೂ. ಹೊಸ ವೆಂಟೆಡ್ ಡ್ಯಾಂಗೆ ಅವಕಾಶ ಕೊಡುವುದಕ್ಕೆ ಈವರೆಗೆ ಅನುಮತಿ ಸಿಕ್ಕಿಲ್ಲ. ನಾನು ಪ್ರತಿ ದಿವಸ ಕಾಲಿಂಗ್ ನಿಯಮ 351 ಹಾಗೂ ಬೇರೆ ಬೇರೆ ಕಡೆಗಳಿಂದ, ಪ್ರಶ್ನೋತ್ತರ ಮತ್ತು ಬೇರೆ ಬೇರೆ ಕಡೆಗಳಿಂದ ಮಾಹಿತಿ ಪಡೆಯುತ್ತಿದ್ದೇನೆ. ಇವತ್ತೂ ಕೂಡ ಅನುಮತಿ ಸಿಕ್ಕಿಲ್ಲ. ಮಾನ್ಯ ಸಚಿವರ ಮೂಲಕ ಕೇಳುತ್ತೇನೆ, ನಮಗೆ ತುರ್ತಾಗಿ ಹಳೆಯ ವೆಂಟೆಡ್ ಡ್ಯಾಂ ದುರಸ್ತಿಗೆ ತಕ್ಷಣ ಅನುಮತಿ ಕೊಟ್ಟು ತಕ್ಷಣ ಎರಡು ತಿಂಗಳಲ್ಲಿ ಆಗುವ ನಿಟ್ಟಿನಲ್ಲಿ ಸಮರೋಪಾದಿಯಲ್ಲಿ ಆಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಎರಡನೇಯದಾಗಿ, ಶಾಶ್ವತವಾಗಿರತಕ್ಕಂಥ ಇನ್ನೊಂದು ವೆಂಟೆಡ್ ಡ್ಯಾಂ ಅದಕ್ಕೆ ಸಂಬಂಧಪಟ್ಟ ಸ್ವಲ್ಪ ದೂರದಲ್ಲಿ ಹೆಚ್ಚಿನ ರೀತಿಯಲ್ಲಿ ಮುಳಗಡೆ ಆಗದ ರೀತಿಯಲ್ಲಿ ಏನು ವ್ಯವಸ್ಥೆ ಮಾಡಬೇಕು ಆ ರೀತಿ ಮಾಡಿದರೆ ನಮಗೆ ಖಂಡಿತವಾಗಿ ಶಾಶ್ವತವಾಗಿರತಕ್ಕಂಥ ನೀರಿನ ವ್ಯವಸ್ಥೆ ನಮಗೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇನ್ನೂ 20 ಮಿ. ಗ್ಯಾಲನ್ ಫರ್ ಡೆ ಅಡಿಷನಲ್ಲಾಗಿ ಸೋರ್ಸ್‌ನ್ನು ನಾವು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶೇಷವಾಗಿ ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ನಾನು ಒತ್ತಾಯ ತರುವುದಂಥದ್ದು, ತಾವು ಇದನ್ನು ಮಾಡಿಕೊಡಬೇಕೆನ್ನುವ ಒತ್ತಾಯವನ್ನು ಮಾಡಲಿಕ್ಕೆ ಇಚ್ಛಿಸುತ್ತಿದ್ದೇನೆ. ಇಷು ಮಾತ್ರವಲ್ಲ. ಸಮುದ್ರ ನೀರಿಂದ ಡಿಸಲೈನ್ ಮಾಡಿಕೊಂಡು ನೀರನ್ನು ಪಡೆಯುವ ನಿಟ್ಟಿನಲ್ಲಿ ಬಹಳ ಯೋಚನೆಗಳು ಆಗುತ್ತಿವೆ ಬಹಳ ಪ್ರಸ್ತಾವನೆಗಳು ಬರುತ್ತಿವೆ. ಏನೂ ಬೇಕಾಗಿಲ್ಲ ಈ ಪಶ್ಚಿಮ ವಾಹಿನಿ ಯೋಜನೆ ಯಾವುದು ಇದೆ. ಮಾನ್ಯ ಕುಮಾರ್ ಬಂಗಾರಪ್ಪನವರು ನಮ್ಮ ಜಿಲ್ಲೆಗೆ ಹಿಂದೆ ಬಂದಿದ್ದ ಸಂದರ್ಭದಲ್ಲಿ ಬಹುಶಃ ನಮ್ಮಲ್ಲರಿಗೂ ಸಂತೋಷವಾಗಿತ್ತು. ಪಶ್ಚಿಮಾಭಿಮುಖವಾಗಿ ಸಮುದ್ರಕ್ಕೆ ಸೇರುವಂಥ ಎಲ್ಲಾ ನದಿಗಳಿಗೆ ಅಲ್ಲಲ್ಲಿ ವೆಂಟೆಡ್ ಡ್ಯಾಂಗಳನ್ನು ಕಟ್ಟಿ ಬೇಕಾಗುವಂಥ ನೀರನ್ನು ಶೇಖರಣೆ ಮಾಡಿ, ಬಹುಶಃ ಮುಲ್ಕಿ ಅಂಥ ಪ್ರದೇಶಗಳಲ್ಲಿ ನಮ್ಮ ಸಚೇತಕರು ಇದ್ದಾರೆ, ಅವರ ಕ್ಷೇತ್ರದಲ್ಲಿ ಎಂಥ ಬವಣೇ ಇದೆ ಎನ್ನುವುದು ಗೊತ್ತಿದೆ. ಇಂಥ ಅನೇಕ ಪ್ರದೇಶಗಳಲ್ಲಿ, ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಇರುವಂಥ ಬಹಳ ದೊಡ್ಡ ಯೋಜನೆ ಎಂದರೆ ಪಶ್ಚಿಮ ವಾಹಿನಿ ಯೋಜನೆ. ಈ ಯೋಜನೆಗೆ ಪುನಃ ಒಂದು ಕಾಯಕಲ್ಪ ಕೊಡುವಂಥದ್ದು, ಇದನ್ನು ಆರಂಭ ಮಾಡುವಂಥದ್ದು ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳುತ್ತಾ, ಅದರ ಜೊತೆಯಲ್ಲಿ ಪಂಪಿಂಗ್ ಆಗುವಂಥ ವ್ಯವಸ್ಥೆಯಲ್ಲಿ ಕೂಡ 24 ಗಂಟೆ ನೇರವಾಗಿ ಎಕ್ಸ್‌ಪ್ರೆಸ್ ಫೀಡರ್‌ಗಳ ಮೂಲಕ ಮತ್ತೆ ಪಂಪಿಂಗ್ ಸ್ಟೇಷನ್‌ಗಳಲ್ಲಿ ಪಂಪ್ ಆಗುವ ವ್ಯವಸ್ಥೆ ಆದರೆ ಮಾತ್ರ ನಮಗೆ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಆಗುತ್ತದೆ.

ಇಲ್ಲದಿದ್ದರೆ ಸಹಜವಾಗಿ ತಮಗೆ ತಾಂತ್ರಿಕವಾಗಿ ಬರುವಂಥ ತೊಡಕು ಗೊತ್ತಿದೆ. ಪಂಪಿಂಗ್ ಆಗದೇ ಕೆಲವು ಗಂಟೆಗಳು ಹೋಯಿತು ಎಂದರ ಎಲ್ಲಿ ಎರಲಾಕ್ ಬರುವಂಥದ್ದು, ಬಹುಶಃ ಹಲವು ಗಂಟೆಗಳ ತನಕ ನಗರದ ಪ್ರದೇಶಗಳಲ್ಲಿ ನೀರು ಬರದೇ ಇರುವ ಒಂದು ದುಸ್ಥಿತಿ ಬರುತ್ತದೆ. ಎಕ್ಸ್‌ಪ್ರೆಸ್ ಫೀಡರ್‌ಗಳ ಮೂಲಕ ಮತ್ತೆ ಬೇರೆ ಬೇರೆ ರೀತಿಯಲ್ಲಿ ಷಟ್‌ಡಾನ್ ಆಗುವಂಥ ಸಂದರ್ಭದಲ್ಲಿ ಕೂಡ ಸ್ವೀಚ್ ಓವರ್ ಸಿಸ್ಟಂ ಅನ್ನು ಅಳವಡಿಸಿಕೊಂಡು, ಈ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದು. ವಿಶೇಷವಾಗಿ ಯೋಜನೆಯನ್ನು ಅನುಷ್ಟಾನಕ್ಕೆ ಬರುವಂಥ ನಿಟ್ಟಿನಲ್ಲಿ ತಾವು ಮಾಡಬೇಕು ಎನ್ನುವಂಥ ವಿನಂತಿಯನ್ನು ಮಾಡುತ್ತಿದ್ದೇನೆ. ಮತ್ತೆ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಹಾಗೆ ಗ್ರಾಮೀಣ ಮೊನ್ನೆ ತಾನೇ ನಮ್ಮ ಸಚೇತಕರು, ಶಾಸಕರು, ನಾವು ಎಲ್ಲರೂ ಇದ್ದುಕೊಂಡು ಒಂದು ರಿವ್ಯೂ ಮೀಟಿಂಗ್ ಮಾಡಿದಾಗ ಸುಮಾರು ಎಂಟು ಕೋಟಿ ರೂಪಾಯಿಯ ತುರ್ತು ನೆರವು ಬೇಕಾಗಿದೆ ಎಂಬ ನಿರ್ಧಾರಕ್ಕೆ ಬಂದೆವು. ಗ್ರಾಮೀಣ ಪ್ರದೇಶದಲ್ಲಿ ಬೇರೆ ಪ್ರದೇಶಗಳಲ್ಲಿ ಏನು ಸಮಸ್ಯೆ ಅನುಭವಿಸುತ್ತಿದೆ ಅದರ ಹತ್ತುಪಟ್ಟು ಸಮಸ್ಯೆಗಳು ನಮ್ಮ ಗ್ರಾಮೀಣ ಪ್ರದೇಶದಲ್ಲಿ ನೀರಿನ ಸಮಸ್ಯೆಯನ್ನು ಅನುಭವಿಸುತ್ತಿದ್ದೇವೆ. ಬಹುಶಃ ಏಪ್ರಿಲ್ ಮೇ ತಿಂಗಳಲ್ಲಿ ಶಾಸಕರಾದ ನಾವು ಹೇಗೆ ಎದುರಿಸುವುದು ಎನ್ನುವುದರ ಬಗ್ಗೆ ಬಹಳ ದೊಡ್ಡ ಕಾಳಜಿ ಹಾಗೂ ಬಹಳ ದೊಡ್ಡದಾದ ಆತಂಕದಲ್ಲಿ ನಾವು ಇದ್ದೇವೆ. ಈ ನಿಟ್ಟಿನಲ್ಲಿ ಕನಿಷ್ಠ ನಮಗೆ ಎಂಟು ಕೋಟಿ ರೂಪಾಯಿಗಳು ನಮಗೆ ಬೇಕಾಗಿದೆ. ತುರ್ತಾಗಿ ನಾನು ಹೇಳುವಂಥದ್ದು. ಇದರ ಬಗ್ಗ ತಾವು ಎಲ್ಲಾ ತರಹ ಮಾಹಿತಿಗಳನ್ನು ಜಿಲ್ಲಾಧಿಕಾರಿಗಳಿಂದ ಪಡೆದುಕೊಂಡು ಈ ಹಣವನ್ನು ಬಿಡುಗಡೆ ಮಾಡಿದಲ್ಲಿ ಕನಿಷ್ಟ ನಾವು ಮಾಚ್-ಏಪ್ರಿಲ್ ವರೆಗೆ ಆದರೂ ನಾವು ಎದುರಿಸಬಹುದು. ವಿಶೇಷವಾಗಿ ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಪಟ್ಟ ಹಾಗೆ ನಾವು ವ್ಯವಸ್ಥೆಯನ್ನು ಮಾಡಬಹುದು. ಗ್ರಾಮೀಣ ಪ್ರದೇಶದಲ್ಲಿರುವಂಥ ಕುಡಿಯುವ ನೀರಿನ ವ್ಯವಸ್ಥೆಗೆ ಸಂಬಂಧಪಟ್ಟಹಾಗೆ, ತಾವು ಈಗಾಗಲೇ ಹೇಳಿದ ಹಾಗೆ ಚರ್ಚೆಯಲ್ಲಿ ಬಂದ ಹಾಗೆ, 50 ಸಾವಿರ ರೂ ಡೆಪಾಸಿಟ್ ಕೊಡುವುದು ಮಾತ್ರವಲ್ಲ. ಒಂದು ಯೂನಿಟ್‌ಗೆ ಮೂರು ರೂಪಾಯಿ ನಲವತ್ತು ಪೈಸೆಕ್ಕಿಂತ ಜಾಸ್ತಿ ಚಾರ್ಜ್ ಮಾಡುವಂಥದ್ದು. ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ಹಣ ಕಟ್ಟಲಿಲ್ಲ ಎನ್ನುವ ಕಾರಣಕ್ಕಾಗಿಯೇ ಡಿಸ್‌ನೆಕ್ಷನ್ ಆಗುವಂಥದ್ದು ಇಂಥಹ ಅನೇಕ ಸಂಗತಿಗಳು ಬಂದಿರುವಂಥ ಹಿನ್ನೆಲೆಯಲ್ಲಿ, ಗ್ರಾಮೀಣ ಭಾಗದಲ್ಲಿರುವ ನಮ್ಮ ರೈತಾಪಿ ವರ್ಗದವರಿಗೆ ಯೂನಿಟ್‌ಗೆ ನಲವತ್ತು ಪೈಸೆಯಲ್ಲಿ ನಾವು ಕೊಡುತ್ತಿದ್ದೇವೆ. ಇದೇ ರೀತಿಯಲ್ಲಿ ಕುಡಿಯುವ ನೀರಿಗೋಸ್ಕರ ಈ ಒಂದು ಮಾಪನವನ್ನು ಇಟ್ಟುಕೊಂಡು ಅಲ್ಲಿ ಹೇಗೆ ಕೃಷಿಗೋಸ್ಕರ ನಲವತ್ತು ಪೈಸೆ ಕೊಡುತ್ತಿದ್ದೇವೆ, ಇಲ್ಲಿ ಕೂಡ ನಲವತ್ತು ಪೈಸೆ ಕೊಡುಹಂಥ ನಿಟ್ಟಿನಲ್ಲಿ ಮಾಡಿದರೆ, ಈಗಿರುವಂಥ ಬಜೆಟ್‌ನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗಬಹುದೇನೋ ಈ ನಿಟ್ಟಿನಲ್ಲಿ ಕೂಡ ತಾವು ಸ್ಪಂದಿಸಬೇಕು, ತಮ್ಮ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವ ವಿನಂತಿಯನ್ನು ಮಾಡಿ, ನಾನು ತಮ್ಮ ಮೂಲಕ ಮಾನ್ಯ ಸಚಿವರ ಹತ್ತಿರ, ವಿಶೇಷವಾಗಿ ವಿನಂತಿ ಮಾಡುವಂಥದ್ದು, ಎರಡನೇ ವೆಂಟೆಡ್ ಡ್ಯಾಂಮ್‌ಗೆ ತಾವು ಅನುಮತಿ ಕೊಡುತ್ತೇವೆ ಎನ್ನುವಂಥ ಘೋಷಣೆಯನ್ನು ತಾವು ಮಾಡಬೇಕೆಂದು ಹೇಳುವಂತಹ ವಿನಂತಿ ಹಾಗೂ ಈಗಿರುವ ವೆಂಟೆಡ್ ಡ್ಯಾಂಮ್‌ಗೆ ತುರ್ತಾಗಿ ಅದನ್ನು ದುರಸ್ತಿ ಮಾಡುವಂಥ ನಿಟ್ಟಿನಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು ಎನ್ನುವಂಥ ಒಂದು

ವಿನಂತಿಯನ್ನು ಮಾಡಿ, ಜಿಲ್ಲೆಗೆ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ಕಡೆಗಳಲ್ಲೂ ವಿತರಣೆ ವ್ಯವಸ್ಥೆ ಮಾಡುವಂಥ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ತಾವು ಎಂಟು ಕೋಟಿ ರೂಪಾಯನ್ನು ಬಿಡುಗಡೆ ಮಾಡಬೇಕು ಎನ್ನುವ ವಿನಂತಿಯನ್ನೂ ಕೂಡ ತಮ್ಮ ಮೂಲಕ ಮಾಡಲಿಕ್ಕೆ ಇಚ್ಛಿಸುತ್ತೇನೆ. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕೋಸ್ಕರ ತಮಗೆ ಧನ್ಯವಾದಗಳು.

**ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)** : ಮಾನ್ಯ ಅಧ್ಯಕ್ಷರೆ, ನಾವು ಈ ಚರ್ಚೆಯನ್ನು ಆರಂಭ ಮಾಡುವ ಮೊದಲು ಸರ್ಕಾರ ಒಂದು ಹೇಳಿಕೆ ಮಾಡಿದ ನಂತರ ಈ ಚರ್ಚೆ ಪ್ರಾರಂಭ ಮಾಡಿದ್ದರೆ ತುಂಬಾ ಒಳ್ಳೆಯದಾಗುತ್ತಿತ್ತು ಎಂದು ನನಗೆ ಅನ್ನಿಸುತ್ತೆ. ಕಾರಣ, ಈ ಸರ್ಕಾರ ಬಂದ ನಂತರ ಕುಡಿಯುವ ನೀರಿಗೆ ವ್ಯವಸ್ಥೆಗೋಸ್ಕರ ಎಷ್ಟು ಹಣವನ್ನು ಈಗಾಗಲೇ ಕೊಟ್ಟಿದೆ ಎನ್ನುವ ಸಾಮಾನ್ಯ ತಿಳುವಳಿಕೆ ಬಂದಿದ್ದರೆ ಅದು ಸರಿ ಇದೆ ಅಥವಾ ಇದು ತಪ್ಪು ಇದೆ ಎಂದು ವಿಮರ್ಶೆ ಮಾಡಬಹುದಾಗಿತ್ತು. ಆದರೆ ಈಗಾಗಲೇ ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆ. ನನಗೆ ಅನ್ನಿಸುತ್ತದೆ ಈ ಸರ್ಕಾರ ಬಂದ ಮೇಲೆ ಕುಡಿಯುವ ನೀರಿಗಾಗಿ ಒಂದು ಪೈಸೆಯನ್ನು ಸಹ ಇದುವರೆವಿಗೂ ಕೊಟ್ಟ ಹಾಗೆ ನನಗೇನೂ ಕಾಣುವುದಿಲ್ಲ. ಅದು ಏನಾದರೂ ಇದ್ದರೆ ಅವರು ಉತ್ತರದಲ್ಲಿ ಹೇಳಿದರೆ ನಾನು ಕನ್‌ವಿನ್ಸ್ ಆಗುತ್ತೇನೆ. ಏಕೆಂದರೆ, ಎಂಟು ತಿಂಗಳಲ್ಲಿ. ಆನ್ ಗೋಯಿಂಗ್ ವರ್ಕ್ಸ್‌ಗೆ ಕೂಡ ಹಣವನ್ನು ಕೊಡಲಿಲ್ಲ. ಹಿಂದಿನ ಸರ್ಕಾರ ಮಂಜೂರು ಮಾಡಿರತಕ್ಕಂಥ ಯೋಜನೆಗಳೂ ಕೂಡ ಇವತ್ತು ಹಣ ಇಲ್ಲವೆಂದು ಹೇಳಿ ಅರ್ಧಬರ್ಧ ನಿಂತು ಬಿಟ್ಟಿವೆ. ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ್ ಕಮಿಟಿಗಳನ್ನು ಇವರು ಮಾಡಿದ್ದಾರೆ. ಬಹಳ ದೊಡ್ಡದಾಗಿ ಪತ್ರಿಕೆಗಳಲ್ಲಿ ಬಂತು. ಜನ ನಮ್ಮ ಹತ್ತಿರ ಕೇಳಿದರು ಕಮಿಟಿ ಮಾಡಿದ್ದಾರೆಂದು ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ, ನೀವು ಶಾಸಕರು ಏಕೋ ಕೇಳುವುದಿಲ್ಲ ನಮ್ಮ ಊರಿಗೆ ಕುಡಿಯುವ ನೀರು ಇಲ್ಲ ನಿಮ್ಮದೇನೋ ಇದರಲ್ಲಿ ಪಾಲಿಟಿಕ್ಸ್ ಇದೆ ಎಂದು ಹೇಳುತ್ತಾರೆ. ಒಟ್ಟಾರೆಯಾಗಿ ನಾವು ಚುನಾಯಿತ ಪ್ರತಿನಿಧಿಗಳು ನಾವು ತಲೆ ಎತ್ತಿ ಓಡಾಡುವುದು ಹಳ್ಳಿಗಳಲ್ಲಿ ಕಷ್ಟವಾಗುತ್ತದೆ. ಸಮಿತಿಗಳನ್ನು ಮಾಡಿದಿರಿ. ಅವರಿಗೆ ಏನು ಅಧಿಕಾರ ಕೊಟ್ಟಿದ್ದೀರಿ, ಎಷ್ಟು ಹಣ ಅವರ ಕೈಯಲ್ಲಿ ಕೊಟ್ಟಿದ್ದೀರಿ. ತತ್‌ಕ್ಷಣವೇ ಡ್ರೈ ಆಗಿ ಬೋರ್‌ವೆಲ್ ಒಣಗಿತು ಎಂದರೆ ಆ ಊರಿನ ಜನ 5–6 ಕಿಲೋ ಮೀಟರ್ ದೂರ ಹೋಗಬೇಕೆಂದಾದರೆ ತಕ್ಷಣ ಒಂದು ಬೋರ್‌ವೆಲ್ ಕೊರೆಯುವುದಕ್ಕೆ ಅವರ ಹತ್ತಿರ ಹಣ ಇದೆಯೇ? ಅವರ ಹತ್ತಿರ ಯಾವ ಹಣಕಾಸಿನ ಸೌಲಭ್ಯ ಕೊಟ್ಟಿದ್ದೀರಿ ಎನ್ನುವುದನ್ನು ತಾವು ದಯವಿಟ್ಟು ಮನದಟ್ಟು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನಮಗೂ ಜನರಿಗೂ ಎಲ್ಲೋ ಒಂದು ಕಡೆ ಮಧ್ಯದಲ್ಲಿ ಸಂಶಯವನ್ನು ಹುಟ್ಟು ಹಾಕಿದ ಹಾಗೆ ಆಗುತ್ತದೆ. ಇದರಿಂದ ಬೇರೆ ಏನೂ ಆಗುವುದಿಲ್ಲ. ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಇವರ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆ ಎಂದು ಹೇಳುವುದಾದರೆ, ಪಾಪ ಅವರು ಗ್ರಾಮೀಣಾಭಿವೃದ್ಧಿಯ ಕುಡಿಯುವ ನೀರು ಇಲಾಖೆಯ ಸಚಿವರಾಗಿ ಇತ್ತೀಚೆಗೆ ವಹಿಸಿಕೊಂಡಿದ್ದಾರೆ. ಪಾಪ ಅವರ ಬಗ್ಗೆ ನಾನು ಅಪಾದನೆ ಮಾಡುತ್ತಿಲ್ಲ. ಏಕೆಂದರೆ, ಮಂತ್ರಿ ಮಾಡುತ್ತಾರೆ ಹಣ ಕೊಡುವುದಿಲ್ಲವೆಂದು ಹೇಳಿದರೆ ಬರಿ ಮಂತ್ರಿ ಬಿಟ್ಟರೆ ಏನೂ ಆಗುವುದಿಲ್ಲ. ಅವರ ಕೈಗೆ ಸಾಕಷ್ಟು ಹಣ ಕೊಡಬೇಕಾಗುತ್ತದೆ ಅವರು ಈ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡಬೇಕಾಗುತ್ತದೆ. ಏಕೆ ಈ ಮಾತು ಹೇಳುತ್ತೇನೆಂದರೆ, ನನ್ನ ತಾಲ್ಲೂಕಿನಲ್ಲಿ ಮಾನ್ಯ ಸಚಿವರು ದಯವಿಟ್ಟು ಗಮನಿಸಬೇಕು.

**ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ, ನೀರು ಸರಬರಾಜು ಮತ್ತು ಒಳಚರಂಡಿ ರಾಜ್ಯ ಸಚಿವರು)** : ಮಾನ್ಯ ಅಧ್ಯಕ್ಷರೆ, ಅವರು ಹಣದ ಬಗ್ಗೆ ಹೇಳಿದರು ಅದಕ್ಕೆ ವಿವರ ಕೊಡುತ್ತೇನೆ.

ಸನ್ಮಾನ್ಯ ಅರಗ ಜ್ಞಾನೇಂದ್ರರವರು ಸರ್ಕಾರ ಹಣವೇ ಕೊಟ್ಟಿಲ್ಲ, ಸಚಿವರು ಹಣ ಇದೆ ಎಂದು ಹೇಳುತ್ತಾರೆಂದು ಹೇಳಿದರು. ಈಗ ನಾವು ನಮ್ಮ ಸರ್ಕಾರದ ದಾಖಲೆಗಳ ಪ್ರಕಾರ 27 ಜಿಲ್ಲೆಗಳಲ್ಲಿ ಎಲ್ಲಾ ಸ್ಕೀಂಗಳು ಅನೇಕ ಸ್ಕೀಂಗಳ ಕೆಳಗಡೆ ಪ್ರತಿಯೊಂದು ಜಿಲ್ಲೆಗೂ ಬೆಂಗಳೂರು ರೂರಲ್‌ಗೆ 678 ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡಿದ್ದೇವೆ. ಖರ್ಚಾಗಿರುವುದು 459.80 ಲಕ್ಷ ರೂ. ಇನ್ನೂ ಉಳಿದಿದೆ. ಅದೇ ರೀತಿ ಬೆಂಗಳೂರು ಅರ್ಬನ್‌ಗೆ 466.9 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. 328.71 ಲಕ್ಷ ರೂಪಾಯಿ ಕರ್ಚಾಗಿದೆ ಅದೇ ರೀತಿ ಕೋಲಾರ ಜಿಲ್ಲೆಗೆ 466 ಲಕ್ಷ ರೂ ಬಿಡುಗಡೆ ಆಗಿದ್ದರೆ 328 ಲಕ್ಷ ರೂ ಖರ್ಚಾಗಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ದಯಮಾಡಿ ಅದರ ಪ್ರತಿಯನ್ನು ಕೊಡಿಸಿಬಿಡಿ.

**ಅಧ್ಯಕ್ಷರು** : ಪ್ರತಿ ಎಲ್ಲಿ ಕೊಡುತ್ತಾರೆ ಅವರ ಹತ್ತಿರ ಇರುವ ಮಾಹಿತಿಯನ್ನು ಅವರು ಹೇಳುತ್ತಿದ್ದಾರೆ.

**ಶ್ರೀ ಬಿ. ಸತ್ಯನಾರಾಯಣ** : ಒಂದು ನಿಮಿಷ ತಾವು ಕೇಳಬೇಕು, ನನ್ನ ಜಿಲ್ಲೆಯಾದ ತುಮಕೂರು ಜಿಲ್ಲೆಗೆ 823 ಲಕ್ಷ ರೂ ಬಿಡುಗಡೆ ಆಗಿದ್ದರೆ 438 ಲಕ್ಷ ರೂ ಖರ್ಚು ಆಗಿದೆ, ಚಿತ್ರದುರ್ಗ ಜಿಲ್ಲೆಗೆ 532 ಲಕ್ಷ ರೂ ಬಿಡುಗಡೆ ಮಾಡಿದ್ದೇವೆ 452 ಲಕ್ಷ ರೂ ಖರ್ಚಾಗಿದೆ. ಹೀಗಾಗಿ ಒಟ್ಟಾರೆ ಯಾರು ಹೇಳುವುದಾದರೆ, ಎಲ್ಲಾ 27 ಜಿಲ್ಲೆಗಳಿಂದ, 14,61,74 ಲಕ್ಷ ರೂ ಹಣವನ್ನು ಬಿಡುಗಡೆ ಮಾಡಿದ್ದೇವೆ, 9,473.35 ಲಕ್ಷ ರೂ ಹಣ ಖರ್ಚಾಗಿದೆ. ಇನ್ನೂ ಜಿಲ್ಲಾ ಪಂಚಾಯಿತಿಯಲ್ಲಿ 51 ಕೋಟಿ ರೂ ಈ ಒಂದು ಯೋಜನೆಗೆ ಪ್ಲಾನ್ ಅಂಡ್ ನಾನ್ ಪ್ಲಾನ್ ನಲ್ಲಿ ಹಣ ಇದೆ.

**ಶ್ರೀ ಅರಗ ಜ್ಞಾನೇಂದ್ರ** : ಮಾನ್ಯ ಸಚಿವರು ಕೋಟಿಗಟ್ಟಲೆ ಹಣದ ಲೆಕ್ಕ ಹೇಳಿದ್ದಾರೆ, ನಾನು ವಾಸ್ತವಿಕತೆಯಾಗಿ ಹೇಳುತ್ತೇನೆ, ಮಾನ್ಯ ಸಚಿವರ ಹಳ್ಳಿಗಳಲ್ಲಿ ಈ ಸ್ಥಿತಿ ಇರಬಹುದು. ನಾನು ಕೇಳುವುದು ಏನೆಂದರೆ.

**ಶ್ರೀ ಬಿ. ಸತ್ಯನಾರಾಯಣ** : ಮಾನ್ಯ ಅರಗ ಜ್ಞಾನೇಂದ್ರರವರ ಜಿಲ್ಲೆಗೆ ಈ ವರ್ಷಕ್ಕೆ 374.48 ಲಕ್ಷ ರೂ ಬಿಡುಗಡೆ ಆಗಿದ್ದರೆ 272.78 ಲಕ್ಷ ರೂ ಖರ್ಚಾಗಿದೆ.

**ಶ್ರೀ ಅರಗ ಜ್ಞಾನೇಂದ್ರ** : ಸ್ವಾಮಿ, ಈ ಲೆಕ್ಕ ಕೇಳಿ ಹಳ್ಳಿಗಳಲ್ಲಿ ನಮಗೆ ನಿಮಗೆ ಓಟು ಕೊಡುವುದಿಲ್ಲ. ಈ ಲೆಕ್ಕ ನೀವು ಹೇಳಿಬಿಡುತ್ತೀರಿ, ಮಾನ್ಯ ಸಚಿವರೇ, ಬಹುಶಃ ನನ್ನ ಕ್ಷೇತ್ರ ನಿಮ್ಮ ಕ್ಷೇತ್ರ ಇವು ಯಾವ ಹೊರತೂ ಅಲ್ಲ. ಕುಡಿಯುವ ನೀರು ಎಲ್ಲಾ ಕಡೆ ಕೊಡುತ್ತೇವೆ, ಅಥವಾ ಕೊಟ್ಟಿದ್ದೇವೆ. ನೀವು ಅಲ್ಲ ಹಿಂದಿನ ಸಚಿವರು ಇದೇ ರೀತಿ ಹೇಳಿದ್ದರು. ನಮಗೆ ಏನೂ ತೊಂದರೆಯಿಲ್ಲ ಕುಡಿಯುವ ನೀರಿಗೆ ಎಷ್ಟು ಕೋಟಿ ರೂ. ಬೇಕಾದರೂ ಕೊಡುತ್ತೇವೆ. ಜಿಲ್ಲಾಧಿಕಾರಿಗಳ ಹತ್ತಿರ ದುಡ್ಡು ಇದೆ ಎಂದು ಹೇಳಿದರು. ಜಿಲ್ಲಾಧಿಕಾರಿಗಳ ಹತ್ತಿರ ಹೋದರೆ ನಮ್ಮ ಹತ್ತಿರ ಎಲ್ಲಿದೆ ದುಡ್ಡು ಎಂದು ಹೇಳುತ್ತಾರೆ.

**ಅಧ್ಯಕ್ಷರು** : ಮಾನ್ಯ ಅರಗಜ್ಞಾನೇಂದ್ರರವರೆ, ಮಾನ್ಯ ಸಚಿವರು ಯಾವ್ಯಾವ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಮತ್ತು ಇದರಲ್ಲಿ ಎಷ್ಟು ಖರ್ಚಾಗಿದೆ ಮತ್ತು ಇನ್ನು ಎಷ್ಟು ಉಳಿದಿದೆ ಎಂಬ ವಿವರವನ್ನು ಕೊಟ್ಟಿದ್ದಾರೆ, ಆದ್ದರಿಂದ, ಇದರ ಬಗ್ಗೆ ಡಿಸ್‌ಪ್ಯೂಟ್ ಮಾಡತಕ್ಕಂಥದರಲ್ಲಿ ಏನು ಅರ್ಥವಿಲ್ಲ ಆದ್ದರಿಂದ, ಬೇರೆ ಏನಾದರೂ ಸಮಸ್ಯೆ ಇರುವ ಬಗ್ಗೆ ಮಾತ್ರ ಮಾತನಾಡಿ.

**ಶ್ರೀ ಅರಗ ಜ್ಞಾನೇಂದ್ರ** : ನೀವು ಒಪ್ಪಿಕೊಳ್ಳುವುದಾದರೆ ನಮ್ಮದೇನೂ ಅಡ್ಡಿಯಿಲ್ಲ. ನೀವೂ ಕೂಡ ಒಂದು ಕ್ಷೇತ್ರದಿಂದ ಬಂದಿದ್ದೀರಿ.

**ಅಧ್ಯಕ್ಷರು** : ನಿಮ್ಮದೂ ಕೂಡ ಒಂದು ಕ್ಷೇತ್ರ ಇದೆ. ಹಾಗೆಯೇ ಇಲ್ಲಿರತಕ್ಕಂಥವರೆಲ್ಲಾ ಒಂದೊಂದು ಕ್ಷೇತ್ರದಿಂದ ಬಂದಿದ್ದಾರೆ. ಆದರೆ, ಏನಾಗಿದೆ ಎಂದರೆ, ಅವರು ನೀಡಿರತಕ್ಕಂಥ ಅಂಕಿ-ಅಂಶಗಳ ಬಗ್ಗೆ. at the stage we cannot dipute ಇನ್ನು ಬಹಳಷ್ಟು ಹಣ ಇದೆ ಎಂದು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ, ನಿಮ್ಮ ಕ್ಷೇತ್ರ ಅಥವಾ ನಿಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಏನಾದರೂ ಸಮಸ್ಯೆಗಳಿದ್ದರೆ ಅವುಗಳನ್ನು ಹೇಳಿ.

**ಶ್ರೀ ಅರಗ ಜ್ಞಾನೇಂದ್ರ** : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ತತ್‌ಕ್ಷಣ ಯಾವುದಾದರೊಂದು ಬೋರ್‌ವೆಲ್ ಡ್ರೈ ಆದಾಗ ಅದನ್ನು ಮತ್ತೆ ಕೊರೆಯುವುದಕ್ಕೆ ತಾಲ್ಲೂಕು ಟಾಸ್ಕ್‌ಫೋರ್ಸ್ ಕಮಿಟಿಗೆ ಅಧಿಕಾರವಿದೆಯೆ? ಮತ್ತೆ ಈ ರೀತಿಯಾದ ಸಮಸ್ಯೆಗಳನ್ನು ಸುಧಾರಣೆ ಮಾಡುವುದಕ್ಕೋಸ್ಕರ ಸುಮಾರು 25 ರಿಂದ 30 ಲಕ್ಷ ರೂಪಾಯಿಗಳನ್ನು ಒಂದೊಂದು ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರ ಕೈಯಲ್ಲಿ ಕೊಟ್ಟಿದ್ದೀರಾ?

**ಶ್ರೀ ಬಿ. ಸತ್ಯನಾರಾಯಣ(ಗ್ರಾಮೀಣ ನೀರು ಪೂರೈಕೆ ಸಚಿವರು)** : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದ ಹಾಗೆ, ಜಿಲ್ಲಾ ಪಂಚಾಯತ್‌ಗಳ ವಿವಿಧ ಯೋಜನೆಗಳಿಗೋಸ್ಕರ ಒಟ್ಟು 27 ಜಿಲ್ಲೆಗಳಿಂದ 51 ಕೋಟಿ ರೂಪಾಯಿ ಇಡಲಾಗಿದೆ. ಮತ್ತೆ ಮೊನ್ನೆದಿವಸ ಅಂದರೆ, ದಿನಾಂಕ 24-01-2005ರಂದು 27.60 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಇದಲ್ಲದೆ. ಬರ ಎಂದು ಡಿಕ್ಲೇರ್ ಮಾಡಿದ ಕಡೆಗೆ ಬರ ಪರಿಹಾರ ನಿಧಿಯಿಂದ 20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಮತ್ತೆ ಡಿ.ಡಿ.ಪಿ. ಯೋಜನೆಯಲ್ಲಿ 209.96 ಕೋಟಿ ರೂಪಾಯಿಗಳನ್ನು ದಿನಾಂಕ 25-1-2005 ರಂದು ಬಿಡುಗಡೆ ಮಾಡಲಾಗಿದೆ. ಈ ಹಣವನ್ನು ಇನ್ನು ಎರಡು ತಿಂಗಳಲ್ಲಿ ಅಂದರೆ, ಮಾರ್ಚ್ ತಿಂಗಳೊಳಗಾಗಿ ಖರ್ಚು ಮಾಡಬೇಕೆಂದು ಮತ್ತು ಈ ಉಪಯೋಗ ಮಾಡಿಕೊಂಡು ಹೊಸದಾಗಿ ಬೋರ್‌ವೆಲ್‌ನ್ನು ಕೊರೆಸುವುದಕ್ಕೆ ಮತ್ತು ಇರತಕ್ಕಂಥ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸುವುದಕ್ಕಾಗಿ ಮತ್ತು ಪೈಪ್‌ಲೈನ್ ಮತ್ತು ಮೋಟರ್ ತೆಗೆದುಕೊಳ್ಳಬಹುದೆಂದು ಮತ್ತು ಇನ್ನಿತರ ವ್ಯವಸ್ಥೆಗಳಿಗೆ ಸದರಿ ಹಣವನ್ನು ಉಪಯೋಗ ಮಾಡಬಹುದೆಂದು ಸಂಬಂಧಪಟ್ಟಂಥ ತಾಲ್ಲೂಕು ಟಾಸ್ ಫೋರ್ಸ್ ಕಮಿಟಿಗಳಿಗೆ ಈಗಾಗಲೇ ಡೈರೆಕ್ಷನ್ ಕೊಟ್ಟಿದ್ದೇವೆ.

**ಶ್ರೀ ಅರಗ ಜ್ಞಾನೇಂದ್ರ** : ಮಾನ್ಯ ಸಚಿವರು, ಇದಕ್ಕೆ ಸಂಬಂಧಪಟ್ಟಂಥ ಡೀಟೇಲ್ಸ್‌ನ್ನು ಅನಂತರ ಹೇಳಲಿ. ಈ ಸಂದರ್ಭದಲ್ಲಿ ನಾನು ತಮಗೆ ಹೇಳುವುದೇನೆಂದರೆ, ನನ್ನ ಕ್ಷೇತ್ರದಲ್ಲಿ ಬೋರ್‌ವೆಲ್ ಕೊರೆದು ಸುಮಾರು 6 ತಿಂಗಳಾಗಿದ್ದರೂ ಕೂಡ ಒಂದು ಹ್ಯಾಂಡ್‌ಪಂಪ್‌ನ್ನು ಇದುವರೆಗೂ ಹಾಕಿಲ್ಲ. ಹ್ಯಾಂಡ್‌ಪಂಪ್ ಹಾಕುವುದಕ್ಕೆ ದುಡ್ಡಿಲ್ಲವೆಂದು ಹೇಳುತ್ತಾರೆ. ಇದು ನನ್ನ ಕ್ಷೇತ್ರದಲ್ಲಿರತಕ್ಕಂಥ ಸಮಸ್ಯೆಯಾಗಿದೆ. ತಾವು ಬೇಕಾದರೆ ಯಾರನ್ನಾದರೂ ಕಳುಹಿಸಿ ಇದನ್ನು ವಿಮರ್ಶೆ ಮಾಡಿಸಬಹುದು. ಇವತ್ತಿನ ದಿವಸ ಒಂದು ಹ್ಯಾಂಡ್‌ಪಂಪ್ ಹಾಕುವುದಕ್ಕೆ 5 ಸಾವಿರ ರೂಪಾಯಿ ಇಲ್ಲವೆಂದು ಹೇಳುತ್ತಿದ್ದಾರೆ. ಆ ಬೋರ್‌ವೆಲ್‌ಗೆ ಮೋಟಾರ್ ಹಾಕಿಸಿ ಎಂದು ನಾನು ಕೇಳಿಲ್ಲ.

ಈಗಾಗಲೇ ಕೊರೆದಿರತಕ್ಕಂಥ ಒಂದು ಬೋರ್‌ವೆಲ್‌ಗೆ ಹ್ಯಾಂಡ್ ಪಂಪ್ ಹಾಕಿಸುವುದಕ್ಕೂ ದುಡ್ಡಿಲ್ಲವೆಂದರೆ ಹೇಗೆ?

**ಅಧ್ಯಕ್ಷರು** : ಮಾನ್ಯ ಅರಗಜ್ಞಾನೇಂದ್ರರವರೆ, ಮಾನ್ಯ ಸಚಿವರು ನೀಡಿರತಕ್ಕಂಥ ಅಂಕಿ-ಅಂಶಗಳ ಪ್ರಕಾರ ಶಿವಮೊಗ್ಗ ಜಿಲ್ಲೆಯಲ್ಲಿ ಇನ್ನೂ 120 ಲಕ್ಷ ರೂಪಾಯಿ ಉಳಿದಿದೆ ಎಂದು ಹೇಳಿದ್ದಾರೆ. ಆದರೆ, ಅಲ್ಲಿ ಕೇವಲ 5 ಸಾವಿರ ರೂಪಾಯಿ ಇಲ್ಲವೆಂದರೆ, ಸತ್ಯ ಯಾವುದು, ಅಸತ್ಯ ಯಾವುದೆಂದು ಗೊತ್ತಾಗುತ್ತಿಲ್ಲ.

**ಶ್ರೀ ಅರಗ ಜ್ಞಾನೇಂದ್ರ** : ಮಾನ್ಯ ಅಧ್ಯಕ್ಷರೆ, ನಿಮ್ಮ ಪೀಠ ತುಂಬಾ ದೊಡ್ಡದು. ಆದ್ದರಿಂದ ಈ ಸದನದಿಂದ ಯಾರನ್ನಾದರೂ ನೇಮಕ ಮಾಡಿ ಇದನ್ನು ಪರಿಶೀಲನೆ ಮಾಡಿಸಿ. ಅಥವಾ ನಿಮ್ಮ ಛೇಂಬರ್‌ಗೆ ಬಂದು ಅಲ್ಲಿನ ದೂರವಾಣಿ ನಂಬರ್ ಕೊಡುತ್ತೇನೆ. ಅಲ್ಲಿ ಎಷ್ಟು ಬೋರ್‌ವೆಲ್ ಕೊರೆದಿದ್ದು ಇನ್ನೂ ಎಷ್ಟು ಬೋರ್‌ವೆಲ್‌ಗೆ ಹ್ಯಾಂಡ್‌ಪಂಪ್ ಹಾಗಿಲ್ಲ ಎಂಬುದರ ಬಗ್ಗೆ ತಾವೇ ದೂರವಾಣಿ ಮಾಡಿ ಕೇಳಬಹುದು. ಮತ್ತೆ ಶಿವಮೊಗ್ಗ ಜಿಲ್ಲಾಪಂಚಾಯತ್‌ನ ಎಗ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್ ಸ್ಟೋರ್‌ನಿಂದ ತೀರ್ಥಹಳ್ಳಿಗೆ ಸಾಗಾಣಿಕೆ ಮಾಡುವುದಕ್ಕೂ ನಮ್ಮ ಹತ್ತಿರ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಮತ್ತೆ ಅವರ ಜೀಪ್‌ಗೆ ಡೀಸಲ್ ಹಾಕಿಸುವುದಕ್ಕೂ ಅವರ ಹತ್ತಿರ ಹಣವಿಲ್ಲ. ಹಾಗೆಯೇ ಅವರ ಜೀಪನ್ನು ರಿಪೇರಿ ಮಾಡಿಸಿಕೊಳ್ಳುವುದಕ್ಕೂ ಜಿಲ್ಲಾಪಂಚಾಯತ್ ಎಲ್ಲಿ ಹತ್ತಿರ 5 ಸಾವಿರ ರೂ ಹಣ ಇಲ್ಲ. ಹಾಗೆಯೇ ದೂರವಾಣಿಯ ಬಿಲ್ ಕಟ್ಟದೇ ಇರುವುದರಿಂದ ದೂರವಾಣಿ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತು. ಇದು ನಮ್ಮ ಮರ್ಯಾದೆ ಪ್ರಶ್ನೆ ಎಂದು ಅಲ್ಲಿರತಕ್ಕಂಥ ಗುತ್ತಿಗೆದಾರರಿಂದ ಇದಕ್ಕೆ ಹಣ ಕಟ್ಟಿಸಿ ಮತ್ತೆ ರೀ ಕನೆಕ್ಟ್ ಮಾಡಿಸಿದ್ದೇವೆ. ಇಂಥ ಪರಿಸ್ಥಿತಿಯಲ್ಲಿಯೂ ಕೂಡ ಕೋಟಿಗಟ್ಟಲೆ ಹಣದ ಬಗ್ಗೆ ಇವರು ಲೆಕ್ಕ ಹೇಳುತ್ತಿದ್ದಾರೆ. ಈಗಿನ ವಾಸ್ತವಿಕ ಚಿತ್ರಣವನ್ನು ತಾವು ಹೇಳಿ. ಸರ್ಕಾರವನ್ನು ನೀವು ರಕ್ಷಣೆ ಮಾಡಿದ ಕೂಡಲೇ ಕುಬೇರ ಕೂಡ ಪೂರ್ಣ ಹಣವನ್ನು ತಮಗೆ ತಂದು ಕೊಡುವುದಿಲ್ಲ. ವಾಸ್ತವ ಪರಿಸ್ಥಿತಿ ನಮಗೂ ನಿಮಗೂ ಕೂಡ ಗೊತ್ತಿದೆ. ಮಾಧ್ಯಮದವರು ಇಲ್ಲಿಯೇ ಇದ್ದಾರೆ. ನಿಮಗೇನೂ ತೊಂದರೆಯಿಲ್ಲವೆಂದು ತಾವು ಹೇಳತಕ್ಕಂಥದ್ದನ್ನು ನಾಳೆ ದಿವಸ ಪತ್ರಿಕೆಗಳಲ್ಲಿ ಬರೆಯುತ್ತಾರೆ. ಆದರೆ, ನಾವು ನಾಳೆ ದಿವಸ ನಮ್ಮ ಕ್ಷೇತ್ರಕ್ಕೆ ಹೋದಾಗಲೇ ನಿಮ್ಮ ಪರಿಸ್ಥಿತಿ ಗೊತ್ತಾಗುವುದು.

**ಅಧ್ಯಕ್ಷರು** : ಮಾನ್ಯ ಸಚಿವರು ಏನು ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ. ಅದನ್ನು ಡಿಸ್‌ಪ್ಯೂಟ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಆ ರೀತಿಯಾಗಿ ಈ ಸಭೆಯಲ್ಲಿ ಹೇಳಿದರೆ ಏನಾಗುತ್ತದೆ?

**ಶ್ರೀ ಅರಗ ಜ್ಞಾನೇಂದ್ರ** : ತಾವು ಹೇಳತಕ್ಕಂಥದು ಸರಿ. ಗುತ್ತಿಗೆದಾರರಿಗೆ ಎಷ್ಟು ವರ್ಷಗಳಿಂದ ಬಾಕಿ ಹಣ ಕೊಡಬೇಕಾಗಿದೆ ಎಂಬುದನ್ನು ತಾವು ಹೇಳಬೇಕು. ಮತ್ತೆ ಈ ವರ್ಷ ಕುಡಿಯುವ ನೀರಿಗೋಸ್ಕರ ಎಷ್ಟು ಖರ್ಚು ಮಾಡುವುದಕ್ಕೆ ಕೊಟ್ಟಿದ್ದೀರಿ? ಸುಮಾರು ಮೂರ್‍ನಾಲ್ಕು ವರ್ಷಗಳಿಂದ ಹಣ ಕೊಟ್ಟಿಲ್ಲ. ಆಗಾಗ ಬಂದಂಥ ಹಣವನ್ನು ಬಿಡುಗಡೆ ಮಾಡಿರತಕ್ಕಂಥದ್ದನ್ನು ಈ ರೀತಿಯಾಗಿ ಲೆಕ್ಕ ಕೊಡುತ್ತಾ ಹೋದರೆ ನಾಳೆ ದಿವಸ ನಾವು ಮತ್ತು ನೀವು ಕ್ಷೇತ್ರಕ್ಕೆ ಹೋಗುವುದಕ್ಕೆ ಕಷ್ಟವಾಗುತ್ತದೆ. ನಾನು ಮೊನ್ನೆ ದಿವಸ ರೆವಿನ್ಯೂ ಕಮಿಷನರ್ ಹತ್ತಿರ ಹೋಗಿ ಮಲೆನಾಡು ಪ್ರದೇಶವನ್ನು ಬರಗಾಲ ಪ್ರದೇಶ ಎಂದು ದಯವಿಟ್ಟು ಡಿಕ್ಲೇರ್ ಮಾಡಬೇಕು ಏಕೆಂದರೆ, ಇವತ್ತಿನ ಪರಿಸ್ಥಿತಿಯಲ್ಲಿ

ಅಲ್ಲಿ ಅಂತರ್ಜಲ ಮಟ್ಟ ತುಂಬಾ ಕೆಳಮಟ್ಟಕ್ಕೆ ಹೋಗಿದೆ. ಮತ್ತು ತೀರ್ಥಹಳ್ಳಿಗೆ ಕುಡಿಯುವ ನೀರಿಲ್ಲ ಹಾಗೂ ಅಲ್ಲಿರತಕ್ಕಂಥ ಜನರಿಗೆ ಕೆಲಸವಿಲ್ಲ ಆದ್ದರಿಂದ, ಇದನ್ನು ಬರಗಾಲ ಪ್ರದೇಶ ಎಂದು ಡಿಕ್ಲೇರ್ ಮಾಡಿ ಎಂದು ಕೇಳಿದ್ದಕ್ಕೆ, ರೆವಿನ್ಯೂ ಕಮಿಷನರ್‌ರವರು ಏನು ಹೇಳಿದರೆಂದರೆ, ನಾನು ಅಲ್ಲಿ ಡಿ.ಸಿ. ಆಗಿ ಕೆಲಸ ಮಾಡಿದ್ದೇನೆ. ತಾವೇಕೆ ಈ ರೀತಿ ಹೇಳುತ್ತಿದ್ದೀರಿ. ಇವತ್ತಿನ ದಿವಸ ಮಲೆನಾಡು ಪ್ರದೇಶ ಸೆಕೆಂಡ್ ಚಿರಾಪುಂಜಿ ಆಗಿದ್ದು, ಆಗುಂಬೆಯಲ್ಲಿ ಮಳೆಯಾಗುತ್ತಿದೆ ಎಂದು ಹೇಳಿದರು. ಸುಮಾರು 10 ರಿಂದ 25 ದಿವಸ ಮಳೆಯಾಗಿದ್ದರೂ ಕೂಡ ಅದು ಪೂರ್ಣವಾಗಿ ಡ್ರೈ ಆಗಿ ಹೋಗುತ್ತದೆ. ಮತ್ತೆ ಆಗುಂಬೆಯಲ್ಲಿ ಮಳೆಯಾದರೆ ನನ್ನ ತಾಲ್ಲೂಕಿನ ಮಂಡಗದ್ದೆ ಮತ್ತು ಅಗ್ರಹಾರ ಹೋಬಳಿ ಭಾಗದಲೆಲ್ಲಾ ಇವತ್ತಿನ ದಿವಸ ಸಂಪೂರ್ಣವಾಗಿ ಡ್ರೈ ಆಗಿದೆ. ಇದನ್ನು ಹೇಳುವುದಕ್ಕೆ ನಮಗೆ ಬೇಜಾರಾಗುತ್ತದೆ. ನಮಗೆ ದಿನನಿತ್ಯ ಬರುವ ದೂರವಾಣಿ ಕರೆಗಳಿಂದ ನಾವು ರಾತ್ರಿ ಸಮಯದಲ್ಲಿ ಮಲಗುವುದಕ್ಕೆ ಆಗುತ್ತಿಲ್ಲ. ಹೆಣ್ಣುಮಕ್ಕಳು ನಮ್ಮ ಮನೆ ಎದುರಿಗೆ ಕೂಡ ಹಿಡಿದುಕೊಂಡು ಕುಳಿತುಕೊಂಡು ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಕ್ಕೆ ಇವತ್ತಿನ ದಿವಸ ನಮಗೆ ಕುಡಿಯುವ ನೀರಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ದಯವಿಟ್ಟು ವಿನಂತಿ ಮಾಡಿಕೊಳ್ಳುವುದೇನೆಂದರೆ, ಕುಡಿಯುವ ನೀರಿಗೆ ಏನಾದರೂ ಸ್ವಲ್ಪ ಹಣ ಕೊಟ್ಟು ಇವತ್ತಿನ ದಿವಸ ಬೋರ್‌ವೆಲ್ ಫೇಲ್ ಆಗಿದ್ದರೆ ಮತ್ತು ಸಿಲ್ಟ್ ಆಫ್ ಆಗಿದ್ದರೆ ಅವುಗಳನ್ನು ಡೀ ಸಿಲ್ಟಿಂಗ್ ಮಾಡಲಿಕ್ಕೆ ಕ್ಲೀನಿಂಗ್ ರಿಗ್‌ಗಳನ್ನು ಕಳುಹಿಸಿ. ಆದರೆ, ನಿಮ್ಮ ಸರ್ಕಾರದಲ್ಲಿ ಕ್ಲೀನ್ ಮಾಡತಕ್ಕಂಥ ರಿಗ್‌ಗಳು ಸರಿಯಾಗಿಲ್ಲ. ಆದ್ದರಿಂದ ಖಾಸಗಿ ಗುತ್ತಿಗೆದಾರರ ಕಡೆಯಿಂದ ಕ್ಲೀನಿಂಗ್ ರಿಗ್‌ಗಳನ್ನು ಪಡೆದುಕೊಂಡು ಕ್ಲೀನ್ ಮಾಡುವುದಕ್ಕೆ ತಾವು ದಯವಿಟ್ಟು ಹೇಳಬೇಕು. ಈ ಕೆಲಸ ದಯವಿಟ್ಟು ಆಗಲೇ ಬೇಕಾಗಿದೆ. ಹಾಗೆಯೇ ಜಿಲ್ಲಾಪರಿಷತ್‌ನ ಇಂಜಿನಿಯರ್ ವಿಭಾಗದಲ್ಲಿರತಕ್ಕಂಥ ಜೀಪ್‌ನ್ನು ನಿರ್ವಹಣೆಗೆ ಹಣ ಕೊಡಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಒಳ್ಳೆಯ ಕೆಲಸವಾಗಿದೆ ಎಂದು ಸಚಿವರಾಗಿರತಕ್ಕಂಥ ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದರು. ಬೋರ್‌ವೆಲ್ ರಿಪೇರಿಗೋಸ್ಕರ ಅಥವಾ ಒಂದು ವಾಷರ್ ಹಾಕುವುದಕ್ಕೋಸ್ಕರ ಜನರು ಶಾಸಕರ ಹತ್ತಿರ ಬಂದು ಅರ್ಜಿ ಕೊಡಬಾರದು. ಇದು ಭೂಷಣವೂ ಕೂಡ ಅಲ್ಲ. ನಾವು ಮಾಡುವುದಕ್ಕೆ ದೊಡ್ಡ ದೊಡ್ಡ ಕೆಲಸಗಳಿರುತ್ತವೆ. ಬೋರ್‌ವೆಲ್ ರಿಪೇರಿ ಮತ್ತು ಕುಡಿಯುವ ನೀರಿನ ನಿರ್ವಹಣೆ ಮಾಡುವುದಕ್ಕೆ ಪಂಚಾಯತ್‌ಗಳನ್ನು ಶಕ್ತಿಶಾಲಿ ಮಾಡುವುದಕ್ಕೆ ಅವರಿಗೆ ಹೆಚ್ಚು ಹಣವನ್ನು ಕೊಡಬೇಕು. ಹಾಗೆಯೇ ಅವುಗಳನ್ನು ಕ್ರಿಯಾಶೀಲ ಮಾಡುವುದಕ್ಕೆ ಅಲ್ಲಿಗೆ ಸರಿಯಾದಂಥ ಕಾರ್ಯದರ್ಶಿ ಅನ್ನು ಕೊಡಬೇಕು. ಇಲ್ಲದಿದ್ದರೆ, ಇದು ಸರಿಹೋಗುವುದಿಲ್ಲ. ನಮ್ಮಲ್ಲಿ ಮೂರ್ನಾಲ್ಕು ಇನ್‌ಎಫಿಶಿಯೆಂಟ್ ಕಾರ್ಯದರ್ಶಿಗಳಿದ್ದಾರೆ. ಇವರುಗಳು ಬೆಳಿಗ್ಗೆಯಿಂದ ಸಂಜೆಯವರೆಗೆ ಕುಡಿದುಕೊಂಡು ಬಿ.ಡಿ.ಒ. ಕಛೇರಿಗಳ ಹತ್ತಿರ ಹಾವು ಹರಿದಾಡುವ ರೀತಿಯಲ್ಲಿ ಹರಿದಾಡುತ್ತಿರುತ್ತಾರೆ. ಇಂಥವರನ್ನು ಸಸ್ಪೆಂಡ್ ಅಥವಾ ಡಿಸ್‌ಮಿಸ್ ಮಾಡತಕ್ಕಂತದ್ದು ಸಹಜವಾಗಿದೆ. ಸ್ವಲ್ಪ ಎಫಿಷಿಯೆಂಟ್ ಕೆಲಸ ಮಾಡತಕ್ಕಂಥವರನ್ನು ಕೊಟ್ಟರೆ ಸರ್ಕಾರಕ್ಕೂ ಕೂಡ ಗೌರವ ಇರುತ್ತದೆ. ಇವತ್ತಿನ ದಿವಸ ಪಂಚಾಯತ್‌ನಲ್ಲಿ ಒಂದು ಕೆಲಸ ಆಗದೇ ಇದ್ದರೆ, ಸರ್ಕಾರ ಮತ್ತು ಶಾಸಕರಿಗೆ ಬಯ್ಯುತ್ತಾರೆ. ಯಾವುದಾದರೊಂದು ರಸ್ತೆಯಲ್ಲಿ ಗುಂಡಿ ಬಿದ್ದಿದ್ದರೂ ಕೂಡ ನಮ್ಮನ್ನು ಮತ್ತು ನಿಮ್ಮನ್ನು ಬಯ್ಯುತ್ತಾರೆ. ಕಟ್ಟ ಕಡೆಯ ಮನುಷ್ಯನಿಗೆ ಹೋಗಿ ತಲುಪುವಂಥದ್ದು ಇದು. ಇವತ್ತಿನ ದಿವಸ ವಿಲೇಜ್ ಅಕೌಂಟೆಂಟ್ ಮತ್ತು ಪಂಚಾಯತ್ ಕಾರ್ಯದರ್ಶಿಗಳಿಬ್ಬರು

ಸರಿಯಾಗಿರುಬೇಕಾಗುತ್ತದೆ. ನಮ್ಮ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗೆ ಮಾನ್ಯ ನಜೀರ್ ಸಾಬ್‌ರವರು 1986–1987ರಲ್ಲಿ ಬಂದಾಗ, ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳಬೇಕೆಂಬುದರ ಬಗ್ಗೆ ನಮಗೆ ಕಲ್ಪನೆ ಕೊಟ್ಟರು. ಆ ಸಂದರ್ಭದಲ್ಲಿ ನಾನು ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದೆನು. ಆ ಸಂದರ್ಭದಲ್ಲಿ ಜಿಲ್ಲೆಯ ಎಲ್ಲಾ ಪ್ರಧಾನವನ್ನು ಕರೆದು ಕೂರಿಸಿಕೊಂಡು ಹೇಳಿದ್ದರು. ಆಗ ಒಂದು ಪಂಚಾಯತ್‌ಗೆ ಒಂದು ವರ್ಷದ ಬೋರ್‌ವೆಲ್ ಮೇಂಟೇನೆನ್ಸ್‌ಗೆಂದು 200 ರೂಪಾಯಿ ಕೊಡುತ್ತಿದ್ದರು.ಅಗ ನಮ್ಮಲ್ಲಿರತಕ್ಕಂಥ ಒಟ್ಟು ಬೋರ್‌ವೆಲ್ ಸೇರಿಸಿ ಒಂದೊಂದು ಬೋರ್‌ವೆಲ್‌ಗೆ 200 ರೂಪಾಯಿಗಳಂತೆ ಪೂರ್ಣ ಹಣವನ್ನು ಜಮಾ ಮಾಡಿದ್ದರು. ಆಗ ನಾವು ಒಂದೊಂದು ಪಂಚಾಯತ್‌ಗೆ ಇಬ್ಬರು ಹುಡುಗರನ್ನು ಆಯ್ಕೆ ಮಾಡಿಕೊಂಡು ಅವರಿಗೆ ಬೋರ್‌ವೆಲ್ ರಿಪೇರಿಯ ತರಬೇತಿಯನ್ನು ಕೊಟ್ಟಿದ್ದೆವು. ಹಾಗೆಯೇ 2.5 ಸಾವಿರ ರೂಪಾಯಿ ಕೊಟ್ಟು ಟೂಲ್ ಕಿಟ್‌ನ್ನು ಪಂಚಾಯತಿ ವತಿಯಿಂದ ಕೊಡಿಸಲಾಗಿತ್ತು. ಸುಮಾರು 10 ರಿಂದ 20 ಕಿ.ಮಿ. ದೂರದಲ್ಲಿ ಯಾವುದಾದರೊಂದು ಬೋರ್‌ವೆಲ್ ಕಟ್ಟಿದ್ದರೂ ಕೂಡ 24 ಗಂಟೆ ಅವಧಿಯೊಳಗೆ ಅಲ್ಲಿಗೆ ಹೋಗಿ ಬೋರ್‌ವೆಲ್ ರಿಪೇರಿ ಕೆಲಸವನ್ನು ನನ್ನ ತಾಲ್ಲೂಕಿನಲ್ಲಿ ಮಾಡಲಾಗುತ್ತಿತ್ತು. ಮೊದಲು ಬೋರ್‌ವೆಲ್ ಕೆಟ್ಟು ಹೋದಾಗ ಜಿಲ್ಲಾಪಂಚಾಯತ್ ಇಂಜನಿಯರಿಂಗ್ ವಿಭಾಗಕ್ಕೆ ತಿಳಿಸಬೇಕಾಗಿತ್ತು. ಅವರು ಸೀನಿಯಾರಿಟಿ ಲಿಸ್ಟ್ ಪ್ರಕಾರ ಕೆಲಸವನ್ನು ಮಾಡುತ್ತಿದ್ದರು. ಮತ್ತೆ ಆಗ ಒಂದು ವ್ಯಾನ್. ಜ್ಯೂನಿಯರ್ ಇಂಜನಿಯರ್ ಮತ್ತು ಒಬ್ಬ ಮೆಕಾನಿಕ್ ಹೋಗಿ ರಿಪೇರಿ ಮಾಡಿಸುತ್ತಿದ್ದರು. ಆದರೆ, ಈಗ ಆ ರೀತಿ ಇಲ್ಲ. ನಮ್ಮ ಪಂಚಾಯತ್‌ನಲ್ಲಿ ಫೋನ್ ಇದೆ. ಯಾವ ಊರಿನಲ್ಲಿ ಬೋರ್‌ವೆಲ್ ಕೆಟ್ಟಿದೆ ಎಂದು. ಆ ಊರಿನವರು ಇಲ್ಲಿಗೆ ದೂರವಾಣಿ ಮಾಡಿದರೆ ಸಾಕು. ಪಂಚಾಯತ್‌ನವರು ಬೋರ್‌ವೆಲ್‌ಗೆ ಬೇಕಾಗಿರುತಕ್ಕಂಥ ಸ್ಟೇರ್ಸ್ ಪಾರ್ಟ್ಸ್‌ನ್ನು ತಮ್ಮ ಹತ್ತಿರ ಇಟ್ಟುಕೊಂಡಿರುತ್ತಾರೆ. ಇವರು ಒಂದು ಸಲ ಹೋಗಿ ಬೋರ್‌ವೆಲ್‌ನ್ನು ರಿಪೇರಿ ಮಾಡಿ ಬಂದರೆ 50 ರೂಪಾಯಿ ಕೊಡುತ್ತಾರೆ. ಈಗ ಇದು 100 ರೂಪಾಯಿ ಆಗಿದೆ. ಒಟ್ಟಿನಲ್ಲಿ ಹೇಳುವುದಾದರೆ 24 ಗಂಟೆಯೊಳಗೆ ಬೋರ್‌ವೆಲ್ ರಿಪೇರಿ ಕೆಲಸ ನಮ್ಮ ಕಡೆ ಆಗುತ್ತಿದೆ.

**ಅಧ್ಯಕ್ಷರು** : ರಿಪೇರಿ ಕೆಲಸವನ್ನು ಯಾರು ಮಾಡುತ್ತಾರೆ?

**ಶ್ರೀ ಅರಗಜ್ಞಾನೇಂದ್ರ** : ನಮ್ಮ ಪಂಚಾಯತ್‌ನವರೇ ಮಾಡಿಸುತ್ತಾರೆ.

**ಅಧ್ಯಕ್ಷರು** : ಪಂಚಾಯತ್‌ನವರು ಕುಡಿಯುವ ನೀರಿನ ನಿರ್ವಹಣೆಯನ್ನು ಮಾಡಿದರೆ ಒಳ್ಳೆಯದೆಂದು ನಿಮ್ಮ ಅಭಿಪ್ರಾಯವೇ?

**ಶ್ರೀ ಅರಗಜ್ಞಾನೇಂದ್ರ** : ಮಾನ್ಯ ಅಧ್ಯಕ್ಷರೆ, ನನ್ನ ಅನುಭವದಲ್ಲಿ ಹೇಳುವುದಾದರೆ ಈ ಸಿಸ್ಟಮ್ ಚೆನ್ನಾಗಿದೆ. ಆದರೆ, ಅವರಿಗೆ ಹೆಚ್ಚು ಹಣ ಕೊಡಬೇಕಾಗುತ್ತದೆ. ಆದರೆ, ಇದು ಏನಾಗಿದೆ ಎಂದರೆ, ಅಜ್ಜಿ ನೂತಿದ್ದೆಲ್ಲಾ ಮೊಮ್ಮಗನ ಉಡುದಾರಕ್ಕೆ ಸರಿಹೋಗುತ್ತದೆ ಎನ್ನುವ ರೀತಿಯಲ್ಲಿ, ಇವತ್ತಿನ ದಿವಸ ಪಂಚಾಯತ್‌ಗಳಿಗೆ ಕೊಡತಕ್ಕಂಥ ಹಣ ಕೇವಲ ಕರೆಂಟ್ ಚಾರ್ಜ್‌ಸ್‌ಗೆ ಸರಿಯಾಗುತ್ತಿದೆ. ಈ ರೀತಿಯಾಗಬಾರದು. ಎಷ್ಟು ಕರೆಂಟು ಚಾರ್ಜ್ ಬರುತ್ತದೆಂಬುದನ್ನು ನೋಡಿಕೊಂಡು ಅವರಿಗೆ ಹಣ ಕೊಡಬೇಕಾಗುತ್ತದೆ. ಹಾಗೆಯೇ ಇವತ್ತಿನ ದಿವಸ ಪಂಚಾಯತ್‌ಗಳಿಗೆ ಒಳ್ಳೆಯ ಕಾರ್ಯದರ್ಶಿಯವರನ್ನು ನೇಮಕ ಮಾಡತಕ್ಕಂಥ ಕಲ್ಪನೆ ಆಗಬೇಕು. ಮತ್ತೆ ಮೆಕಾನಿಕಲ್ ಒಬ್ಬರನ್ನು ನೇಮಕ ಮಾಡಬೇಕು. ಇವತ್ತಿನದಿವಸ ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಐ.ಟಿ.ಐ. ಅಥವಾ ಇಂಜನಿಯರ್ ಓದಿರತಕ್ಕಂಥವರು ಬೇಕಾಗಿಲ್ಲ. ಬೋರ್‌ವೆಲ್ ರಿಪೇರಿ ಮಾಡುವಾಗ

ಊರಿನ ಜನರು ಬಂದು ಪೈಪ್‌ನ್ನು ಮೇಲಕ್ಕೆ ಎತ್ತಿ ಕೊಡುತ್ತಾರೆ. ವಾಷರ್ ಅಥವ ಚೈನ್ ಅಥವಾ ಹ್ಯಾಂಡಲ್ ಹೋಗಿದ್ದರೆ ಅವುಗಳನ್ನು ಬದಲಾವಣೆ ಮಾಡುತ್ತಾರೆ ಮತ್ತೆ ಪೈಪ್‌ಗಳನ್ನೂ ಕೂಡ ಬದಲಾವಣೆ ಮಾಡುತ್ತಾರೆ. ಒಟ್ಟಿನಲ್ಲಿ ನಮ್ಮಲ್ಲಿ ಬಹಳ ಚೆನ್ನಾಗಿ ಕೆಲಸ ನಡೆದುಕೊಂಡು ಹೋಗುತ್ತಿದೆ. ಆದರೆ, ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ. ಒಂದು ಬೋರ್‌ವೆಲ್ ನಿರ್ವಹಣೆಗೆಂದು ಒಂದು ವರ್ಷಕ್ಕೆ 400 ಅಥವಾ 450 ರೂಪಾಯಿ ಕೊಡಬೇಕೆಂದು ಇದೆ. ಆದರೆ ನಮಗೆ 200 ರೂಪಾಯಿ ಕೂಡ ಬಿಡುಗಡೆ ಮಾಡುತ್ತಿಲ್ಲ. ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಇವತ್ತಿನ ದಿವಸ ಪಂಚಾಯತ್‌ಗಳಲ್ಲಿ ಹಣವಿಲ್ಲ. ಆದ್ದರಿಂದ ಹೆಚ್ಚಿನ ಹಣ ಕೊಡಬೇಕು. ದಯವಿಟ್ಟು ಈ ಕೆಲಸವನ್ನು ತಾವು ಮಾಡಿದರೆ ನಮಗೂ ಮತ್ತು ನಿಮಗೂ ಕೂಡ ತಲೆನೋವು ಕಡಿಮೆಯಾಗುತ್ತದೆ. ಕುಡಿಯುವ ನೀರಿನ ನಿರ್ವಹಣೆಯನ್ನು ಪಂಚಾಯತ್‌ಗಳು ಮಾಡಿಕೊಂಡು ಹೋಗುತ್ತವೆ. ಸಣ್ಣ ಸಣ್ಣ ಕುಡಿಯುವ ನೀರಿನ ವಿಚಾರದಲ್ಲಿ ನಮಗೆ ಹೇಳತಕ್ಕಂಥದ್ದು ಮತ್ತು ನಮ್ಮನ್ನು ಅಡ್ಡ ಹಾಕತಕ್ಕಂಥದ್ದು ಸರಿಯಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಅಧ್ಯಕ್ಷರು** : ನೀವು ಈಗಾಗಲೇ 25 ನಿಮಿಷ ಸಮಯವನ್ನು ತೆಗೆದುಕೊಂಡಿರುತ್ತೀರಿ. ಈಗ ಇನ್ನು ಬಹಳ ಜನ ಮಾತನಾಡಬೇಕಾಗಿದೆ, ಇವತ್ತು ಇದು ಯಾವುದೇ ಕಾರಣಕ್ಕು ಮುಗಿಯಬೇಕು.

**ಶ್ರೀ ಅರಗ ಜ್ಞಾನೇಂದ್ರ** : ಮಾನ್ಯ ಅಧ್ಯಕ್ಷರೆ, ಎಲೆಕ್ಟ್ರಿಸಿಟಿ ಬಗ್ಗೆ ಈಗಾಗಲೇ ಎಲ್ಲರೂ ಹೇಳಿದ್ದಾರೆ, ನಾನು ಅದನ್ನು ಚರ್ವಿತ ಚರ್ಣ ಮಾಡಲು ಹೋಗುವುದಿಲ್ಲ. ಕುಡಿಯುವ ನೀರಿಗೆ ಎಲೆಕ್ಟ್ರಿಸಿಟಿಯನ್ನು ಚೆನ್ನಾಗಿ ಒದಗಿಸಲಿಕ್ಕೆ ಮಾಡಿ, ಕುಡಿಯುವ ನೀರಿನ ಯೋಜನೆ ಎಲ್ಲೆಲ್ಲಿ ಇವೆ ಅಲ್ಲಿ ಶೆಡ್‌ಡೌನ್ ಮಾಡದೆ ಅದೆಲ್ಲಕ್ಕೂ ಒಂದು ವ್ಯವಸ್ಥೆಯ್ನನು ಮಾಡಿದರೆ ಇದೆಲ್ಲವನ್ನೂ ಸ್ವಲ್ಪ ನೀಗಿಸುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಸ್ವಜಲಧಾರ ಯೋಜನೆ ಇದಕ್ಕೆ ಈಗಾಗಲೇ ಬಹಳ ಜನ ಹಣವನ್ನು ಕಟ್ಟಿ ಬಿಟ್ಟಿದ್ದಾರೆ ಅದನ್ನು ಕೇಂದ್ರ ಸರ್ಕಾರದವರು ಸರ್ಕಾರ ಬದಲಾವಣೆಯಾಯಿತು ಎಂದು ಹೇಳಿ ಅವರು ಬದಲಾವಣೆ ಮಾಡಿಕೊಂಡಿದ್ದಾರೋ ಏನೋ ಗೊತ್ತಿಲ್ಲ, ಅದು ಅದನ್ನು ನಾವು ಮಾಡಿದರೂ ಆ ಸರ್ಕಾರಕ್ಕೆ ಕ್ರೆಡಿಟ್ ಹೋಗುತ್ತದೆ, ಏಕೆಂದರೆ ಅದನ್ನು ಮಾಡಿದ್ದು ಮಾನ್ಯ ವಾಜಪೇಯಿಯವರ ಸರ್ಕಾರ, ಬಹಳ ಒಳ್ಳೆಯ ಯೋಜನೆ 10 ಪರ್ಸೆಂಟ್ ಹಣ ಜನರು ಕಟ್ಟಿದರೆ 90 ಪರ್ಸೆಂಟೆ ಸರ್ಕಾರ ಕೊಡುವುದು ಇದರಲ್ಲಿ ಜನರ ಸಹಭಾಗಿತ್ವ ಇರಬೇಕೆಂದು ಹೇಳಿ ಮಾಡಿದ್ದರು. ಆ ಕಾರಣಕ್ಕಾಗಿ ಅದನ್ನು ಸ್ಥಗಿತಮಾಡಿದ್ದಾರೋ ಏನೋ ಗೊತ್ತಿಲ್ಲ. ನಾನು ಹೇಳುತ್ತೇನೆ, ಇದು ಅತ್ಯಂತ ಒಳ್ಳೆಯ ಯೋಜನೆ, ಇದನ್ನು ರಾಜ್ಯ ಸರ್ಕಾರ ಮುಂದಿನ ಬಜೆಟ್‌ನಲ್ಲಿಯಾದರೂ ಇಟ್ಟುಕೊಂಡು ಸ್ವಜಲಧಾರ ಯೋಜನೆಗೆ ಹಣವನ್ನು ಕೊಡಿ, ತುಂಬಾ ಒಳ್ಳೆಯದಾಗುತ್ತದೆ. ಜನರ ಸಹಭಾಗಿತ್ವದಲ್ಲಿ ಊರುಗಳಲ್ಲಿ ಮಾಡಿ ಅವನದ್ದೇ ಒಂದು ಸೊಸೈಟಿಯನ್ನು ಮಾಡಿಕೊಂಡು ಅವರು ಮೇನ್‌ಟೇನ್ ಮಾಡಿಕೊಂಡು ಹೋಗುತ್ತಾರೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಿರುನೀರು ಯೋಜನೆಗೆ 50 ಸಾವಿರ ರೂ.ಗಳನ್ನು ಕಟ್ಟಿ ಇದನ್ನು ಓವೈಟಿಯಲ್ಲಿ ತೆಗೆದುಕೊಳ್ಳಿ ಎಂದರೆ ಇದೆಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ವಿದ್ಯುತ್ ಇಲಾಖೆ ಬೇರೆ, ನಿಮ್ಮದು ಬೇರೆ ಸರ್ಕಾರವಲ್ಲ. ಒಂದೆ ಸರ್ಕಾರದ ಎರಡು ಇಲಾಖೆಗಳು. ದಯವಿಟ್ಟು ಇದರ ಬಗ್ಗೆ ಕುಳಿತುಕೊಂಡು ಮಾತನಾಡಿ, ಇದು ಸರ್ಕಾರದ ಒಂದು ಗೌರವದ ಪ್ರಶ್ನೆ ಎಂದು ಹೇಳಿ ಅವರನ್ನು ಕನ್‌ವಿನ್ಸ್ ಮಾಡುವುದಕ್ಕೆ ಶ್ರೀ ರೇವಣ್ಣನವರು ಮತ್ತು ಶ್ರೀ ಸತ್ಯನಾರಾಯಣರವರು

18

ಹಾಗೂ ಶ್ರೀ ಮಹದೇವಪ್ಪನವರು ಈ ಮೂರು ಜನ ಒಂದೆ ಪಕ್ಷದವರು. ಹಾಗಾಗಿ ಒಟ್ಟಿಗೆ ಕುಳಿತುಕೊಂಡು ಆ ಮೂರು ಇಲಾಖೆಯ ಅಧಿಕಾರಿಗಳನ್ನು ಒಟ್ಟಿಗೆ ಕರೆಸಿಕೊಂಡು ಮಾತನಾಡಿ ಕುಡಿಯುವ ನೀರಿನ ಯೋಜನೆಗೆ ವಿದ್ಯುತ್‌ನ್ನು ಒದಗಿಸುವ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಧನ್ಯವಾದಗಳು

**ಶ್ರೀ ಬಿ. ನಾಗರಾಜಶೆಟ್ಟಿ (ಬಂಟ್ವಾಳ)** : ಮಾನ್ಯ ಅಧ್ಯಕ್ಷರೆ. ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ಈಗಾಗಲೇ ಈ ಕುಡಿಯುವ ನೀರಿನ ತೊಂದರೆಯು ಬಗ್ಗೆ ಬಹಳಷ್ಟು ವಿಚಾರಗಳು ಮಂಡನೆಯಾಗಿದೆ.

**ಶ್ರೀ ಆರ್ ಧ್ರುವನಾರಾಯಣ** : ಮಾನ್ಯ ಅಧ್ಯಕ್ಷರೆ. ಅವರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅವರು ಮಾತನಾಡಲಿ. ಆದರೆ. ನಮ್ಮ ಭಾಗದಲ್ಲೂ ಕೂಡ ನೀರಿನ ಸಮಸ್ಯೆ ಇದೆ.

**ಅಧ್ಯಕ್ಷರು** : ಆಯಿತು. ನಿಮ್ಮ ಮಂತ್ರಿಗಳಿಗೆ ಹೇಳಿದರೆ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡುತ್ತಾರೆ. ನೀವು ಕುಳಿತುಕೊಳ್ಳಿ.

**ಶ್ರೀ ಬಿ. ನಾಗರಾಜ್ ಶೆಟ್ಟಿ** : ಮಾನ್ಯ ಅಧ್ಯಕ್ಷರೆ, ಈಗಾಗಲೆ ಬಹಳಷ್ಟು ಜನ ಸದಸ್ಯರು ಗ್ರಾಮೀಣ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾತನಾಡಿದ್ದಾರೆ. ತಮಗೆಲ್ಲಾ ತಿಳಿದ ಹಾಗೆ ದಕ್ಷಿಣ ಕನ್ನಡ ಜಿಲ್ಲೆಗೆ ರಾಜೀವ್‌ಗಾಂಧಿ ಪೈಲೆಟ್ ಯೋಜನೆ ದಿನಾಂಕ 31ನೇ ಡಿಸೆಂಬರ್ 2004ಕ್ಕೆ ಮುಕ್ತಾಯಗೊಂಡಿದೆ. ಆದರೆ ಇನ್ನೂ 60 ಪರ್‌ಸೆಂಟ್ ಗ್ರಾಮಗಳಿಗೆ ಕುಡಿಯುವ ನೀರು ಸರಿಯಾಗಿ ಸಿಗುತ್ತಿಲ್ಲ. ದಿನನಿತ್ಯ ಹರತಾಳಗಳು. ಈಗಾಗಲೆ ಹೇಳಿದ ಹಾಗೆ ನಮ್ಮ ಮನೆಯನ್ನು ಹಾಗೂ ಗ್ರಾಮಪಂಚಾಯಿತಿ ಆಫೀಸರ್ ಮನೆಗಳನ್ನು ಜನ ಮುತ್ತಿಗೆ ಹಾಕುತ್ತಿದ್ದಾರೆ. ಇನ್ನೊಂದು ಹೊಸ ಯೋಜನೆಯನ್ನು ಜಿಲ್ಲಾಧಿಕಾರಿಯವರ ಮುಖೇನ ಕೊಟ್ಟಿದ್ದೇವೆ. ನಮ್ಮ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಇತ್ತೀಚೆಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾಡಿದ ಸಮಾಲೋಚನೆಯ ಪ್ರಕಾರ ಸುಮಾರು 131 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇದು ನನ್ನ ಒಂದು ವಿಧಾನಸಭಾ ಕ್ಷೇತ್ರಕ್ಕೆ ಮಾತ್ರ, ಅದು ಕೂಡ ಶಾಶ್ವತ ಪರಿಹಾರವಲ್ಲ. ತಾತ್ಕಾಲಿಕವಾಗಿ ಈಗಿನ ಮತ್ತು ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೋಸ್ಕರ ಈ ಪರಿಹಾರವನ್ನು ಮಂಡಿಸಿದ್ದೇವೆ. ಅದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ನೀವು ಆದಷ್ಟು ಶೀಘ್ರದಲ್ಲಿ ಈ ವ್ಯವಸ್ಥೆ ಜಾರಿಗೊಳಿಸಬೇಕು. ಈ ಬಗ್ಗೆ ಹಿಂದಿನ ಒಂದು ಮಾತು ಇದೆ. ಅದೇನೆಂದರೆ, ರಾಜೀವ್‌ಗಾಂಧಿ ಪೈಲೆಟ್ ಯೋಜನೆಗೆ ನಮ್ಮ ಜಿಲ್ಲೆಗೆ 40 ಕೋಟಿ ರೂಪಾಯಿಗಳು ಬಂದಿದೆ. ಪುನಃ ಇಷ್ಟೊಂದು ದೊಡ್ಡ ಮೊತ್ತದ ಅವಶ್ಯಕತೆ ಇದೆಯೇ ಎಂದು ಸರ್ಕಾರದ ಹಿರಿಯ ಅಧಿಕಾರಿಗಳು ಹೇಳುವುದನ್ನು ನಾವು ಕೇಳುತ್ತಿದ್ದೇವೆ. ರಾಜೀವ್‌ಗಾಂಧಿ ಪೈಲೆಟ್ ಯೋಜನೆಯಲ್ಲಿ ಹಾಕಿದ ಹೆಚ್ಚಿನ ಕೊಳವೆ ಬಾವಿಗಳು ಬರಡಾಗಿದೆ. ಅಂದರೆ ಡ್ರೈ ಆಗಿದೆ. ಎರಡನೆಯದಾಗಿ. ಭೂಮಿಯಲ್ಲಿ ನೀರಿನ ಮಟ್ಟ ಕೆಳಕ್ಕೆ ಹೋಗಿದೆ. ವಿದ್ಯುತ್ ಸರಬರಾಜಿನಲ್ಲಿ ಏರಿಳಿತ ಹಾಗೂ ನೀರಿನ ಮಟ್ಟ ಕೆಳಕ್ಕೆ ಹೋಗುವುದರಿಂದ ಪಂಪುಸೆಟ್ಟುಗಳು ವ್ಯರ್ಥವಾಗಿದೆ ಹಾಗೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಗ್ರಾಮಪಂಚಾಯಿತಿ ಅಧೀನದಲ್ಲಿ ಪಂಪ್‌ಸೆಟ್ ಹಾಗೂ ಬೋರ್‌ವೆಲ್‌ಗಳ ದುರಸ್ತಿ ಮತ್ತು ಮೇಲ್ವಿಚಾರಣೆಯನ್ನು ಗ್ರಾಮ ಪಂಚಾಯಿತಿಗಳವರೇ

ಮಾಡಬೇಕೆಂದು ತೀರ್ಥಹಳ್ಳಿ ಶಾಸಕರು ಬಹಳ ಚೆನ್ನಾಗಿ ಹೇಳಿದರು. ಆದರೆ ನಮ್ಮ ಕ್ಷೇತ್ರದಲ್ಲಿ ಹಾಗೆ ಅಲ್ಲ, ನಮ್ಮ ಗ್ರಾಮ ಪಂಚಾಯಿತಿಯಲ್ಲಿ ಆ ಕಾನೂನಿನ ಪ್ರಕಾರ ಒಂದು ಬೇರೆ ಸಮಿತಿಯನ್ನು ಮಾಡಬೇಕಾಗಿತ್ತು. ಯಾವುದೇ ಸಮಿತಿಯನ್ನು ಮಾಡದೆ ಸರಿಯಾದ ವಸೂಲಾತಿ ಆಗದೆ ಎಲ್ಲಾ ಪಂಪ್‌ಗಳ ರಿಪೇರಿ ಬಿಲ್ 50 ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳವರೆಗೆ ಬಾಕಿ ಇದೆ. ಒಂದೊಂದು ಗ್ರಾಮದಲ್ಲಿ ಆ ದೃಷಿಯಿಂದ ಪಂಪ್ ಹಾಳಾದರೆ ಯಾರೂ ರಿಪೇರಿ ಮಾಡುವುದಕ್ಕೆ ಬರುವುದಿಲ್ಲ, ಹಿಂದಿನ ಬಾಕಿಯನ್ನು ಕೊಟ್ಟರೆ ರಿಪೇರಿ ಮಾಡುತ್ತೇವೆ ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಾರೆ. ಆ ದೃಷ್ಟಿಯಿಂದ ಈಗ ಇರುವ ಒಂದು ವ್ಯವಸ್ಥೆಯಲ್ಲಿ ಪ್ರಾಥಮಿಕ ಅಂತದಲ್ಲಿ ಕೂಡ ವಿಶೇಷವಾಗಿ ಗ್ರಾಮಾಂತರ ಪ್ರದೇಶದಲ್ಲಿ ಬೋರ್‌ವೆಲ್‌ಗಳು ನಿಷ್ಕ್ರಿಯವಾಗಿವೆ. ಒಳ್ಳೆಯ ನೀರು ಇರುವಂಥ ಬೋರ್‌ವೆಲ್‌ಗಳಿಗೆ ಮೋಟಾರುಗಳನ್ನು ಜೋಡಿಸುವಂಥ ವ್ಯವಸ್ಥೆಯನ್ನು ಕೂಡಲೆ ಮಾಡಬೇಕಾಗಿದೆ. ಈಗ ಇರುವಂಥ ಒಳ್ಳೆಯ ಬೋರ್‌ವೆಲ್‌ಗಳಿಗೆ ಏನಿವೆ, ಅವುಗಳನ್ನು ಇನ್ನೂ ಸ್ವಲ್ಪ ಆಳ ಮಾಡಿದರೆ ಬಹಳಷ್ಟು ನೀರು ಸಿಗುವಂತಾಗಬಹುದು. ಆ ದೃಷ್ಟಿಯಿಂದ ನನ್ನ ಒಂದು ವಿನಂತಿ ಏನೆಂದರೆ, ಈಗಾಗಲೆ ಬಹಳಷ್ಟು ಜನ ಶಾಸಕರು ಹೇಳಿದ್ದಾರೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಶಾಸಕರನ ನೇತೃತ್ವದಲ್ಲಿ ವಹಿಸಿಕೊಡಬೇಕೆಂದು ನನ್ನ ವಿನಂತಿ. ಆದರೆ ನನ್ನ ಕ್ಷೇತ್ರದಲ್ಲಿ ಒಂದು ಬಹಳ ವಿಶೇಷವೆಂದರೆ, ಗ್ರಾಮಪಂಚಾಯಿತಿಗಳ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಹೇಳುತ್ತಾರೆ, ನೀವು ನಾಗರಾಜ್ ಶೆಟ್ಟಿಯವರಿಗೆ ಓಟನ್ನು ಹಾಕಿದ್ದೀರಿ, ಕುಡಿಯುವ ನೀರಿಗೆ ಅವರನ್ನು ಹೋಗಿ ಕೇಳಿ ಎಂದು ಹೇಳುತ್ತಾರೆ. ಆ ದೃಷ್ಟಿಯಿಂದ ನನ್ನ ಕಷ್ಟ ಬಹಳ ದೊಡ್ಡದಿದೆ, ಅದಕ್ಕೋಸ್ಕರ ನನ್ನ ಕಳಕಳಿಯ ವಿನಂತಿ, ಉದಾಹರಣೆಗೆ ನಾನು ಕಳೆದ ವಾರ ಒಂದು ಬೋರ್‌ವೆಲ್ ಇನ್ಸ್‌ಪೆಕ್ಷನ್‌ಗೆ ಹೋಗಿದ್ದೆ, ಅದನ್ನು ದುರಸ್ತಿ ಮಾಡಿಸುದಕ್ಕೆ ಹೇಳಿದಾಗ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಎಸ್ಟಿಮೇಟ್ ಆಗಬೇಕು. ಟೆಂಡರ್ ಆಗಬೇಕು ಎಂದು ಹೇಳುತ್ತಾರೆ. ಈ ಬಗ್ಗೆ ಕೂಡಲೇ ಸ್ಪಂದಿಸಿ ಕ್ರಮ ತೆಗೆದುಕೊಂಡರೆ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆ. ಶಾಸಕರಾದ ನಮಗೆ ಆ ಪಂಪ್‌ಗಳನ್ನು ರಿಪೇರಿ ಮಾಡಿಸುವುದಕ್ಕೆ ಮತ್ತು ಹೊಸ ಬೋರ್‌ವೆಲ್‌ಗಳನ್ನು ಹಾಕಿಸುವ ವ್ಯವಸ್ಥೆಯ ಬಗ್ಗೆ ಈಗಾಗಲೇ ಅನೇಕ ಹಿರಿಯ ಶಾಸಕರು ಮಾತನಾಡಿರುವ ಹಾಗೆ ಇದರಲ್ಲಿ ಎರಡು ವಿಚಾರಗಳು ಸ್ಪಷ್ಟ. ಒಂದು ಕೂಡಲೇ, ಮತ್ತೊಂದು ಶಾಶ್ವತ ಪರಿಹಾರ, ಇವುಗಳನ್ನು ಹೇಗೆ ಮಾಡಬೇಕೆಂದರೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವಂಥ ಬೋರ್‌ವೆಲ್‌ಗಳ ನೀರಿನ ಮಟ್ಟ ಕೆಳಗೆ ಹೋಗಿ ಬರಡಾಗಿದೆ. ಹೊಸ ಬೋರ್‌ವೆಲ್‌ಗಳನ್ನು ಹಾಕುವುದು ಕೇವಲ ತಾತ್ಕಾಲಿಕ ಪರಿಹಾರ ಮಾತ್ರ. ಶಾಶ್ವತವಾದ ಪರಿಹಾರ ಮಾಡಬೇಕಾದರೆ ನಮ್ಮ ಜಿಲ್ಲೆಗಳ ನದಿಗಳ ಜೋಡಣೆ ಅಥವಾ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ ಅರಬ್ಬಿ ಸಮುದ್ರ ನಮ್ಮ ಕರಾವಳಿಯಲ್ಲಿದೆ, ಸಮುದ್ರದ ಆ ಉಪ್ಪು ನೀರನ್ನು ಶುದ್ಧೀಕರಣ ಮಾಡಿ ಕುಡಿಯುವುದಕ್ಕೆ ಉಪಯೋಗಿಸಿಕೊಳ್ಳುವ ಚಿಂತನೆ ಮಾಡುವ ಅವಶ್ಯಕತೆ ಇದೆ ಮತ್ತೊಮ್ಮೆ ಇದನ್ನು ಸರ್ಕಾರದ ಗಮನಕ್ಕೆ ತರುವುದಿಕ್ಕೆ ಇಚ್ಛೆಪಡುತ್ತೇನೆ.

ಈ ಅಧಿವೇಶನ ಮುಗಿಸಿಕೊಂಡು ನಾವು ವಾಪಸ್ ನಮ್ಮ ಕ್ಷೇತ್ರಕ್ಕೆ ಹೋದ ಕೂಡಲೇ ಕುಡಿಯುವ ನೀರಿನ ತೊಂದರೆ ಮತ್ತೆ ಜಾಸ್ತಿಯಾಗುತ್ತದೆ. ಕುಡಿಯುವ ನೀರು ಕೊಡಿ ಎಂದು ಜನ ಹೇಳುತ್ತಾರೆ. ನಮಗೆ ಸ್ವಾತಂತ್ರ ಸಿಕ್ಕು 58 ವರ್ಷವಾಯಿತು. ಕುಡಿಯುವ ನೀರನ್ನು ಕೊಡುವುದಕ್ಕಾಗದಿದ್ದರೆ ನಾವು ಶಾಸಕರಾಗಿ ಏನು ಪ್ರಯೋಜನವೆಂದು ನಮ್ಮ ಅನೇಕ ಜನ ಶಾಸಕರಲ್ಲಿ ಈ ಭಾವನೆ ಬಂದಿದೆ.

ಈ ಬಗ್ಗೆ ನನ್ನ ಕಳಕಳಿ ವಿನಂತಿ ಏನೆಂದರೆ, ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೆ ಸನ್ಮಾನ್ಯ ಯೋಗೀಶ್‌ಭಟ್‌ರವರು ಹೇಳಿದ ಹಾಗೆ, ಮಾನ್ಯ ಮುಖ್ಯಸಚೇತಕರು ಕೂಡ ಇಲ್ಲೇ ಇದ್ದಾರೆ, ಕೂಡಲೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ 8 ಕೋಟಿ ರೂಪಾಯಿ ವೆಚ್ಚದ ಒಂದು ಯೋಜನೆಯನ್ನು ಡಿ.ಸಿ. ಯವರ ಮುಖಾಂತರ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಆದಷ್ಟು ಶೀಘ್ರದಲ್ಲಿ ಕಾರ್ಯಗತ ಮಾಡಬೇಕು. ಆದ್ದರಿಂದ ಶೀಘ್ರವಾಗಿ ಸಂಬಂಧಪಟ್ಟ ಮಂತ್ರಿಯವರು ಅದಕ್ಕೆ ಸೂಕ್ತವಾದ ಕ್ರಮ ಕೈಗೊಂಡು ಆ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ನೀಡಿದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆರ್. ಧ್ರುವನಾರಾಯಣ (ಸಂತೇಮಾರನಹಳ್ಳಿ)** : ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಕೂಡ ಇಲ್ಲಿಯೇ ಕುಳಿತಿದ್ದಾರೆ. ನೀವು ಹಣಕೊಟ್ಟರೂ ನಾವು ಬೋರ್ ಹೊಡೆಸಿದರೂ ನೀರು ಸಿಗದೆ ಇರುವಂಥ ಒಂದು ವಾತಾವರಣ ನಮ್ಮಲ್ಲಿದೆ. ಆದ್ದರಿಂದ ನಮ್ಮ ತಾಲ್ಲೂಕಿನಿಂದ ಒಂದು ನೀಲಿ ನಕಾಶೆಯನ್ನು ಮಾಡಿ 119 ಹಳ್ಳಿಗಳಿಗೆ ನದಿಯಿಂದ ನೀರನ್ನು ಕೊಡತಕ್ಕಂಥ ಒಂದು ಪ್ಲಾನ್‌ನ್ನು ನಾವು ಮಾಡಿದ್ದೇವೆ. ಈಗಾಗಲೇ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ ವರ್ಲ್ಡ್‌ಬ್ಯಾಂಕಿನಿಂದ ಹಣವನ್ನು ಲೋನ್ ಮುಖಾಂತರ ಕೊಟ್ಟಿರುವಂಥ ನಿದರ್ಶನಗಳು ಇವೆ. ಈಗಾಗಲೆ ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿ 119 ಹಳ್ಳಿಗಳಿಗೆ ಕಬಿನಿ ನದಿಯಿಂದ ಹರಿಯುವ ನೀರನ್ನು ಒಂದು ಕಡೆ ಸ್ಟೋರ್ ಮಾಡಿಕೊಂಡು ಸಮಗ್ರವಾಗಿ ನಮ್ಮ ತಾಲ್ಲೂಕಿಗೆ ನೀರನ್ನು ಕೊಡತಕ್ಕಂತ ಒಂದು ಪ್ಲಾನ್‌ನ್ನು ನಾವು ಮಾಡಿದ್ದೇವೆ. ಮಾನ್ಯ ಮಂತ್ರಿಗಳಲ್ಲಿ ನಾನು ನಿವೇದನೆ ಮಾಡಿಕೊಳ್ಳುತ್ತೇನೆ. 30 ಕೋಟಿ ರೂ.ಗಳ ಆ ಒಂದು ಪ್ಲಾನ್ ಇದೆ. ಇದಕ್ಕೆ ತಾವು ಅನುಮತಿಯನ್ನು ಕೊಟ್ಟು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಆ 30 ಕೋಟಿ ರೂ.ಗಳ ಆ ಒಂದು ಪ್ಲಾನ್ ಇದೆ, ಇದಕ್ಕೆ ತಾವು ಅನುಮತಿಯನ್ನು ಕೊಟ್ಟು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಆ 30 ಕೋಟಿ ರೂ.ಗಳು ಬಿಡುಗಡೆಯಾದರೆ ಚಾಮರಾಜನಗರ ತಾಲ್ಲೂಕಿನ 119 ಹಳ್ಳಿಗಳಿಗೆ ನೀರು ಒದಗಿಸತಕ್ಕಂಥ ಒಂದು ಈ ಯೋಜನೆ. ದಯಮಾಡಿ ನಾನು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ನನ್ನ ಕ್ಷೇತ್ರದಲ್ಲಿ ದಾಸನೂರು ಎನ್ನುವ ಗ್ರಾಮ ಇದೆ, ಎರಡು ತಿಂಗಳಲ್ಲಿ 6 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ, 600 ಅಡಿಯವರೆಗೂ ಕೊರೆದರೂ ಕೂಡ ಒಂದು ತೊಟ್ಟು ನೀರು ಸಿಗಲಿಲ್ಲ. ನೀವು ಹಣ ಬಿಡುಗಡೆ ಮಾಡಿ ಬೋರ್‌ವೆಲ್ ಹೊಡೆಸಿದರೂ ಕೂಡ ನೀರು ಸಿಗದೇ ಇರತಕ್ಕ ವಾತಾವರಣ ಇದೆ. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕಾವೇರಿ ಮತ್ತು ಕಬಿನಿ ನದಿ ಹರಿದುಕೊಂಡು ಹೋಗುತ್ತದೆ. ಆ ನದಿ ನೀರಿನ ಮುಖಾಂತರ ಸ್ಟೋರ್ ಮಾಡಿ ಸಮಗ್ರವಾಗಿ ಎಲ್ಲಾ ಗ್ರಾಮಗಳಿಗೂ ನೀರು ಕೊಡತಕ್ಕಂತಹ ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ನಿವೇದನೆಯನ್ನು ಮಾಡಿಕೊಳ್ಳುತ್ತೇನೆ. ಈ ಯೋಜನೆಯನ್ನು ಕೈಗೆತ್ತಿಕೊಂಡು ನಮ್ಮ ತಾಲ್ಲೂಕಿಗೆ ಸಮಗ್ರವಾಗಿ ಪರಿಪೂರ್ಣವಾಗಿ ನೀರನ್ನು ಒದಗಿಸತಕ್ಕಂಥಹ ಕೆಲಸ ಮಾಡಿಕೊಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

†ಡಾ.ಎಂ.ಸಿ. ಸುಧಾಕರ್(ಚಿಂತಾಮಣಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಬಹಳಷ್ಟು ಪಟ್ಟಣ ಪ್ರದೇಶಗಳಲ್ಲಿ ಕೆರೆಗಳ ನೀರನ್ನು ಟ್ಯಾಂಕ್‌ನಿಂದ ಸರಬರಾಜು ಮಾಡುತ್ತಿದ್ದಾರೆ. ನೀರನ್ನು ಪ್ಯೂರಿಫೈ ಮಾಡಿ ಕೊಡುತ್ತಿದ್ದಾರೆ. ಈಗಾಗಲೇ ಮಾನ್ಯ ರಾಜೇಂದ್ರನರವರು ಹಾಗೂ ಬಹಳಷ್ಟು ಹಿರಿಯ ಸದಸ್ಯರುಗಳು ಹೋದ ಸಭೆಯಲ್ಲೂ ಕೂಡ ಈ ಬಗ್ಗೆ ಗಲಾಟೆಯನ್ನು ಮಾಡಿದ್ದರು. ಬೇತಮಂಗಲ ಟ್ಯಾಂಕನ್ನು ಡೀಸಿಲ್ಟ್ ಮಾಡಬೇಕು, ಕೋಲಾರ ಪಟ್ಟಣಕ್ಕೆ ಕೊಡುತ್ತಿರುವ ಟ್ಯಾಂಕ್‌ನ್ನು ಡೀಸಿಲ್ಟ್ ಮಾಡಬೇಕು. ಚಿಂತಾಮಣಿ ಟ್ಯಾಂಕನ್ನು ಕೂಡ ಡಿಸಿಲ್ಟ್ ಮಾಡಬೇಕು. ಈ ರೀತಿಯಾಗಿ ಡೀಸಿಲ್ಟ್ ಮಾಡಬೇಕು ಹಾಗೂ ಪೋಷಕ ಕಾಲುವೆಗಳನ್ನು ನಾವು ಅಭಿವೃದ್ಧಿ ಪಡಿಸಬೇಕಾಗಿದೆ. ಅದು ಡೀಸಿಲ್ಟ್ ಮಾಡಿ ಸುಮಾರು 20–30 ವರ್ಷಗಳಾಗಿರಬಹುದು. ಆ ಕಾಲುವೆಗಳಲ್ಲಿ ಹೂಳು ತುಂಬಿ ಹೋಗಿ ನಾಳೆ ಬೆಳಿಗ್ಗೆ ಮಳೆ ಬಂದರೂ ಆ ಟ್ಯಾಂಕ್‌ಗಳಿಗೆ ನೀರು ಹೋಗದೆ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಎಲ್ಲಾ ವಿಚಾರವಾದರೆ ನೀರಿಲ್ಲದೆ ಇರುವಂತಹ ಪಟ್ಟಣಪ್ರದೇಶಗಳಲ್ಲಿ ನಾವು ಬಹಳಷ್ಟು ಮುಂದುವರಿದು ಅಂಡರ್‌ಗ್ರೌಂಡ್ ಡ್ರೈನೇಜ್ ಎಲ್ಲವನ್ನೂ ಕೂಡ ಮಾಡಿದ್ದೇವೆ, ಅದರಿಂದಾಗುವಂತಹ ಅನಾಹುತಗಳೇನು? ನೀರು ಸರಿಯಾದ ರೀತಿಯಲ್ಲಿ ಹರಿಯದೆ ಅ ಅಂಡರ್‌ಗ್ರೌಂಡ್ ಡ್ರೈನೇಜ್ ನಾಳೆ ದಿವಸ ಬ್ಲಾಕ್ ಆಗಿ ಅದರಿಂದ ಸರ್ಕಾರಕ್ಕೆ ಹೆಚ್ಚಿನ ಖರ್ಚು ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಜೊತೆಗೆ ನಮ್ಮ ಕೋಲಾರ ಜಿಲ್ಲೆಗೆ ಸುಮಾರು 6 ತಿಂಗಳಿಂದ ಹಣವನ್ನು ಸರ್ಕಾರ ಒದಗಿಸುತ್ತಿದೆ. ಆದರೆ ನಮ್ಮ ಬೇಡಿಕೆ ಏನಿದೆ. 100 ರೂಪಾಯಿಗಳ ಬೇಡಿಕೆಯಾದರೆ 10 ರೂಪಾಯಿಗಳನ್ನು ಕೊಟ್ಟು ನೀವು 3 ತಿಂಗಳಲ್ಲಿ ಮಾಡಿ ಎಂಬ ವಿಚಾರಗಳು ನಡೆಯುತ್ತಿದೆ. ದಯವಿಟ್ಟು ಇಲ್ಲಿ ಯಾವ ರೀತಿಯಾದ ಪರಿಸ್ಥಿತಿ ಇದೆ ಅದರ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಗೊತ್ತು. ಇದರ ಬಗ್ಗೆ ಎಲ್ಲರಿಗೂ ಸಹ ಗೊತ್ತಿದೆ. ಅದನ್ನು ಸರಿಯಾದ ರೀತಿಯಲ್ಲಿ ನೋಡಬೇಕು. ಏನು ಬೇಡಿಕೆಗಳು ಇದೆ, ಅದಕ್ಕೆ ತಕ್ಕಂತಹ ಹಣವನ್ನು ಒದಗಿಸಿದರೆ ನಾವು ಅಲ್ಲಿನ ಸಮಸ್ಯೆಯನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ನಾವು ಬೋರ್‌ವೆಲ್ ಕೊರೆದು ನೀರು ಬಂದು ಪಂಪು, ಮೋಟಾರು ಕೊಟ್ಟರೂ ಕೂಡ ಎಲೆಕ್ಟ್ರಿಫಿಕೇಷನ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಕೆಪಿಟಿಸಿಎಲ್ ಮತ್ತು ಬೆಸ್ಕಾಂನವರನ್ನು ಕೇಳಿದರೆ ಅವರು ಪೋಲ್ ಇಲ್ಲ ಮೆಟೀರಿಯಲ್ಸ್ ಇಲ್ಲವೆಂದು ಹೇಳುತ್ತಾರೆ. ಅವರು ಏನೂ ಇಲ್ಲವೆಂದು ವಿವಿಧ ರೀತಿಯಾದಂತಹ ಕಾರಣವನ್ನು ಹೇಳುತ್ತಾರೆ. ಈಗಾಗಲೇ ಗ್ರಾಮಪಂಚಾಯಿತಿಗಳಿಗೆ ಏತಕ್ಕಾಗಿ ವಹಿಸಬೇಕು ನೀರಿನ ಹಾಗೂ ಮನೆಗಳ ಜವಾಬ್ದಾರಿಯನ್ನು ಅವರಿಗೆ ವಹಿಸಬೇಕು ಎಂಬ ಬಗ್ಗೆ ಬಹಳಷ್ಟು ಚರ್ಚೆಯಾಗುತ್ತಿದೆ. ಇದರ ಬಗ್ಗೆ ನಾವು ಹೇಳಬೇಕಾದರೆ ನಮ್ಮ ಒಂದು ಮನೆತನದಲ್ಲಿ ನಾನು ಮೂರನೇ ಒಬ್ಬ ಶಾಸಕನಾಗಿ ಮೂರನೇ ತಲೆಮಾರಿನ ಶಾಸಕನಾಗಿ ಬಂದಿದ್ದೇನೆ. ಈಗಾಗಲೇ ಜನ ಏನು ಕಂಡಿದ್ದಾರೆಂದರೆ, ಇಷ್ಟು ವರ್ಷಗಳಿಂದ ಶಾಸಕರದು ಜವಾಬ್ದಾರಿ ಇಂತಹದ್ದು ಇತ್ತು. ಈಗ ನಿಮಗೆ ಜವಾಬ್ದಾರಿ ಇಲ್ಲವೆನ್ನುವಂತಹ ಮಾತನ್ನು ಅವರು ಹೇಳುತ್ತಿದ್ದಾರೆ. ನೀವು ಹೇಳುವ ಮಾತನ್ನು ನಂಬುವುದಿಲ್ಲವೆಂದು ಹೇಳುತ್ತಿದ್ದಾರೆ ನಾನು ಈಗ ಸರ್ಕಾರವನ್ನು ಕೇಳುವುದು ಇಷ್ಟೆ, ದಯವಿಟ್ಟು redefine the legislator's responsibilities. ಶಾಸಕರ ಜವಾಬ್ದಾರಿ, ರೆಸ್ಪಾನ್ಸಿಬಿಲಿಟಿ ಏನಿದೆ, ಅದನ್ನು ತಾವು ದಯವಿಟ್ಟು ತಾವು ರೀಡಿಫೈನ್ ಮಾಡಬೇಕಾಗಿದೆ. ಬಹಳಷ್ಟು ಜನ ನಾವು ಯುವಕ ಶಾಸಕರು ಏನಿದ್ದೇವೆ, ನಾಳೆ ಬೆಳಿಗ್ಗೆ ಚುನಾಯಿಸಿದ ಜನರಿಗೆ ನಾವು

ಹೇಳಬೇಕಾಗಿದೆ. ಸುಮಾರು 30 ವರ್ಷಗಳಿಂದ ಏನು ನಡೆಯುತ್ತಿದೆ ಸಂಪ್ರದಾಯ ಅದೇ ಈಗಲೂ ಕೂಡ ಮುಂದುವರಿಯುತ್ತಿದೆ. ಪ್ರತಿಯೊಂದಕ್ಕೂ ನಮ್ಮ ಹತ್ತಿರ ಬಂದು ನೀವೇ ಮಾಡಬೇಕೆನ್ನುವಂತಹ ಸಂಪ್ರದಾಯವಿದೆ. ಇದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಬೇಕು. ನಂತರ ಈ ಸದನದಲ್ಲಿ ಬಹಳಷ್ಟು ಹಿರಿಯರಿದ್ದೀರಿ, ಈ ಶಾಸಕರ ಜವಾಬ್ದಾರಿ ಇಷ್ಟೇ ಎಂದು ಹೇಳಿದರೆ ಇದಕ್ಕಾಗಿ ನಾವು ಚುನಾವಣೆಗೆ ಹೋಗಿ ಚುನಾಯಿತರಾಗಬೇಕಾ? ಇಲ್ಲವೆಂದರೆ ನಾವು ನಾಮಿನೇಷನ್ ಮಾಡಿಕೊಳ್ಳುವಂತಹ ಪದ್ಧತಿ ಏತಕ್ಕಾಗಿ ತರಬಾರದು ಎಂಬುದು ನನ್ನ ಅನಿಸಿಕೆಯಾಗುತ್ತದೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ಬಹಳಷ್ಟು ಹೆಚ್ಚಿನ ಗಮನವನ್ನು ಹರಿಸಬೇಕು. ಅಧಿಕಾರ ವಿಕೇಂದ್ರೀಕರಣ ಮಾಡುವುದರ ಜೊತೆಗೆ ಶಾಸಕರ ಅಧಿಕಾರವನ್ನು ಮೊಟಕುಗೊಳಿಸುತ್ತಿದ್ದಾರೆ. ನಾವು ಅದರ ಬಗ್ಗೆ ಬಹಳಷ್ಟು ಆಲೋಚನೆಯನ್ನು ಮಾಡಬೇಕು. ಈ ಸದನದಲ್ಲಿ ಒಂದಲ್ಲ ಎರಡು ದಿವಸಗಳ ಕಾಲ ಚರ್ಚೆಯಾಗಿ ಬೇಕಾದರೆ ನಾವು ಕೇಂದ್ರಕ್ಕೆ ರೆಕಮೆಂಡೇಷನ್ ಮಾಡಿ ನಾವು ನಮ್ಮ ಸಂವಿಧಾನದಲ್ಲಿ ಇದರ ಬಗ್ಗೆ ತಿದ್ದುಪಡಿ ತರುವುದರ ಬಗ್ಗೆ ಪ್ರಯತ್ನವನ್ನು ಮಾಡಬೇಕು, ಇಲ್ಲವೆಂದರೆ ನಾವು ಓಟು ಹಾಕಿಸಿಕೊಂಡಂತಹ ಜನಕ್ಕೆ ಸ್ಪಂದಿಸದಿದ್ದರೆ ನಾವು ಯಾವುದೇ ರೀತಿಯಲ್ಲಿ ಮುಂದೆ ಪರಿಸ್ಥಿತಿ ಎದುರಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾ ಕಡೆಗೂ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎ. ಪಾಪರೆಡ್ಡಿ(ರಾಯಚೂರು)** : ಮಾನ್ಯ ಅಧ್ಯಕ್ಷರೆ, ನಾನು ರಾಯಚೂರು ಕ್ಷೇತ್ರದಿಂದ ಬಂದಂತಹ ಶಾಸಕನಾಗಿದ್ದೇನೆ. ಇಡೀ ರಾಜ್ಯದಲ್ಲಿಯೇ ರಾಯಚೂರು ಕ್ಷೇತ್ರ ಅತಿ ಹೆಚ್ಚಿಗೆ ಉಷ್ಣಾಂಶ ಇರುವಂಥ ಕ್ಷೇತ್ರವಾಗಿದೆ. ಅಲ್ಲಿ 45 ಸೆಂಟಿಗ್ರೇಡ್ ಉಷ್ಣಾಂಶವಿರುತ್ತದೆ. ಈಗ ಎಲ್ಲಾ ಮಾತನಾಡಿದಂತಹ ಸದಸ್ಯ ಕ್ಷೇತ್ರದಲ್ಲಿ 32 ರಿಂದ 40 ಸೆಂಟಿಗ್ರೇಡ್ ಉಷ್ಣಾಂಶವಿರುತ್ತದೆ. ನನ್ನ ಕ್ಷೇತ್ರದಲ್ಲಿ 45 ಸೆಂಟಿಗ್ರೇಡ್ ಇರುತ್ತದೆ. ಯಾವುದೇ ಅಧಿಕಾರಿಗಳು ಈ ಭಾಗದಿಂದ ಆ ಭಾಗಕ್ಕೆ ಬರಬೇಕಾದರೆ ಪನಿಶಮೆಂಟ್ ಆಗಿಯೇ ಬರಬೇಕು. ಇಲ್ಲಿ 45 ಸೆಂಟಿಗ್ರೇಡ್ ಉಷ್ಣಾಂಶ ಇರುವ ಕಾರಣ ಇಲ್ಲಿ ಹೆಚ್ಚಿಗೆ ಬಿಸಿಲು ಇರುತ್ತದೆ, ಆದ್ದರಿಂದ ಅಲ್ಲಿಗೆ ಬರಲಿಕ್ಕೆ ಅಂಜಿಕೊಳ್ಳುತ್ತಿದ್ದಾರೆ. ನನ್ನ ಕ್ಷೇತ್ರದ ಎಲ್ಲಾ ಹಳ್ಳಿಗಳಲ್ಲಿ ನೀರಿನ ಅಭಾವ ಬಹಳಷ್ಟು ಇದೆ. ರಾಯಚೂರು ನಗರದಲ್ಲೂ ನೀರಿನ ಅಭಾವ ಬಹಳಷ್ಟು ಇದೆ. ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಆಗಲೇಬೇಕಾಗಿದೆ. ಈಗ ಬಂದಂತಹ ಹಣವನ್ನು 5 ತಾಲ್ಲೂಕುಗಳಿಗೂ ಕೊಡಬೇಕಾಗುತ್ತದೆ. ಮೊನ್ನೆ ತಾನೆ 40 ಲಕ್ಷ ರೂಗಳು ಬಂದರೆ ನಮಗೆ 5 ಲಕ್ಷ ರೂಗಳನ್ನು ಕೊಟ್ಟರು. ಆದರೆ ನನ್ನ ಕ್ಷೇತ್ರದಲ್ಲಿ ಬರಗಾಲದಿಂದ ಜನರು ಕುಡಿಯುವುದಕ್ಕೆ ನೀರಿಲ್ಲದೆ ಅಲ್ಲಿಂದ ವಲಸೆ ಹೋಗುತ್ತಿದ್ದಾರೆ. ಬೇರೆ ಬೇರೆ ಊರುಗಳಿಗೆ ವಲಸೆ ಹೋಗುತ್ತಿದ್ದಾರೆ. ಅಲ್ಲಿ ಮುದುಕರು ಮತ್ತು ಸಣ್ಣ ಹುಡುಗರು ಇರುತ್ತಾರೆ. 50 ಪರ್ಸೆಂಟ್ ಜನರು ಊರು ಬಿಟ್ಟು ಹೋಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಗರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು. ಅಲ್ಲಿಯೇ ಥರ್ಮಲ್ ಪ್ಲಾಂಟ್ ಇದೆ, ಅದು ಬಂದು ನನ್ನ ಕ್ಷೇತ್ರವಾದ ರಾಯಚೂರಿನಲ್ಲಿ ಹೆಚ್ಚಿಗೆ ಉಷ್ಣಾಂಶ ಇರುವುದರ ಜೊತೆಗೆ ಅಲ್ಲಿ ವಾಸ ಮಾಡುವಂತಹ ರೈತರಿಗೆ ಕರೆಂಟ್‌ನ್ ವ್ಯವಸ್ಥೆ ಇಲ್ಲ, 3 ಗಂಟೆಗಳು ಸತತವಾಗಿ ಉರಿದಿಲ್ಲ. ಯಾವಾಗಲೂ ಕೂಡ ಕರೆಂಟ್ ಕಟ್ ಆಗುತ್ತಿರುತ್ತದೆ. ಅದರಿಂದ ರೈತರಿಗೆ ಬಹಳಷ್ಟು ತೊಂದರೆಯಾಗಿ ರೈತರುಗಳು ಊರು ಬಿಟ್ಟು ಹೋಗುತ್ತಿದ್ದಾರೆ. ಈ ಕಾರಣದಿಂದ ಕರೆಂಟ್ ವ್ಯವಸ್ಥೆ ಕೂಡ ಸರಿಯಾಗಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಕೂಡ ಸರಿಯಾಗಿರುವುದಿಲ್ಲ.

ಬಂದಂತಹ ನೀರೂ ಕೂಡ ಸರಿಯಾಗಿ ಬಳಕೆಯಾಗುವುದಿಲ್ಲ. ಈಗ ತಾನೇ ಸನ್ಮಾನ್ಯ ಮಂತ್ರಿಗಳು ಹೇಳಿದರು, ಜಿಲ್ಲಾ ಪಂಚಾಯಿತಿಯಲ್ಲಿ ಬೇಕಾದಷ್ಟು ಹಣವಿದೆ, ನಾವು ಜಿಲ್ಲಾ ಪಂಚಾಯಿತಿಗೆ ಹೋಗಿ ಕೇಳಿದರ 10 ಪೈಸೆ ಕೂಡ ಇಲ್ಲವೆಂದು ಅವರು ಹೇಳುತ್ತಾರೆ. ತಾಲ್ಲೂಕು ಹಾಗೂ ಗ್ರಾಮಪಂಚಾಯಿತಿಗಳಲ್ಲೂ ಕೂಡ ಹಣ ಇಲ್ಲವೆಂದು ಹೇಳುತ್ತಾರೆ, ನಾವು ಯಾರಿಗೆ ಹೋಗಿ ಹೇಳಬೇಕು? ಜನರು ಶಾಸಕರನ್ನು ಕೇಳುತ್ತಿದ್ದಾರೆ. ನಾವು ಅಲ್ಲಿಗೆ ಹೋದ ತಕ್ಷಣ ನಮ್ಮ ಊರಿನಲ್ಲಿ ಬೋರ್‌ವೆಲ್ ಕೆಟ್ಟುಹೋಗಿದೆ, ಅದನ್ನು ರಿಪೇರಿ ಮಾಡಿ ಕೊಡಿ, ನಮಗೆ ಬೋರ್‌ನಿಂದ ನೀರನ್ನು ಕೊಡಿಸಿ ಎಂದು ಕೇಳುತ್ತಾರೆ, ನೀರನ್ನು ಕೊಡಿಸುವುದಕ್ಕೆ ರೊಕ್ಕವಿಲ್ಲ, ಜಿಲ್ಲಾ ಪಂಚಾಯಿತಿಯಲ್ಲಿ ಇಲ್ಲ, ಜಿಲ್ಲಾಧಿಕಾರಿಗಳ ಹತ್ತಿರ ಹಣವಿಲ್ಲ, ತಾಲ್ಲೂಕು ಪಂಚಾಯಿತಿಗಳಲ್ಲೂ ಕೂಡ ಹಣವಿಲ್ಲ. ಮತ್ತೆ ನಾವು ಯಾರನ್ನು ಕೇಳಬೇಕು? ಆ ಕಾರಣದಿಂದ ಸರ್ಕಾರ ಶಾಸಕರ ನಿಧಿಯನ್ನು ಪ್ರತಿಯೊಂದು ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ಅಲ್ಲಿ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವ ಬಗ್ಗೆ ಅನುಕೂಲವಾಗುತ್ತದೆ. ಆ ಕಾರಣದಿಂದ ದಯಮಾಡಿ ತಾವು ಸರ್ಕಾರದ ಮೇಲೆ ಪ್ರಭಾವ ಬೀರಿ ಒಂದೊಂದು ಕೋಟಿ ರೂಪಾಯಿಗಳನ್ನು ಒಂದೊಂದು ಕ್ಷೇತ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯು ಸಲುವಾಗಿ ಕೊಡಬೇಕು. ಹಣವನ್ನು ಗ್ರಾಮಪಂಚಾಯಿತಿಗೆ ಕೊಟ್ಟರೆ ಗ್ರಾಮಪಂಚಾಯಿತಿಯಲ್ಲಿ ಕಾರ್ಯದರ್ಶಿಗಳು ಕೆಲಸವನ್ನೇ ಮಾಡುತ್ತಿಲ್ಲ. ಒಂದೊಂದು ಗ್ರಾಮಪಂಚಾಯಿತಿ ಸೆಕ್ರೆಟರಿಗೆ ಎರಡೆರಡು ಕ್ಷೇತ್ರಗಳನ್ನು ಬಿಟ್ಟಿದ್ದಾರೆ. ಎರಡೆರಡು ಪಂಚಾಯಿತಿಗಳನ್ನು ಕೊಡುತ್ತಾರೆ. ಅವರು ಅಲ್ಲಿಗೆ ಹೋಗುವುದೇ ಇಲ್ಲ. ಅವರು ರಾಯಚೂರು ಜಿಲ್ಲಾ ಕೇಂದ್ರದಲ್ಲಿರುತ್ತಾರೆ, ಅವರು ಹಳ್ಳಿಗಳ ಪರಿಸ್ಥಿತಿಯನ್ನು ನೋಡಲಿಕ್ಕಾಗುವುದಿಲ್ಲ. ಆ ಕಾರಣದಿಂದಾಗಿಯೇ ಶಾಸಕರ ಒಂದು ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಕಮಿಟಿಗೆ ಕೊಟ್ಟರೆ ಸರಿಯಾದಂತಹ ವ್ಯವಸ್ಥೆಯಲ್ಲಿ ಜನರು ಕೇಳಿದಾಗ ಬೋರ್‌ವೆಲ್‌ಗಳನ್ನು ಕೊಟ್ಟು ನೀರಿನ ವ್ಯವಸ್ಥೆಯನ್ನು ಮಾಡಿಕೊಡುವುದಕ್ಕೆ ಅನುಕೂಲವಾಗುತ್ತದೆ. ಈ ಒಂದು ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ಇದರ ಬಗ್ಗೆ ಚರ್ಚೆಯಾಗಿ ಈ ಪಂಚಾಯಿತಿಯ ಬಗ್ಗೆ ಏನು ನಿಯಮವಾಗಿದೆ ಅದನ್ನು ಬದಲಾವಣೆ ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯವನ್ನು ಮಾಡುತ್ತೇನೆ.

**ಅಧ್ಯಕ್ಷರು** : ಈಗ ನಾನು ಚರ್ಚೆಯನ್ನು ಮುಕ್ತಾಯ ಮಾಡುತ್ತಿದ್ದೇನೆ.

**(ಗೊಂದಲ)**

**ಅಧ್ಯಕ್ಷರು** : ಈಗ ತಾವುಗಳೆಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು. ಈ ತರಹ ಆದರೆ ಹೇಗೆ ? ಈಗ ರಾಜ್ಯಪಾಲರ ವಂದನಾನಿರ್ಣಯವಿದೆ, ಅದರ ಮೇಲೆ ಚರ್ಚೆ ಮಾಡುವ ಬಗ್ಗೆ ಎಲ್ಲಾ ಸದಸ್ಯರು ಭಾಗವಹಿಸುವುದಕ್ಕೆ ಅವಕಾಶವಿದೆ. ಈ ತರಹ ಆದರೆ ನಾವು ಸದನವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಎಲ್ಲರೂ ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

**ಅಧ್ಯಕ್ಷರು** : ಆಗುವುದಿಲ್ಲ. ಈ ರೀತಿಯಾಗಿ ಎಷ್ಟು ದಿನವೆಂದು ನಡೆಸುವುದಕ್ಕಾಗುತ್ತದೆ?

**ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಇಷ್ಟೊಂದು ಜ್ವಲಂತ ಸಮಸ್ಯೆಗಳಿದ್ದರೂ ಸಹ ಎಲ್ಲವನ್ನೂ ಪಕ್ಕಕ್ಕೆ ಇಟ್ಟು ಕುಡಿಯುವ

ನೀರಿನ ಹಾಹಾಕಾರ ಹಾಗೂ ವಿದ್ಯುತ್ ಕ್ಷಾಮದ ಬಗ್ಗೆ ನಿಲುವಳಿ ಸೂಚನೆಯ ಮೇರೆಗೆ ಚರ್ಚೆಯಾಗುತ್ತಿದೆ. ಅದನ್ನು ತಾವು ಕನ್‌ವರ್ಟ್ ಮಾಡಿಕೊಟ್ಟಿದ್ದೀರಿ. ಅನೇಕ ಜನ ಶಾಸಕರು ಸ್ಪೆಸಿಫಿಕ್ಕಾಗಿ ಹೇಳಿದ್ದಾರೆ. ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯದ ಬಗ್ಗ ಅನೇಕ ವಿಷಯಗಳು ಇಲ್ಲಿ ಬಂದಿದೆ, ಆ ಸಮಯದಲ್ಲಿ ಏನೇನು ಮಾತನಾಡಬೇಕೋ ಮಾತನಾಡುತ್ತೇನೆ. ಇಲ್ಲಿ ಸ್ಪೆಸಿಫಿಕ್ಕಾಗಿ ಕುಡಿಯುವ ನೀರು ಮತ್ತು ವಿದ್ಯುತ್‌ನ ಬಗ್ಗೆ ಇನ್ನೂ ಒಂದು ಗಂಟೆಗಳ ಕಾಲ ಚರ್ಚೆಯನ್ನು ಮಾಡೋಣ. ನಾಳೆ ಒಂದು ಅರ್ಧ ದಿವಸ ಮಾಡಿ ನಂತರ ಇದನ್ನು ತೆಗೆದುಕೊಳ್ಳೋಣ. ನಾವು ನಿಮಗೆ ಕೋ–ಅಪರೇಟ್ ಮಾಡುತ್ತೇವಲ್ಲಾ.

**ಅಧ್ಯಕ್ಷರು** : ಬಹಳ ಪ್ರಮುಖವಾದಂತಹ ವಿಷಯಗಳಿವೆ. ನಿಯಮ –69ರ ಅಡಿಯಲ್ಲಿ ಚರ್ಚೆ ನಡೆಯಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಒಂದು ಕೆಲಸ ಮಾಡಿ ಸಾರ್, ಇವತ್ತು 6–30 ಗಂಟೆಯವರೆಗೂ ಚರ್ಚೆ ನಡೆಯಲಿ. ಇನ್ನೂ 10 ರಿಂದ 12 ಜನರು ಇದರ ಬಗ್ಗೆ ಮಾತನಾಡಲಿ. ನಾಳೆ ಈ ತರಹ ಮಾಡಿಸಿ.

**ಅಧ್ಯಕ್ಷರು** : ಯಡಿಯೂರಪ್ಪನವರೇ, ಬಹಳ ಕಷ್ಟವಾಗುತ್ತದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಾವು ನಿಮಗೆ ಕೋ–ಅಪರೇಟ್ ಮಾಡುತ್ತೇನೆ. ಇನ್ನು 8–10 ಜನರಿಗೆ ಮಾತನಾಡುವುದಕ್ಕೆ ಐದೈದು ನಿಮಿಷಗಳ ಕಾಲ ಅವಕಾಶವನ್ನು ಮಾಡಿಕೊಡಿ.

**ಅಧ್ಯಕ್ಷರು** : ಮಾತನಾಡುವುದರ ಬಗ್ಗೆ ಅವಕಾಶ ಕೊಡುವುದಕ್ಕೆ ನನ್ನದೇನೂ ಅಡ್ಡಿಯಿಲ್ಲ. ಆದರೆ ಇದು ಇವತ್ತು ಮುಗಿಯದಿದ್ದರೆ ಬೇರೆ ಬೇರೆ ಸಮಸ್ಯೆಗಳು ಇವೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಇವತ್ತು 6–30 ಗಂಟೆಯವರೆವಿಗೂ ಕೂಡ ಮಾತನಾಡಲಿ ನಾಳೆ ದಿವಸ ಬೇರೆಯವರಿಗೂ ಕೂಡ ಅವಕಾಶವನ್ನು ಮಾಡಿಕೊಡಿ.

**ಶ್ರೀ ಹೆಚ್. ಅಂಜನೇಯ** : ಮಾನ್ಯ ಸಭಾಧ್ಯಕ್ಷರೆ,.....

**ಶ್ರೀ ವಾಟಾಳ್ ನಾಗರಾಜ್** : ಇದು ಸಂಪೂರ್ಣವಾಗಿ ಈ ದಿನವೆಲ್ಲಾ ಚರ್ಚೆಯಾಗಲಿ. ನಾಳೆ ಸರ್ಕಾರದವರು ಉತ್ತರ ಕೊಡಲಿ.

**ಅಧ್ಯಕ್ಷರು** : ಆಗುವುದಿಲ್ಲ. ಬೇರೆ ಯಾವುದೂ ಚರ್ಚೆಗೆ ಬೇಡ ಅಂತೀರಾ? ಆಯಿತು. ಈಗ ಇಡೀ ಸದನ ನಿರ್ಧಾರ ಮಾಡಿಬಿಟ್ಟರೆ, ಇದೊಂದನ್ನೇ ನಾಳೆ ಇಡೀ ದಿವಸ ಚರ್ಚೆ ಮಾಡುವುದಾದರೆ ನನ್ನದೇನೂ ಅಡ್ಡಿಯಿಲ್ಲ. ಆದರೆ ಬೇರೆ ಬೇರೆ ಗಂಭೀರವಾದ ವಿಚಾರಗಳನ್ನು ಮಾನ್ಯ ಸದಸ್ಯರುಗಳು ಎತ್ತಿದ್ದಾರೆ. ಅವೆಲ್ಲವೂ ಕೂಡ ಚರ್ಚೆಯಾಗಬೇಕು. ಅದಕ್ಕೋಸ್ಕರ ಸಾಕಷ್ಟು ಈ ವಿಚಾರದಲ್ಲಿ ಚರ್ಚೆಯಾಗಿದೆ. ಆದ್ದರಿಂದ ಇವತ್ತು ಇದನ್ನು ಮುಕ್ತಾಯ ಮಾಡೋಣ ಅಂತ......

**ಶ್ರೀ ಅರಗ ಜ್ಞಾನೇಂದ್ರ** : ಈಗ ನಾವೆಲ್ಲರೂ ಮಾತನಾಡಿ ಅವರಿಗೆ ಹೃದಯ ಪರಿವರ್ತನೆಗಾಗಿ ಒಂದಿಷ್ಟು ಕೋಟಿಗಟ್ಟಲೆ ದುಡ್ಡು ಕೊಡುತ್ತಾರೋ ಏನೋ ಅಂತ ಈ ಒತ್ತಡವನ್ನು ನಾವು ಹಾಕೋಣ.

**(ಗೊಂದಲ)**

(ಅನೇಕ ಸದಸ್ಯರುಗಳು ಎದ್ದುನಿಂತು ತಮಗೂ ಅವಕಾಶ ಕೊಡಬೇಕೆಂದು ಏಕಕಾಲದಲ್ಲಿ ಕೇಳಿದರು)

**ಅಧ್ಯಕ್ಷರು** : ಆಯಿತು. ಇನ್ನು ಅರ್ಧಗಂಟೆ ಚರ್ಚೆಯಾಗಲಿ. ಈಗ ಮಾನ್ಯ ಅಂಜನೇಯ ಅವರು ಐದು ನಿಮಿಷದಲ್ಲಿ ಮುಗಿಸಬೇಕು. ಈಗ ಗಂಟೆ 5.20 ಆಗಿಹೋಯಿತು. ಈಗ ದಯಮಾಡಿ ಇವತ್ತು ಚರ್ಚೆಯನ್ನು ಮುಗಿಸೋಣ. ಇದಕ್ಕೆ ಎಲ್ಲರೂ ಸಹಕರಿಸಬೇಕು. ನಾಳೆ ಅಲ್ಲಿಂದ ಉತ್ತರ. ಹೀಗೆ ಇದನ್ನು ಮುಕ್ತಾಯ ಮಾಡೋಣ. ಇನ್ನೂ ಅನೇಕ ಬೇರೆ ಬೇರೆ ಗಂಭೀರವಾದ ವಿಚಾರಗಳು ಇವೆ.ಈಗ ಅಂಜನೇಯ ಅವರೇ ನೀವು ಐದು ನಿಮಿಷದಲ್ಲಿ ಮುಗಿಸಬೇಕು.

(ಗೊಂದಲ. ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಿದರು)

**ಅಧ್ಯಕ್ಷರು** : ಈಗ ನಾನು ಮಾನ್ಯ ಅಂಜನೇಯ ಅವರನ್ನು ಕರೆದಿದ್ದೇನೆ, ನೀವೆಲ್ಲರೂ ಎದ್ದುನಿಂತುಕೊಂಡರೆ ಹೇಗೆ? ಮಾನ್ಯ ಅಂಜನೇಯನವರೇ, ನೀವು ಮಾತನಾಡಿ, ಐದು ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ಎಚ್. ಅಂಜನೇಯ(ಭರಮಸಾಗರ)** : ಸನ್ಮಾನ್ಯ ಅಧ್ಯಕ್ಷರೆ, ತಾವು ನೀರಿನ ಬಗ್ಗೆ ಹೆಚ್ಚು ಸಮಯ ಕೊಟ್ಟು.....

**ಅಧ್ಯಕ್ಷರು** : ಐದೇ ನಿಮಿಷ....

**ಶ್ರೀ ಎಚ್. ಅಂಜನೇಯ** : ಪರಿಣಾಮ ಬೀರುವ ರೀತಿಯಲ್ಲಿ ತಾವು ಆಜ್ಞೆ ಮಾಡಬೇಕು. ತಾವು ಗಾಂಧಿವಾದಿಗಳು. ಸ್ವಲ್ಪ ಸುಭಾಶ್‌ಚಂದ್ರ ಬೋಸ್‌ರ ಶಿಸ್ತಿನ ರೀತಿಯಲ್ಲಿ ನೀವು ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಆದೇಶವನ್ನು ನೀಡಬೇಕು ಮತ್ತು ನಮ್ಮನ್ನು ಕಾಪಾಡಬೇಕು. ಏಕೆಂದರೆ ನಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂದರೆ, ಆರವತ್ತು ಹಳ್ಳಿಗಳಲ್ಲಿ ಕುಡಿಯಲಿಕ್ಕೆ ನೀರು ಇಲ್ಲ. ಎಲ್ಲಿ ಬೋರ್ ಹಾಕಿದರೂ ಕೂಡ ನೀರು ಲಭ್ಯತೆ ಆಗುತ್ತಿಲ್ಲ. ಕಳೆದ 9 ತಿಂಗಳಿಂದ ಹತ್ತು ಹಳ್ಳಿಗಳಲ್ಲಿ ಹತ್ತು ಬೋರ್‌ಗಳನ್ನು ಹಾಕಿದ್ದೇವೆ. ಅಲ್ಲಿ ನೀರು ಲಭ್ಯವಾಗಿದೆ. ಆದರೆ ನೀರು ಲಭ್ಯವಾಗಿರತಕ್ಕಂಥ ಕೊಳವೆ ಬಾವಿಗಳಿಗೆ ಇವತ್ತು ಪೈಪ್‌ಲೈನ್ ಹಾಕುವುದಕ್ಕೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಮೋಟಾರ್‌ನ್ನು ಅಳವಡಿಸುವುದಕ್ಕೆ ದುಡ್ಡಿಲ್ಲ ಎಂದು ಹೇಳುತ್ತಾರೆ. ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡುವುದಕ್ಕೆ ಕೂಡ ದುಡ್ಡು ಇಲ್ಲವೆಂದು ಹೇಳುತ್ತಾರೆ. ಜಿಲ್ಲಾ ಪಂಚಾಯತಿಗೆ ಹೋಗಿ ಕೇಳಿದರೆ ಸ್ವಾಮಿ, ಇದು ನಮ್ಮದಲ್ಲ. ಗ್ರಾಮ ಪಂಚಾಯತಿಯನ್ನು ಕೇಳಿರಿ ಅಂತ ಹೇಳುತ್ತಾರೆ. ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷರೂ ಇಲ್ಲ, ಕಾರ್ಯದರ್ಶಿಗಳೂ ಇಲ್ಲ. ನಾವು ಇಷ್ಟು ಹಣ ಎಲ್ಲಿಂದ ತರುವುದು, ನಮ್ಮಲ್ಲಿರುವುದು ಎರಡು–ಮೂರು ಸಾವಿರ ರೂಪಾಯಿಗಳಲ್ಲಿ ಬೇಕಾದರೆ ರಿಪೇರಿ ಮಾಡಿಸಿ ನಮ್ಮಲ್ಲಿರುವುದು ಎರಡು–ಮೂರು ಸಾವಿರ ರೂಪಾಯಿಗಳಲ್ಲಿ ಬೇಕಾದರೆ ರಿಪೇರಿ ಮಾಡಿಸಿ ಕೊಡಬಹುದು. ಅಷ್ಟು ಮಾತ್ರ ನಮ್ಮ ಹತ್ತಿರ ಹಣ ಇದೆ. ಐದಾರು ಲಕ್ಷ ರೂಪಾಯಿ ವೆಚ್ಚಮಾಡಿ ನೀರು ತರತಕ್ಕಂಥ ಶಕ್ತಿ ಗ್ರಾಮ ಪಂಚಾಯತಿಗೆ ಇಲ್ಲವೆಂದು ಅವರು ಹೇಳುತ್ತಾರೆ. ನಾವು ಜಿಲ್ಲಾ ಪಂಚಾಯತಿಯವರಿಗೆ ಹೇಳಿಯಾಯಿತು ಮತ್ತು ಜಿಲ್ಲಾಧಿಕಾರಿಗಳಿಗೂ ಕೂಡ ಹೇಳಿಯಾಯಿತು. ಸರ್ಕಾರದ ಗಮನವನ್ನೂ ಕೂಡ ಸೆಳೆದಿದ್ದಾಯಿತು. ಆದರೆ ಇಲ್ಲಿಯವರೆಗೂ ಕೂಡ ಅದು ಕಾರ್ಯಾಚರಣೆಗೆ ಬಂದಿಲ್ಲ. ಆದ್ದರಿಂದ ಈ ಸದನವನ್ನು, ಮುಗಿಸಿ ನಮ್ಮ ಕ್ಷೇತ್ರದಲ್ಲಿ ಕಾಲಿಡುವುದಕ್ಕೆ ನಮಗೆ ಕಷ್ಟವಾಗಿದೆ. ಜನರು ನೀರು ಕೊಡಿ ಎಂದು ಅಳುತ್ತಿದ್ದಾರೆ. ಕಣ್ಣೀರು ಹಾಕುತ್ತಿದ್ದಾರೆ. ಈಗ ನಾವು ಏನಾದರೂ ಹೋಗಿ ನೋಡಿದರೆ ಅವರ ಕಣ್ಣಲ್ಲಿ ನೀರು ಬರುವುದಿಲ್ಲ, ಅವರ ಕಣ್ಣಲ್ಲಿ ರಕ್ತ ಬರುವ ಸ್ಥಿತಿ ಇವತ್ತು ಪಶುಪಕ್ಷಿಗಳು ಎಲ್ಲೆಲ್ಲಿ ಕೂಡ ಅಡ್ಡಾಡುತ್ತಿಲ್ಲ. ಭೂಮಿ ಮೇಲೆ ಒಂದು ಹನಿ ನೀರೂ ಕಾಣುತ್ತಿಲ್ಲ. ತಮ್ಮ ದನಕರುಗಳನ್ನು

ರೈತರುಗಳು ಬೇರೆ ಊರುಗಳಿಗೆ ಕಳುಹಿಸುತ್ತಿದ್ದಾರೆ. ನಮಗೇ ನೀರು ಇಲ್ಲ, ಇನ್ನೆಲ್ಲಿ ಅವುಗಳನ್ನು ಇಟ್ಟುಕೊಳ್ಳುವುದಕ್ಕೆ ಆಗುತ್ತದೆ ಅಂತ ಹೇಳಿ ಅವರು ಹೀಗೆ ಮಾಡುತ್ತಿದ್ದಾರೆ. ಹೀಗಾಗಿ ಒಂದು ಪಶುಪಕ್ಷಿ ಕೂಡ ನಮ್ಮ ಕ್ಷೇತ್ರದಲ್ಲಿ ಕಾಣುತ್ತಿಲ್ಲ. ಇಂತಹ ಒಂದು ಭೀಕರವಾದಂಥ ವಾತಾವರಣ ನಿರ್ಮಾಣವಾಗಿದೆ. ಹತ್ತು ಹಳ್ಳಿಗಳಲ್ಲಿ ಇವತ್ತು ಚಿತ್ರದುರ್ಗದಿಂದ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿದ್ದೇವೆ. ಅರವತ್ತು ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಇಂತಹ ಸ್ಥಿತಿ ನಿರ್ಮಾಣವಾದ ಮೇಲೆ ನಾವು ಜನಪ್ರತಿನಿಧಿಗಳು ಅಲ್ಲಿ ಏನು ಮಾಡಬೇಕು? ನಾವು ಬಹಳ ಉತ್ಸಾಹದಿಂದ ಶಾಸಕರಾಗಿ ಆಯ್ಕೆಯಾಗಿದ್ದೇವೆ. ಏನೋ ಬಹಳ ಭರವಸೆ ಇಟ್ಟು ಜನರು ನಮ್ಮನ್ನು ಗೆಲ್ಲಿಸಿಬಿಟ್ಟಿದ್ದಾರೆ. ಈಗ ನಮಗೆ ಇದೆಲ್ಲಾ ಗೊತ್ತಾಗುತ್ತಿದೆ ಇಷ್ಟು ಕಷ್ಟ ಆಗುತ್ತದೆ ಎಂದು ಗೊತ್ತಿದ್ದರೆ ನಾವು ಚುನಾವಣೆಗೇ ನಿಲ್ಲುತ್ತಿರಲಿಲ್ಲ. ಅವರ ಕಣ್ಣೀರು ಒರೆಸಲಿಕ್ಕೆ ಆಗುತ್ತಿಲ್ಲ, ಅವರ ಕಷ್ಟಗಳಿಗೆ ಸ್ಪಂದನ ಮಾಡಲಿಕ್ಕೆ ನಮ್ಮ ಕೈಯಲ್ಲಿ ಇವತ್ತು ಆಗುತ್ತಿಲ್ಲ. ಇಂತಹ ಸ್ಥಿತಿ ನಿರ್ಮಾಣವಾಗುತ್ತದೆ ಎಂದು ನನಗೆ ಗೊತ್ತಾಗದಿದ್ದರೆ ಖಂಡಿತವಾಗಿಯೂ ನಾನು ಚುನಾವಣೆಗೆ ಸ್ಪರ್ಧೆ ಮಾಡುತ್ತಿರಲಿಲ್ಲ. ಇಂತಹ ಒಂದು ಪರಿಸ್ಥಿತಿ ನಮಗೆ ಬಂದೊದಗಿದೆ. ಆದ್ದರಿಂದ ಸರ್ಕಾರ ಶಾಸಕರ ಕಷ್ಟಕ್ಕೆ, ಜನರ ಕಷ್ಟಕ್ಕೆ ಬೆಂಬಲವಾಗಿ ನಿಲ್ಲಲೇಬೇಕು. ಏನಾದರೂ ಮಾಡಿ ರಾಜಕೀಯ ಇಚ್ಛಾಶಕ್ತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರದರ್ಶಿಸತಕ್ಕಂಥ ಶಕ್ತಿಯನ್ನು ನೀವು ಅವರಿಗೆ ನೀಡಬೇಕು, ಸರ್ಕಾರಕ್ಕೆ ನೀಡಬೇಕು. ಏಕೆಂದರೆ ನಾವು ಶಾಸಕರಾಗಿ ಒಂದು ಬೋರ್‌ವೆಲ್‌ನ್ನು ಕೂಡ ಕೊಡಿಸುವುದಕ್ಕೆ ನಮಗೆ ಯೋಗ್ಯತೆ ಇಲ್ಲ ಅಂತ ಹೇಳಿದ ಮೇಲೆ ನಾವು ಏಕೆ ಶಾಸಕರಾಗಿ ಇರಬೇಕು? ಆದ್ದರಿಂದ ತಾವು ದಯಮಾಡಿ ಸರ್ಕಾರಕ್ಕೆ ಮತ್ತೆ ಮುಖ್ಯಮಂತ್ರಿಗಳಿಗೆ ಹೇಳಿ ಕೂಡಲೇ ಈ ಸಭೆ ಮುಗಿದ ತಕ್ಷಣವೇ ಏನಾದರೂ ಮಾಡಿ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಿ ಶಾಸಕರ ನೇತೃತ್ವದಲ್ಲಿ ಶಾಸಕರ ಉಸ್ತುವಾರಿಯಲ್ಲಿ ನೀರು ಸರಬರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಸರ್ಕಾರದ ಸ್ಪಷ್ಟ ನಿರ್ದೇಶನ ಬರುವವರೆಗೂ ಕೂಡ ನಾವು ಸದನ ಬಿಟ್ಟು ಕದಲುವುದಿಲ್ಲ ಮತ್ತು ನಾವು ನಮ್ಮ ಊರುಗಳಿಗೆ ಕೂಡ ಹೋಗುವುದಿಲ್ಲ. ಸರ್ಕಾರದಿಂದ ಸರಿಯಾದ ಭರವಸೆ ಬರಬೇಕು. ಅವಾಗಲೇ ನಾವು ಇಲ್ಲಿಂದ ಹೋಗುವುದು. ಹಿರಿಯರಾದ ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಮೊನ್ನೆ ನೀರು ಸರಬರಾಜು ಮಾಡುವುದಕ್ಕೆ ಎಲ್ಲಾ ಶಾಸಕರುಗಳಿಗೂ ಕೂಡ ಒಂದೊಂದು ಕೋಟಿ ರೂಪಾಯಿ ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ.

**ಶ್ರೀ ಎಸ್. ರಾಜೇಂದ್ರನ್** : ಅಧ್ಯಕ್ಷರೆ, ಒಂಧೊಂದು ಕೋಟಿ ರೂ ಅಲ್ಲ, ಒಂದೊಂದು ಕೆರೆಯನ್ನು ಡೀಸಿಲ್ಟಿಂಗ್ ಮಾಡಿದರೆ ಸಾಕು. ನಮ್ಮ ಜಿಲ್ಲಾ ಮಂತ್ರಿಗಳು ಇಲ್ಲಿ ಕುಳಿತುಕೊಂಡಿದ್ದಾರೆ. ನಮ್ಮ ವಾಟರ್‌ಟ್ಯಾಂಕ್ ಬಗ್ಗೆ ಸುಮಾರು ಸಲ ನಾನು ಹೇಳಿದ್ದೇನೆ. ಸರ್ಕಾರದವರು ಆ ಕೆರೆಯನ್ನು ಡೀಸಿಲ್ಟಿಂಗ್ ಮಾಡಿಕೊಟ್ಟರೆ ಸಾಕು. ಮಾನ್ಯ ವಾಟಾಳ್ ನಾಗರಾಜ್ ಅವರು ಒಂದು ಕೋಟಿ ರೂಪಾಯಿ ಕೊಡಬೇಕು, ಕೊಡದಿದ್ದರೆ ಧರಣಿ ಮಾಡುತ್ತೇವೆ ಎಂದು ನಿರ್ಧಾರ ಮಾಡಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಸಭೆಯಲ್ಲಿ ಇದ್ದಾರೆ. ಈಗ ಮಾಡದಿದ್ದರೆ ಡೀಸಿಲ್ಟಿಂಗ್ ಇನ್ಯಾವಾಗ ಮಾಡುವುದು ಸ್ವಾಮಿ? ಆಮೇಲೆ ನಿಮ್ಮ ಅಧಿಕಾರಿಗಳು ಎಲ್ಲಿ ಸಿಗುತ್ತಾರೆ ಹೇಳಿ. ಈಗ ಸ್ವಲ್ಪ ಮಳೆ ಬಂದಿದೆ. ಮಳೆ ಬರದೇ ಇದ್ದರೆ ಏನು ಮಾಡುತ್ತೀರಿ?

**ಅಧ್ಯಕ್ಷರು** : ಮಾನ್ಯ ರಾಜೇಂದ್ರನ್‌ರವರೇ ಕುಳಿತುಕೊಳ್ಳಿ. ಅವರು ಮಾತನಾಡಲಿ.

ನೀವು ಈಗಾಗಲೇ ಮಾತನಾಡಿದ್ದೀರಿ.

**ಶ್ರೀ ಎಸ್. ರಾಜೇಂದ್ರನ್** : ನಾನು ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಸ್ವಲ್ಪ ಇದರ ಬಗ್ಗೆ ನೋಡಿ.

**ಶ್ರೀ ಎಚ್. ಅಂಜನೇಯ** : ಎರಡು ದಿನಕಾಲ ನನ್ನ ಕ್ಷೇತ್ರದಲ್ಲಿ ಅಧಿಕಾರಿಗಳ ಜತೆಗೆ ನಾನು ಪ್ರವಾಸ ಮಾಡಿದ್ದೇನೆ. ಇಪ್ಪತ್ತೆರಡು ಗ್ರಾಮಪಂಚಾಯತಿಗಳಿಗೆ ಹೋಗಿ ಎಲ್ಲವನ್ನೂ ಅಧ್ಯಯನ ಮಾಡಿದ್ದೇನೆ. ಇಪ್ಪತ್ತೆಂಟು ಗ್ರಾಮಪಂಚಾಯತಿಗಳ ಕಾರ್ಯದರ್ಶಿಗಳನ್ನು ಮತ್ತು ಅಲ್ಲಿನ ಮುಖ್ಯಾಧಿಕಾರಿಗಳನ್ನು ಕರೆದು ನಾನು ಸಭೆ ಮಾಡಿದ್ದೇನೆ. ಎಲ್ಲರಿಂದಲೂ ಎಷ್ಟು ಹಣ ಬೇಕು ಎಂಬುದರ ಬಗ್ಗೆ ಒಂದು ಅಂದಾಜು ಪಟ್ಟಿಯನ್ನು ನನ್ನ ಕ್ಷೇತ್ರದಲ್ಲಿ ನಾವು ಸಿದ್ಧಪಡಿಸಿದ್ದೇವೆ. ಈ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಸುಮಾರು ಎರಡು ಕೋಟಿ ರೂಪಾಯಿ ಬೇಕಾಗುತ್ತದೆ. ಅಲ್ಲಿನ ಅಧಿಕಾರಿಗಳ ಜತೆಗೆ ಸಮಾಲೋಚನೆ ಮಾಡಿದಾಗ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥಾದ್ದು ಎರಡು ಕೋಟಿ ರೂ ಎಂದು ಅಂದಾಜು ಮಾಡಿದ್ದು ಎರಡು ಕೋಟಿ ರೂಪಾಯಿಗಳನ್ನು ತಾವು ಮಂಜೂರು ಮಾಡಲಿಕ್ಕೆ ಸರ್ಕಾರಕ್ಕೆ ತಾವು ನಿರ್ದೇಶನ ಕೊಡಬೇಕು. ಕೂಡಲೇ ಈ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ತಾವು ನಮಗೆ ಬೆಂಗಾವಲಾಗಿ ನಿಲ್ಲಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಬಡತನ ಜಿಲ್ಲೆಯಿಂದ ಬಂದಿರತಕ್ಕದ್ದು. ಗುಲ್ಬರ್ಗಾ ಜಿಲ್ಲೆಯೆಂದರೆ ಒಂದು ಕಾಲದಲ್ಲಿ ಎಲ್ಲರೂ ಕೂಡ ಗುಲ್ಬರ್ಗಾ ಖಾಲಿ ಮಾಡಿ ಬೆಂಗಳೂರಿಗೆ ಬರುತ್ತಿದ್ದರು. ದಾವಣಗೆರೆಗೆ ಬರುತ್ತಿದ್ದರು. ನಮ್ಮ ಕಡೆಗೆಲ್ಲಾ ಬರುತ್ತಿದ್ದರು. ಆದರೆ ಇವತ್ತು ಮಾನು ಖರ್ಗೆ, ಧರ್ಮಸಿಂಗ್ ಅವರ ನೇತೃತ್ವದಲ್ಲಿ ಹಾಗೂ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಆ ಭಾಗದಲ್ಲಿ ಭೀಮಾ ನದಿ ಮತ್ತು ಇನ್ನು ಉಳಿದ ನದಿಗಳನ್ನು ಹಾಯಿಸಿಕೊಂಡು ಗುಲ್ಬರ್ಗಾದಲ್ಲಿ ಹೆಚ್ಚು ನೀರನ್ನು ಕೊಡುವುದರ ಮೂಲಕ ಅವರ ಗಟ್ಟಿ ನಾಯಕತ್ವವನ್ನು ಉಳಿಸಿಕೊಂಡು ಅಲ್ಲಿ ಇವತ್ತು ಬೆಳೆಯುತ್ತಿದ್ದಾರೆ. ನಾವೂ ಕೂಡ ಬೆಳೆಯತಕ್ಕಂಥ ರಾಜಕಾರಣಿಗಳು. ನಮ್ಮಲ್ಲಿ ನೀರಾವರಿ ಇಲ್ಲ ಮತ್ತು ಯಾವ ಕೆರೆಯಲ್ಲೂ ಕೂಡ ನೀರು ತರಲಿಕ್ಕೆ ಆಗುವುದಿಲ್ಲ. ಅಪ್ಪರ್ ಭದ್ರಾ ತರಬೇಕೆಂದು ಕೂಗಾಡಿದ್ದೇವೆ.....

**ಅಧ್ಯಕ್ಷರು** : ಆಯಿತು. ಬೇಗ ಮುಗಿಸಿ. ಬಹಳ ಜನ ಕಾಯುತ್ತಿದ್ದಾರೆ.

**ಶ್ರೀ ಎಚ್. ಅಂಜನೇಯ** : ನಮ್ಮ ವಿರೋಧಪಕ್ಷದ ನಾಯಕರು ಮತ್ತು ನಮ್ಮ ನಾಯಕರು ಕೊಟ್ಟಂಥ ಸಲಹೆಯನ್ನು ಸರ್ಕಾರ ಗಂಭೀರವಾಗಿ ಮತ್ತು ಸೌಜನ್ಯದಿಂದ ಗೌರವಿಸಿ ಈ ನೀರಿನ ವಿಚಾರದಲ್ಲಿ ಸ್ಪಂದಿಸಬೇಕು ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಸಮರೋಪಾದಿಯಲ್ಲಿ ಬಗೆಹರಿಸತಕ್ಕಂಥ ಒಂದು ಸಂಕಲ್ಪವನ್ನು ಸರ್ಕಾರದವರು ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಆಗ್ರಹಿಸಿ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು** : ಈಗ ಮಾನ್ಯ ಮಹದೇವರವರು. ನೀವು ಐದು ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ಮಹದೇವ್(ಕೃಷ್ಣರಾಜನಗರ)** : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಗಂಭೀರವಾದ ವಿಚಾರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ, ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಒಂದು ದೊಡ್ಡ ಸಮಸ್ಯೆ ಮತ್ತು ಇವತ್ತು ಈ ಸದನದ ಎಲ್ಲಾ ಸದಸ್ಯರನ್ನು ಕೂಡ ಕಾಡುತ್ತಿರುವಂಥಾದ್ದು

ಒಂದೇ ಸಮಸ್ಯೆ. ಒಬ್ಬ ಶಾಸಕರ ಜವಾಬ್ದಾರಿ ಏನು? ಇದರ ಜೊತೆಗೆ ಹೊಸದಾಗಿ ಬಂದಿರತಕ್ಕಂಥ ಡಿಸೆಂಟ್ರಲೈಸೇಶನ್ ಕಾನ್ಸೆಪ್ಟ್‌ನಲ್ಲಿ ನಾವು ಎಲ್ಲಿ ನಿಲ್ಲುತ್ತಾ ಇದ್ದೇವೆ ಎನ್ನುವಂಥಾದ್ದು. ಇದರಲ್ಲಿ ನಮ್ಮ ಜವಾಬ್ದಾರಿ ಏನು ಎನ್ನುವುದು ಒಂದು ಕಡೆಗೆ ಇದ್ದರೆ ಇನ್ನೊಂದು ಕಡೆಗೆ ಡಿಸೆಂಟ್ರಲೈಸೇಶನ್‌ನಲ್ಲಿ ನಾವೆಲ್ಲರೂ ಕೂಡ ನಂಬಿಕೆಯನ್ನು ಇಟ್ಟುಕೊಂಡಿರತಕ್ಕವರು. ನಾವು ಯಾರೂ ಕೂಡ ಡಿಸೆಂಟ್ರಲೈಸೇಶನ್‌ಗೆ ವಿರೋಧಿಗಳು ಅಲ್ಲ. ಈ ರಾಷ್ಟ್ರದಲ್ಲಿ ಹಲವಾರು ಬಾರಿ ಹಲವಾರು ಹಂತದಲ್ಲಿ ಡೆವಲಪ್‌ಮೆಂಟ್ ಅವಕಾಶದ ಬಗ್ಗೆ ಪ್ರಯತ್ನ ಮಾಡಿದ್ದೇವೆ. ಡೆಲ್ಲಿಯಲ್ಲಿ ಒಂದು ಬಾರಿ ಕುಳಿತು ಅಭಿವೃದ್ಧಿ ದಿಕ್ಕಿನಲ್ಲಿ ಹೊರಟಾಗ ಅದು ಯಶಸ್ವಿಯಾಗಲಿಲ್ಲ. ಹಾಗಾಗಿ ಅವರು ಮತ್ತೆ ರಾಜ್ಯಮಟ್ಟದಲ್ಲಿ ಬೆಂಗಳೂರಿನಲ್ಲಿ ಕುಳಿತು ಪ್ಲಾನಿಂಗ್ ಪ್ರೋಸಸ್ ಪ್ರಯತ್ನ ಮಾಡಿದ್ದಾರೆ. ಆದರೆ ಅಲ್ಲಿ ಕೂಡ ಫೇಲ್ ಆಗಿದ್ದಾರೆ. ಜಿಲ್ಲಾಮಟ್ಟದಲ್ಲಿ ಕೂಡ ಹೋಗಿ ಡಿಸ್ಟ್ರಿಕ್ಟ್ ಅಡಿನಿಸ್ಟ್ರೇಶನ್ ಕಡೆಯಿಂದ ಅಡ್ಮಿನಿಸ್ಟ್ರೇಶನ್ ಡೆವಲಪ್‌ಮೆಂಟ್‌ನ ಪ್ರಕ್ರಿಯೆ ಫ್ರಾರಂಭ ಮಾಡಿ ನೋಡಿದ್ದಾರೆ ಮತ್ತು ಅದರಲ್ಲಿ ವಿಫಲರಾಗಿದ್ದಾರೆ. ಕೊನೆಗೆ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬಂದು ಯಾವುದು ಇದ್ದರೂ ಕೂಡ ಸಮುದಾಯ ಎಂದರೆ ಎನ್ನುವ ಒಂದು ತೀರ್ಮಾನಕ್ಕೆ ಏನು ಅಧಿಕಾರಿಗಳು ಮತ್ತು ತಂತ್ರಜ್ಞರು ಬಂದಿದ್ದಾರೆ, ಅದರ ಬಗ್ಗೆ ನಮಗೆಲ್ಲರಿಗೂ ಗಮನ ಮತ್ತು ಗೌರವ ಇದೆ. ಆದರ ಇವತ್ತು ಸಮುದಾಯ ಎಷ್ಟರಮಟ್ಟಿಗೆ ಈ ಒಂದು ಜವಾಬ್ದಾರಿಯನ್ನು ನಾವು ಕೊಟ್ಟಾಗ ಅವರು ನಿಭಾಯಿಸುವುದಕ್ಕೆ ಸಮರ್ಥರಿದ್ದಾರೆ ಎನ್ನುವುದನ್ನೂ ಕೂಡ ನಾವು ಚರ್ಚೆ ಮಾಡಬೇಕಾಗುತ್ತದೆ. ನಾವು ಇಲ್ಲಿರತಕ್ಕಂಥ ಶಾಸಕರೆಲ್ಲರೂ ಕೂಡ ಆ ಸಮುದಾಯ ಕೊಟ್ಟಂಥ ಜವಾಬ್ದಾರಿಯನ್ನು ಅತಿ ಸಮರ್ಪಕವಾಗಿ ಯಾವ ಹಣವನ್ನೂ ಪೋಲು ಮಾಡದೇನೇ ಆ ಒಂದು ಅಭಿವೃದ್ಧಿ ಹಣವನ್ನು ಉಪಯೋಗಿಸಿಕೊಳ್ಳುತ್ತದೆ ಎಂದರೆ they have finally come to a conclusion. They are the best keepers of public interest, public money. ನಾವೆಲ್ಲರೂ ಧಾರಾಳವಾಗಿ ಆ ಜವಾಬ್ದಾರಿಯನ್ನು ಸಮುದಾಯದ ಪಂಚಾಯತಿ ವ್ಯಾಪ್ತಿಗೆ ಕೊಡುವುದಕ್ಕೆ ಸಿದ್ಧರಿದ್ದೇವೆ. ಆದರೆ ಇವತ್ತು ನಮ್ಮ ಪ್ರಾಕ್ಟಿಕಲ್ ಅನುಭವ ಏನಿದೆ ಎಂದರೆ ಇವತ್ತು ಇದನ್ನು ಎಲ್ಲಾ ಶಾಸಕರುಗಳು ಕೂಡ ಒಪ್ಪಿಕೊಳ್ಳುತ್ತಾರೆ. ಇವತ್ತು ಬೋರ್‌ವೆಲ್ ರಿಪೇರಿ ಇರಬಹುದು. ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಅತಿ ದೊಡ್ಡ ಸಮಸ್ಯೆ ಎಂದರೆ ನೀರಾವರಿಯದ್ದು. ಈಗ ಎಲ್ಲಾ ಹಳ್ಳಿಗಳಲ್ಲಿಗಳಲ್ಲೂ ಕೂಡ ನಮ್ಮಲ್ಲಿ ವಾಟರ್‌ಸಪ್ಲೈಯನ್ನು ಕೊಟ್ಟಿದ್ದೇವೆ. ಆದರೆ ಪ್ರತಿ ವರ್ಷ ಕೂಡ ಎಷ್ಟು ಸಾರಿ ಮೋಟಾರ್ ರಿಪೇರಿಯಾಗುತ್ತದೆ ಎನ್ನುವುದನ್ನು ದಯಮಾಡಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಹೇಳಬೇಕಾಗುತ್ತದೆ. ಪ್ರತಿ ಹಳ್ಳಿಯಲ್ಲೂ ಕೂಡ ಯಾವುದಾದರೂ ಒಂದು ರೀತಿಯಲ್ಲಿ ಹಣ ದುರುಪಯೋಗಕ್ಕೆ ಅವಕಾಶವಾಗುತ್ತಿದೆ. ಈ ಮೋಟಾರ್ ರಿಪೇರಿ ಮತ್ತು ಮೋಟಾರ್ ಕೆಡಿಸುವುದು ಇಂತಹ ಚಿಕ್ಕಪುಟ್ಟ ಹಲವಾರು ರೀತಿಯಲ್ಲಿ ದುರುಪಯೋಗ ಮಾಡಿಕೊಳ್ಳುವುದಕ್ಕೆ ಹಲವಾರು ಕಾರ್ಯಕ್ರಮಗಳನ್ನು ಪಂಚಾಯತ್ ವ್ಯವಸ್ಥೆಯಲ್ಲಿ ಮಾಡುತ್ತಾರೆ. ಎರಡನೆಯದು, ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಾಸಕರುಗಳು ಮೊದಲಿನಿಂದಲೂ ಕೂಡ, ಅದು ಆಶ್ರಯ ಮನೆಗಳು ಇರಬಹುದು ಅಥವಾ ಕೊಳವೆ ಬಾವಿ ವ್ಯವಸ್ಥೆ ಇರಬಹುದು, ಎಲ್ಲವನ್ನೂ ಕೂಡ ನಾವೇ ನೋಡುತ್ತಾ ಬಂದಿದ್ದೇವೆ. ಆದರೆ, ಈ ಡೀ-ಸೆಂಟ್ರಲೈಸೇಷನ್ ವ್ಯವಸ್ಥೆಯಲ್ಲಿ, ನಮ್ಮ ಸ್ನೇಹಿತರಾದಂಥ ಮಾನ್ಯ ಸುಧಾಕರ್‌ರವರು ಹೇಳಿದ ಹಾಗೆ ಶಾಸಕರು ಎಲ್ಲೆಲ್ಲಿರುತ್ತಿದ್ದಾರೆ, ಇದರ ಬಗ್ಗೆಯೂ ಕೂಡ ಚರ್ಚೆಯಾಗಬೇಕು. ಜೊತೆಗೆ, ಸಮುದಾಯಕ್ಕೆ ಕೊಟ್ಟಿರತಕ್ಕ ಜವಾಬ್ದಾರಿಯನ್ನು

ಆ ಪಂಚಾಯ್ತಿ ವ್ಯವಸ್ಥೆಯಲ್ಲಿ ನಿಭಾಯಿಸತಕ್ಕಂಥ ಸಾಮರ್ಥ್ಯ ಇದೆಯೇ ಎನ್ನುವುದನ್ನು ಕೂಡ ನಾವು ನೋಡಬೇಕಾಗುತ್ತದೆ. ಏಕೆಂದರೆ, ಒಂದೇ ಉದಾಹರಣೆ ಮೂರು ವರ್ಷಗಳ ಬರಗಾಲದ ನಂತರ, ಇವತ್ತು ಹಳ್ಳಿಗಳಲ್ಲಿ ಒಂದು ಸಮಸ್ಯೆ ಪ್ರಾರಂಭವಾಗಿದೆ. ಮೂರು ವರ್ಷಗಳ ಕಾಲ ಬೋರ್‌ವೆಲ್‌ನಲ್ಲಿ ಎಲ್ಲೂ ಕೂಡ ನೀರು ಇರಲಿಲ್ಲ. ಈಗ ನೀರು ಎಲ್ಲಾ ಕಡೆ ಬಂದಿದೆ. ಆದರೆ, ಎಲ್ಲಾ ಕಡೆ ಬದಿ ನೀರು ಹೊರಗಡೆ ಬರುತ್ತಾ ಇದೆ. ಎಲ್ಲೂ ಕೂಡ ಶಾಸಕರುಗಳಿಗೆ ಬೋರ್‌ವೆಲ್ ರಿಪೇರಿ ಮಾಡಿಸುವುದಕ್ಕೆ ಹಣ ಇಲ್ಲ. ಜಿಲ್ಲಾ ಪಂಚಾಯ್ತಿಯವರನು ಕೇಳಿದರೆ, ಇದು ನಮ್ಮ ಜವಾಬ್ದಾರಿ ಇಲ್ಲ, ಪಂಚಾಯ್ತಿಗೆ ಹೋಗಿದೆ ಎನ್ನುತ್ತಾರೆ. ಆದರೆ, ಪಂಚಾಯ್ತಿ ವ್ಯವಸ್ಥೆಯಲ್ಲಿ ಇವತ್ತಿನವರೆಗೆ ಹಣ ಬಿಡುಗಡೆಯಾಗಿಲ್ಲ. ಈ ಬೋರ್‌ವೆಲ್ ಪ್ಲೀನಿಂಗ್ ಮಾಡುವುದಕ್ಕೆ ಜೊತೆಗೆ ಪ್ರತಿ ಹಂತದಲ್ಲೂ ಹಳ್ಳಿಗಳಲ್ಲಿ ವಾಟರ್ ಸಪ್ಲೈಗೆ ಮತ್ತು ಲೈಟಿಗೆ ಒಂದೇ ಟಿ.ಸಿ.ಗೆ ಹೋಗುತ್ತಿವುದರಿಂದ, ಹಾಗೂ 3–4 ಗಂಟೆಗಳ ಕಾಲ ಮಾತ್ರ ವಿದ್ಯುತ್ ಸರಬರಾಜಾಗುತ್ತಿರುವುದರಿಂದ ನೀರೂ ಕೂಡ ನೇರವಾಗಿ ಸರಬರಾಜಾಗುತ್ತಾ ಇಲ್ಲ ಹಾಗಾಗಿ, ಪ್ರತಿ ಹಳ್ಳಿಗೂ ಕೂಡ ವಾಟರ್ ಸಪ್ಲೈಗೆ ಪ್ರತ್ಯೇಕ ಟಿ.ಸಿ. ಯನ್ನು ಅಳವಡಿಸಬೇಕು. ದೊಡ್ಡ ದೊಡ್ಡ ಗ್ರಾಮಗಳಲ್ಲಿ ಎಕ್ಸ್‌ಪ್ರೆಸ್ ಫೀಡರ್ ಲೈನ್ ಎಂದು ಏನು ಕೆ.ಇ.ಬಿ.ನಲ್ಲಿದೆ uninterrupted electric supply ಕೊಡತಕ್ಕ ಎಕ್ಸ್‌ಪ್ರೆಸ್ ಫೀಡರ್‌ಲೈನನ್ನು ಕಡ್ಡಾಯವಾಗಿ ಎಲ್ಲಾ ಹಳ್ಳಿಯ ಮೇಜರ್ ವಾಟರ್ ಸಪ್ಲೈಗೆ ಅಳವಡಿಸಬೇಕು. ಈ ಮಾತನ್ನು ತಮಗೆ ತಿಳಿಸುತ್ತಾ ತಾವುಗಳು ಈ ಸದನದಲ್ಲಿ ಗ್ರಾಮೀಣ ಹೌಸಿಂಗ್ ಮತ್ತು ವಾಟರ್ ಸಪ್ಲೈ ಬಗ್ಗೆ ಸಮಗ್ರವಾದಂಥ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಸಭಾಧ್ಯಕ್ಷರನ್ನು ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ಕೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಜಗದೀಶ್ ಮೆಟಗೂಡ್ (ಬೈಲಹೊಂಗಲ)** : ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ತಾಲ್ಲೂಕಿನಲ್ಲಿ ರಾಜೀವ್‌ಗಾಂಧಿ ಸಬ್‌ಮಿಷನ್‌ನಲ್ಲಿ 19 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಮಾಡಿದ್ದು, ಇನ್ನು ಸ್ವಲ್ಪ ದಿವಸದಲ್ಲಿ ಇದು ಚಾಲನೆಯಲ್ಲಿ ಬರುತ್ತಾ ಇದೆ. ಈಗಾಗಲೇ ಸರ್ಕಾರ ಈ ಯೋಜನೆಗೆ 12 ರಿಂದ 13 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಮಲಪ್ರಭಾ ನದಿಯಿಂದ ನೀರನ್ನು ಎತ್ತುವ ಮೂಲಕ ಈ 19 ಹಳ್ಳಿಗಳಿಗೆ ನೀರು ಸರಬರಾಜು ಮಾಡುತ್ತಾರೆ. ಆದರೆ, ಜನವರಿ ನಂತರ ಮಲಪ್ರಭಾ ನದಿಯಲ್ಲಿ ಜಾಕ್‌ವೆಲ್ ಹತ್ತಿರ, ನೀರು ಎತ್ತುವುದಕ್ಕೆ ನೀರೇ ಇರುವುದಿಲ್ಲ. ಆದಕಾರಣ, ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಈ ನಮ್ಮ 13 ಕೋಟಿ ರೂಪಾಯಿಗಳ ಯೋಜನೆ ಏನಿದೆ, ಅದು ಬೇಸಿಗೆಯಲ್ಲಿ ಉಪಯೋಗವೇ ಆಗುವುದಿಲ್ಲ. ಅದಕ್ಕೆ, ಅಲ್ಲಿ ಇನ್ನೂ 2 ರಿಂದ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆ ಮಲಪ್ರಭಾ ನದಿಗೆ ಒಂದು ಬ್ಯಾರೇಜನ್ನು ಮಾಡಿದಲ್ಲಿ ಮಾತ್ರ ನಾವು ಬೇಸಿಗೆ ಕಾಲದಲ್ಲಿ ಈ 19 ಹಳ್ಳಿಗಳಿಗೆ ನೀರು ಕೊಡಲಿಕ್ಕೆ ಸಾಧ್ಯವೆಂದು ಹೇಳುತ್ತಾ, ಈ ಕೆಲಸವನ್ನು ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಂಡು, ಬ್ಯಾರೇಜ್ ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಮಹಿಮಾ, ಜೆ ಪಟೇಲ್(ಚನ್ನಗಿರಿ)** : ಅಧ್ಯಕ್ಷರೆ, ಚನ್ನಗಿರಿ ಮಲೆನಾಡಿನ ಸೆರಗಿನಲ್ಲಿರುವ ಒಂದು ತಾಲ್ಲೂಕು. ಅಂತಹ ಮಲೆನಾಡಿನಲ್ಲಿ ಈಗಾಗಲೇ ಬರದ ಛಾಯೆ ಪ್ರಾರಂಭವಾಗಿದ್ದು, ಕುಡಿಯುವ ನೀರಿಗೆ ಎಷ್ಟು ಹಣ ಬೇಕಾಗುತ್ತದೆಂದು ಲೆಕ್ಕ ಹಾಕಿದಾಗ ಸುಮಾರು 2 ಕೋಟಿ 11 ಲಕ್ಷ ರೂ ದಷ್ಟು ಹಣ ಬೇಕಾಗುತ್ತದೆಂದು ಕಂಡುಬಂದಿದೆ. ನಾವೆಲ್ಲಾ ಬಹಳಷ್ಟು ಜನ,

ಷಾರ್ಟ್ ಸೈಟೆಡ್ ಆಗಿ ಈ ಸಮಸ್ಯೆ ಬಗ್ಗೆ ನೋಡುತ್ತಾ ಇದ್ದೇವೆ. ಕುಡಿಯುವ ನೀರು ಇಲ್ಲವೆಂದ ತಕ್ಷಣ ಕೊಳವೆ ಬಾವಿ ತೆಗೆಯಿರಿ ಎನ್ನುವುದು ನಮ್ಮ ತಕ್ಷಣದ ಪ್ರತಿಕ್ರಿಯೆ. ಆದರೆ, ನಾವು ಈ ಕೊಳವೆ ಬಾವಿ ತೆಗೆದು, ನೀರನ್ನು ಎಳೆದೂ ಅಂತರ್ಜಲ ಚನ್ನಗಿರಿಯಂಥ ತಾಲ್ಲೂಕಿನಲ್ಲಿ ಸುಮಾರು ಸಾವಿರದಡಿಯವರೆಗೂ ಹೋಗಿದೆ. ಇವತ್ತು ಸಾವಿರದಡಿಯ ಬಾವಿ ಕೊರೆದರೂ ಕೂಡ ಬರೀ ಧೂಳು ಬರುತ್ತಾ ಇದೆ. ಭೂಮಿಯ ಕೆಳಗಡೆ ಕೆಲವು ನದಿಗಳೇ ಹರಿಯುತ್ತಾ ಇರುತ್ತವೆ. ನದಿಯಂಥ ದೊಡ್ಡ ದೊಡ್ಡ ನೀರಿನ ಪ್ರವಾಹಗಳೇ ಹರಿಯುತ್ತಾ ಇರುತ್ತವೆ. ಅಲ್ಲಿಂದ ನಾವು ನೇರವಾಗಿ ನೀರನ್ನು ತೆಗೆದದ್ದೇ ಆದರೆ ಅಲ್ಲಿ ಒಂದು ವ್ಯಾಕ್ಯೂಮ್ ಕ್ರಿಯೇಟ್ ಆಗುತ್ತದೆ. ವ್ಯಾಕ್ಯೂಮ್ ಕ್ರಿಯೇಟ್ ಆಗಿ ಎಲ್ಲಿಯವರೆಗೆ ತಡೆದುಕೊಳ್ಳುವುದಕ್ಕೆ ಸಾಧ್ಯವೋ ಅಲ್ಲಿಯವರೆಗೆ ಇರುತ್ತದೆ. ಆಮೇಲೆ ಒಂದು ಹಂತ ಆದಮೇಲೆ ತಕ್ಷಣ ಭೂಮಿ ಕುಸಿಯುವುದಕ್ಕೆ ಶುರುವಾಗುತ್ತದೆ. ಇದು ವೈಜ್ಞಾನಿಕವಾಗಿ ನಾನು ಹೇಳುತ್ತಾ ಇರುವುದು. ಈ ಸುನಾಮಿಯಂಥ ದುರಂತಗಳು ಆಗುವುದಾದರೂ ಕೂಡ ಯಥೇಚ್ಛವಾಗಿ ಬೋರ್‌ವೆಲ್‌ಗಳನ್ನು ತೆಗೆಯುವುದರಿಂದ ಇಂತಹ ದುರಂತಗಳು ಆಗುತ್ತವೆಂದು ವಿಜ್ಞಾನಿಗಳು ಹೇಳುತ್ತಾರೆ. ನಾನು ಬಹಳ ಹಿಂದೆ ಅಂದರೆ, ನಮ್ಮ ತಂದೆಯವರು ಮುಖ್ಯಮಂತ್ರಿಗಳಾಗಿದ್ದಾಗ ಕೂಡ ನಾನು ಈ ಅಭಿಪ್ರಾಯವನ್ನು ಕೊಟ್ಟಿದೆ. ಬೋರ್‌ವೆಲ್‌ಗಳನ್ನು ಯಥೇಚ್ಛವಾಗಿ ತೆಗೆಯುವುದಕ್ಕಿಂತ, ನಾವು ವಾಟರ್ ಲಾಗಿಂಗ್, ನೀರನ್ನು ಸಂರಕ್ಷಣೆ ಮಾಡುವುದರ ಕಡೆ ಹೆಚ್ಚು ಗಮನ ಕೊಡಬೇಕು. ನಾವು ಕೆರೆಗಳನ್ನು ಅಭಿವೃದ್ಧಿ ಮಾಡುವುದರ ಕಡೆಗೆ, ಕೆರೆಯ ಹೂಳು ತೆಗೆಯುವುದರ ಕಡೆಗೆ ನಾವು ಗಮನ ಕೊಡಬೇಕೆಂದು ಹಿಂದೆ ಹೇಳಿದ್ದೆ. ಆದರೆ, ಈಗಾಗಲೇ ನಾನು ಹೇಳಿದ ಹಾಗೆ, ನಮಗೆ ಷಾರ್ಟ್ ಸೈಟೆಡ್‌ನ್ಸ್ ಆಗಿ ತಕ್ಷಣ ಕೊಳವೆ ಬಾವಿ ಕೊರೆಯದಂಥ ಪ್ರಕ್ರಿಯೆಯಲ್ಲಿ ನಾವು ನಿಜವಾಗಲೂ ವಿನಾಶದ ಕಡೆ ಹೋಗುತ್ತಾ ಇದ್ದೇವೆ. ನಾವೆಲ್ಲಾ ಸದಸ್ಯರೂ ಕೂಡ, ಇದರ ಬಗ್ಗೆ ಒಟ್ಟಾಗಿ ಆಲೋಚನೆ ಮಾಡಬೇಕಾಗಿದೆ. ಬರೀ ತಕ್ಷಣದ ಪರಿಹಾರ ನೋಡುವುದು ಅಲ್ಲ, ಮುಂದಿನ ದಿನಗಳಿಗೆ, ನಾವು ಯಾವ ರೀತಿಯ ಪರಿಹಾರ ಕಂಡುಹಿಡಿಯಬಹುದು ಎಂಬುದನ್ನು ನೋಡಬೇಕಾಗಿದೆ. ನಾನು ಶಾಸಕನ ಕೆಲಸ ಏನೆಂದುಕೊಂಡಿದ್ದೇನೆಂದರೆ, ನಿಜವಾಗಿಯೂ ಶಾಸನಗಳನ್ನು ಮಾಡುವುದು ಮಾತ್ರ ಶಾಸಕನ ಕೆಲಸ ಎಂದು ಅಂದುಕೊಂಡಿದ್ದೇನೆ. ಆದರೆ, ಈಗ ಎಂತಹ ಕೆಲಸಗಳು ಬರುತ್ತೆ ಎಂದರೆ, ಕುಡಿಯುವ ನೀರಿನದು ಹೋಗಲಿ. ನಮ್ಮ ಮಕ್ಕಳಿಗೆ ಮದುವೆ ಆಗಿಲ್ಲ, ಹೆಣ್ಣು ಮಕ್ಕಳಿಗೆ ಬಹಳ ದಿನ ಆಯಿತು. ಗಂಡು ಹುಡುಕಿ ಎನ್ನುವ ಕೆಲಸ ಕೂಡ ಬರುತ್ತೆ. ನಮ್ಮ ಮಾನ್ಯ ಅರಗ ಜ್ಞಾನೇಂದ್ರರವರು ಮಾತನಾಡುತ್ತಾ ಡೀ-ಸೆಂಟ್ರಲ್‌ಸೇಷನ್ ಬಗ್ಗೆ ಹೇಳಿದರು. ನಾನು ಅದನ್ನು ಒಪ್ಪುತ್ತೇನೆ. ಡೀ ಸೆಂಟ್ರಲ್‌ಸೇಷನ್ ಆಗಬೇಕು, ನಮ್ಮಲ್ಲಿರುವ ಸೆಕ್ರಟರಿಗಳೇನಿದ್ದಾರೆ, ಎಲ್ಲಾ ಮಹಾ ಕಳ್ಳರು ಅವರಿಗೆಲ್ಲಾ ತರಬೇತಿ ಕೊಟ್ಟು, ನಿಜವಾಗಿಯೂ ಜನರ ಪರವಾದ ಕೆಲಸ ಮಾಡುವಂತೆ ಮಾಡಬೇಕು ಆ ಮೂಲಕ ಜಿಲ್ಲಾಪಂಚಾಯ್ತಿ, ಗ್ರಾಮ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಗಳೇನಿವೆ ಇವುಗಳನ್ನು ನಾವು ಸಬಲೀಕರಣ ಮಾಡುವುದರ ಮೂಲಕ ಮಾತ್ರ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ, ಅದು ಬಿಟ್ಟು ಎಲ್ಲವೂ ಸೆಂಟ್ರಲೈಸ್ ಆಗುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಶಾಸಕರು ಬೇಕಾದರೆ ಆ ಕಮಿಟಿಯಲ್ಲಿ ಇರಬಹುದು. ನೀರಿನ ಸಮಸ್ಯೆ ಬಗೆಹರಿಸುವಂಥ ತಾಲ್ಲೂಕಿನ ಕಮಿಟಿಯಲ್ಲಿದ್ದು ಅದನ್ನು ಮಾಡಬಹುದು. ಆದರೆ, ಡೀ ಸೆಂಟ್ರಲೈಸೇಷನ್ನೇ ಇದಕ್ಕೆ ಒಂದು ಪರಿಹಾರ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕಳಕಪ್ಪ ಜಿ. ಬಂಡಿ(ರೋಣ)** : ಮಾನ್ಯ ಅಧ್ಯಕ್ಷರೆ, ಇವತ್ತಿನದಿನ ನಾವು ಶಾಸಕರಾಗಿ ಬಂದನಂತರ ಹಳ್ಳಿಗಳಲ್ಲಿ ಅಡ್ಡಾಡಿದರೆ, ಇವತ್ತು ನೀರು ಕೊಡುವುದಾಗಲೀ, ಮನೆಗಳನ್ನು ಕೊಡುವುದಾಗಲೀ ಇದು ಶಾಸಕರ ಕೆಲಸವೆಂದು ಜನ ತಿಳಿದುಕೊಂಡಿದ್ದಾರೆ. ಇವತ್ತು ಗ್ರಾಮ ಪಂಚಾಯ್ತಿ ಸದಸ್ಯರಿಗಾಗಲೀ, ಅಧ್ಯಕ್ಷರಿಗಾಗಲೀ, ಜಿಲ್ಲಾಪಂಚಾಯ್ತಿ ಸದಸ್ಯರಿಗಾಗಲೀ ಜನ ನೀರನ್ನು ಕೇಳುವುದಿಲ್ಲ, ಮನೆಯನ್ನೂ ಕೇಳುವುದಿಲ್ಲ. ಇವತ್ತು ಬೆಳಗಾದ ತಕ್ಷಣ ಶಾಸಕರ ಮನೆ ಮುಂದೆ ಜನ ಬಂದು, ಊರಲ್ಲಿ ನೀರಿಲ್ಲ, ಕರಂಟ್ ಇಲ್ಲವೆಂದು ಕೇಳುತ್ತಿದ್ದಾರೆ. ಆದರೆ, ದೊಡ್ಡ ದೊಡ್ಡ ರಾಜಕಾರಣಿಗಳು ವಿಕೇಂದ್ರೀಕರಣ ಎಂದು ಹೇಳುತ್ತಾರೆ. ಅದು ನಮ್ಮ ಬಾಯಲ್ಲಿ ರಾಜಕಾರಣ ಮಾಡುವುದಕ್ಕೆ ಮಾತ್ರ ವಿಕೇಂದ್ರೀಕರಣ ಎಂದು ಹೇಳುವುದು. ಇದೊಂದು ದುರಾದೃಷ್ಟಕರ ಬೆಳವಣಿಗೆ. ಆಗಲೇ ನಮ್ಮ ಹಿರಿಯರೂ ಹಾಗೂ ನಮ್ಮ ತಂದೆಯ ಸ್ನೇಹಿತರೂ ಆದಂಥ ಎಸ್.ಎಸ್. ಪಾಟೀಲರು ಮಧ್ಯದಲ್ಲಿ ನಿಂತು ಮಾತನಾಡಿದರು. ನಾನು ಮಾತನಾಡಿದರು. ನಾನು ಮೊನ್ನೆ ಪೇಪರಿನಲ್ಲಿ ಓದಿದೆ. ಮಾನ್ಯ ಎಸ್.ಎಸ್. ಪಾಟೀಲರ ಕ್ಷೇತ್ರದೊಳಗೆ ನೀರಿನ ಕೊರತೆ ಎಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ, ಕೊಡೆಗಳನ್ನು ಹಿಡಿದುಕೊಂಡು ಹೋಗುತ್ತಾ ಇದ್ದುದನ್ನು ಕೊಟ್ಟಿದ್ದರು. ಅದೇ ರೀತಿ ನಮ್ಮ ಹಿರಿಯರಾದ ಮಾನ್ಯ ಡಿ.ಆರ್. ಪಾಟೀಲ್ ಸಾಹೇಬರಿಗೂ ಕೂಡ ಹೇಳುತ್ತಾ ಇದ್ದೇನೆ. ಇವತ್ತು ತಮ್ಮ ಕ್ಷೇತ್ರದಲ್ಲೂ ಕೂಡ ನೀರಿನ ಸಮಸ್ಯೆ ಸಾಕಷ್ಟು ಇರುವುದು ಈ ರಾಜ್ಯದ ಜನತೆಗೆ ಗೊತ್ತಿರುವ ವಿಚಾರ. ಶಾಸಕರು ಮಾಡಲಾರದಂಥ ಕೆಲಸಗಳನ್ನು ವಿಕೇಂದ್ರೀಕರಣದಿಂದ ಒಂದು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಹೋದರೆ, ಈ ನೀರಿನ ಸಮಸ್ಯೆ ಬಗೆಹರಿಯುತ್ತದೆಯೇ ಎಂಬುದನ್ನು ವಿಚಾರ ಮಾಡುವಂಥ ಸಮಯವೆಂದು ನಾನು ಹೇಳುತ್ತಿದ್ದೇನೆ. ಇವತ್ತು ಹಳ್ಳಿಗಳಲ್ಲಿ, ಗ್ರಾಮ ಪಂಚಾಯ್ತಿ ಸದಸ್ಯರು ಯಾವ ಮಟ್ಟಕ್ಕೆ ಬಂದಿದ್ದಾರೆಂದರೆ, ನಾನು ಮೊನ್ನೆ ಜನಸಂಪರ್ಕ ಸಭೆಗೆ ಹೋದಾಗ, ಬೇರೆ ಪಕ್ಷದವರು ಅಲ್ಲಿ ಅಧ್ಯಕ್ಷರಿದ್ದರು. ಆ ಸೆಕ್ರಟರಿಗಳು ಹೇಳುತ್ತಾರಂತೆ, ಆ ಶಾಸಕ ಬಂದರೇನಾಯಿತು, ಅವನಿಗೆ ಇಲ್ಲಿ ಕುರ್ಚಿ ಹಾಕಬೇಡಿ. ಪೆಂಡಾಲ್ ಹಾಕಬೇಡಿ, ಮೈಕ್ ಹಚ್ಚಬೇಡಿ, ಎರಡು ಪ್ಲಾಸ್ಟಿಕ್ ಚೀಲ ಒಗೆಯಿರಿ, ಅಲ್ಲಿಯೇ ಕುಳಿತು ಹೋಗಲಿ ಎಂದು ಹೇಳುತ್ತಾರೆ. ಆ ಜನ ಸಂಪರ್ಕ ಸಭೆಯನ್ನೂ ಕೂಡ ಮಾಡಲಾರದಂಥ ವ್ಯವಸ್ಥೆಗೆ ಗ್ರಾಮ ಪಂಚಾಯ್ತಿ ಬಂದಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತು ಜಲನಿರ್ಮಲ ಯೋಜನೆ ಒಂದು ಒಳ್ಳೆಯ ಯೋಜನೆ. ಅದನ್ನು ಗ್ರಾಮ ಪಂಚಾಯತಿಗೆ ಕೊಟ್ಟ ಕಾರಣ ಸರಿಯಾಗಿ ಕೆಲಸಗಳು ಆಗುತ್ತಿಲ್ಲ. ಕೆಲವೊಂದು ಗ್ರಾಮ ಪಂಚಾಯತಿಯಲ್ಲಿ ನಾವು ಇದನ್ನು ಮಾಡಬೇಕು ಅದನ್ನು ಮಾಡಬೇಕೆಂದು ಹೇಳಿ ಆ ಕೆಲಸಗಳೇ ಆಗುತ್ತಿಲ್ಲ. ನನ್ನಲ್ಲಿ ಇಟಗಿ ಎನ್ನುವ ಒಂದು ಗ್ರಾಮ ಪಂಚಾಯತಿ ಇದೆ. ಎರಡು ತಿಂಗಳಾಯಿತು ಅಲ್ಲಿ ಗ್ರಾಮ ಪಂಚಾಯತಿ ಸೆಕ್ರೆಟರಿ ಗೈರು ಹಾಜರಿ ಇದ್ದಾನೆ. ಅಲ್ಲಿ ಕುಡಿಯುವ ನೀರು ಇಲ್ಲ. ಮೆಸ್ಕಾಂನವರು ವಿದ್ಯುತ್ ಕಟ್ ಮಾಡಿ ಹೋಗಿದ್ದಾರೆ. ನಾನು ಸಂಬಂಧಪಟ್ಟ ಅಧಿಕಾರಿಗಳ ಜರಿಗೆ ತೆಗೆದುಕೊಂಡು ಬಂದಿದ್ದೇನೆ ಆದರೂ ಇವತ್ತಿನವರೆಗೂ ಕೂಡ ಅವನ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇವತ್ತು ನನ್ನ ಕ್ಷೇತ್ರದಲ್ಲಿ 2–3 ಗ್ರಾಮ ಪಂಚಾಯತಿಗಳಿಗೆ ಸೇರಿ ಒಬ್ಬ ಸೆಕ್ರೆಟರಿ ಇದ್ದಾನೆ. ಇಂತಹ ಒಂದು ಸಮಯದಲ್ಲಿ ಗ್ರಾಮ ಪಂಚಾಯತಿ ಸದಸ್ಯರು ಹಳ್ಳಿಗಳಲ್ಲಿ 24 ಗಂಟೆಗಳೂ ರಾಜಕಾರಣ ಮಾಡುತ್ತಾರೆ. 24 ಗಂಟೆಗಳು ರಾಜಕಾರಣ ಮಾಡಿದರೆ ಹಳ್ಳಿಗಳು ಉದ್ದಾರವಾಗುತ್ತವೆಂದು ನಾವು ತಿಳಿದುಕೊಂಡಿದ್ದಾರೆ, ಇವತ್ತು ಸರ್ಕಾರ ತಿಳಿದುಕೊಂಡಿದ್ದಾರೆ ಅದೊಂದು ದೊಡ್ಡ ತಪ್ಪೆಂದು

ನಾನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ನನ್ನ ಎಲ್ಲಾ ಸ್ನೇಹಿತ ಶಾಸಕರಿಗೆ ಒಂದು ಅಭಿಪ್ರಾಯ ಏನೆಂದರೆ ಈ ಸಮಿಶ್ರ ಸರ್ಕಾರ ಎಲ್ಲಾ ಶಾಸಕರನ್ನು ಕಟ್ಟಿಗೆ ಕುದುರೆ ಮೇಲೆ ಕೂರಿಸುವಂತಹ ವ್ಯವಸ್ಥೆ ಮಾಡಿದೆ ಎಂದು ನಾನು ಹೇಳಬಯಸುತ್ತೇನೆ. ಈ ವಿಕೇಂದ್ರೀಕರಣ ಒಂದು ಹುಚ್ಚು ಕಲ್ಪನೆ ಎಂದು ನಾನು ಹೇಳುತ್ತಿದ್ದೇನೆ. ಇವತ್ತು ಶಾಸಕರನ್ನು ಪೂರ್ಣ ನಿಷ್ಕ್ರಿಯ ಮಾಡಿ ಮುಂದೆ ಬರುವಂತಹ ದಿನಗಳಲ್ಲಿ ನೀವೇನು ಗ್ರಾಮ ಪಂಚಾಯತಿಗಳಿಗೆ ವಿಕೇಂದ್ರೀಕರಣ ಕೊಟ್ಟು ಪೂರ್ಣ ಅಧಿಕಾರ ಕೊಟ್ಟಿದ್ದೇ ಆಯಿತು ಅಂದರೆ ಹಿಂದೆ ಮಂಡಲ್ ಪಂಚಾಯತ್‌ಗಳಿಗೆ ಅಧಿಕಾರ ಕೊಟ್ಟಾಗ ಯಾವ ರೀತಿ ಹಳ್ಳಿಗಳಲ್ಲಿ ಬಡಿದಾಟ ಹೊಡೆದಾಟ, ಮರ್ಡರ್‌ಗಳು ಆದವು ಮುಂಬರುವ ದಿನಗಳಲ್ಲಿ ಆ ರೀತಿಯ ಒಂದು ವ್ಯವಸ್ಥೆ ಖಂಡಿತವಾಗಿ ಬರುತ್ತದೆಂದು ನಾನು ಹೇಳುತ್ತಿದ್ದೇನೆ. ನೀವು ವಿಕೇಂದ್ರೀಕರಣ ಮಾಡುವುದೇ ಆದರೆ ಗ್ರಾಮ ಪಂಚಾಯತ್‌ಗೆ ಒಂದರಂತೆ ಪೊಲೀಸ್ ಸ್ಟೇಷನ್, ಒಂದು ಕೋರ್ಟ್ ಕೂಡ ಸ್ಥಾಪನೆ ಮಾಡಿ ನೀವು ವಿಕೇಂದ್ರೀಕರಣ ಮಾಡಬೇಕೆಂದು ಹೇಳಿ, ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ

**ಶ್ರೀ ಡಿ ಆರ್ ಪಾಟೀಲ್ (ಗದಗ್)** : ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ಪ್ರತಿ ಬೇಸಿಗೆ ಕಾಲದಲ್ಲಿ ಚರ್ಚೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಮಳೆ ನೀರನ್ನು ಇಂಗಿಸುವಂತಹ ವ್ಯವಸ್ಥೆ ಎಲ್ಲಿಯವರೆಗೂ ಮಾಡುವುದಿಲ್ಲ ಅಲ್ಲಿಯವರೆಗೆ ಇದು ಒಂದು ನಮ್ಮ ಪರಂಪರೆಯೇ ಎನ್ನುವಂತಹ ಒಂದು ಸ್ಥಿತಿ ನಿರ್ಮಾಣವಾಗಿದೆ. ಈಗ ತಾತ್ಕಾಲಿಕವಾಗಿ ಕುಡಿಯುವ ನೀರಿನ ವ್ಯವಸ್ಥೆಗೆ ಏನೇನು ಮಾಡಬೇಕೋ ಅದನ್ನು ಮಾಡಲಿಕ್ಕೆ ಅಡ್ಡಿ ಇಲ್ಲ. ಆದರೆ ದೂರದೃಷ್ಟಿಯಿಂದ ನೀರು ಹಿಡಿದು ಇಡುವ ಇಂಗಿಸುವ ಕೆಲಸ ಮಾಡಲಿಕ್ಕೆ ಹೆಚ್ಚು ಪ್ರಾಶ್ಯಸ್ತ ಕೊಟ್ಟು ನಾವು ಕೆಲಸ ಕೈಗೊಂಡರೆ ಮುಂದಿನ ಜನವರಿಯಲ್ಲಿ ಮತ್ತು ಫೆಬ್ರವರಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದು ಸ್ವಲ್ಪ ಕಡಿಮೆಯಾಗಬಹುದೋ ಏನೋ ಅಂತ ಹೇಳಿ ನನ್ನ ಅನಿಸಿಕೆ. ಇದರೊಳಗೆ ಮಳೆ ನೀರನ್ನು ತಡೆಗಟ್ಟುವ ಕೆಲಸದಲ್ಲಿ ನಾವು ಸಮುದಾಯವನ್ನು ಇನ್‌ವಾಲ್ವ್ ಮಾಡಬೇಕಾಗುತ್ತದೆ. ಇಲ್ಲಿಯವರೆಗೆ ಈಗ ಇದ್ದ ವ್ಯವಸ್ಥೆಯಲ್ಲಿ ನಾವೆಲ್ಲಾ ಈ ಸಮಸ್ಯೆಗಳನ್ನು ಪರಿಹಾರ ಕಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈಗಂತೂ ನಮಗೆ ಸಮಾಧಾನಕರವಾಗಿ ಈಗ ಇದ್ದ ವ್ಯವಸ್ಥೆಯಿಂದ ಪರಿಹಾರ ಸಿಕ್ಕಿಲ್ಲ ಎನ್ನುವುದು ನಮಗೆಲ್ಲಾ ಅನುಭವ. ಈಗಿರುವ ವ್ಯವಸ್ಥೆಯೊಳಗೆ ಸ್ವಲ್ಪ ಬದಲು ಮಾಡಿ ಅವರಿಗೆ ಜವಾಬ್ದಾರಿ ಕೊಟ್ಟು ನೋಡೋಣ ಅಂತ ಪ್ರಯೋಗ ನಡೆಯುತ್ತಿದೆ. ಇನ್ನೂ ಎರಡು ತಿಂಗಳು ಆಗಿಲ್ಲ ಅವರಿಗೆ ಇನ್ನೂ ಏನೂ ಹಸ್ತಾಂತರ ಮಾಡಿಲ್ಲ. ಆಗಲೇ ಏಕೆ ಮಾಡಿದಿರಿ? ಏನು ಮಾಡಿದಿರಿ ಅಂತ ಹೇಳಿ ಅವರ ಬಗ್ಗೆ ಟೀಕೆ ಟಿಪ್ಪಣಿಗಳು ಪ್ರಾರಂಭವಾಗುತ್ತಿವೆ. ದಯವಿಟ್ಟು ನಾವೆಲ್ಲರೂ ವಿಚಾರ ಮಾಡಬೇಕು, ಇದನ್ನು ನಾವೆಲ್ಲರೂ ಕೂಡಿ ಈ ಅಧಿಕಾರವನ್ನು ಕೊಡಲಿಕ್ಕೆ ಈ ಸದನದಲ್ಲಿ ತೀರ್ಮಾನ ಮಾಡಿದ್ದೇವೆ. ಅದು ಸುಮಾರು 12 ವರ್ಷಗಳ ಹಿಂದೆ ಇಲ್ಲಿಯವರೆಗೂ ಆ ಜವಾಬ್ದಾರಿಯನ್ನು ಅವರಿಗೆ ಕೊಟ್ಟಿಲ್ಲ. ಒಂದು ಅವಿಭಕ್ತ ಕುಟುಂಬದೊಳಗೆ ಅಣ್ಣ ತಮ್ಮಂದಿರು ಬೇರೆಯಾದ ಕೂಡಲೇ ಈ ಹಿರೆತನ ಮಾಡುವ ಅಣ್ಣ ತಮ್ಮನಿಗೆ ಏನಾದರೂ ಸಹಾಯ ಮಾಡಬೇಕು ಬೇರೆಯಾಗಿ ಹೋದವನಿಗೆ. ಅವನಿಗೆ ಏನೂ ಅನುಭವ ಇರುವುದಿಲ್ಲ ಅಂತ ಹೇಳಿ ಅವನು ಮಾಡಿದ್ದನ್ನು ನಾವು ನಗುತ್ತಾ ಕುಳಿತುಕೊಂಡರೆ ತಪ್ಪು ಮಾಡಿದಂತೆ ಆಗುತ್ತದೆ. ದಯವಿಟ್ಟು ಆ ಕೆಲಸ ನಾವು ಮಾಡುವುದು ಬೇಡ. ಅವರಿಗೆ ಏನು ಜವಾಬ್ದಾರಿ ಕೊಟ್ಟಿದ್ದೇವೆ ಆ ಜವಾಬ್ದಾರಿ ನಿಭಾಯಿಸುವುದಕ್ಕೆ ಅವರಿಗೆ ಬೇಕಾದ

ಮಾರ್ಗದರ್ಶನ ಕೊಡೋಣ. ಅವರಿಗೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡೋಣ. ಅವರಿಗೆ ಅವಕಾಶ ಕೊಟ್ಟು ನೋಡೋಣ. ಅವರು ಅವರ ಅವಕಾಶದೊಳಗೆ ಸರಿಯಾಗಿ ನಮ್ಮ ಮಟ್ಟಕ್ಕೆ ಬರಲಿಲ್ಲವೆಂದರೆ ಮುಂದೆ ಮರು ಚಿಂತನೆ ಮಾಡಲಿಕ್ಕೆ ಪರವಾಗಿಲ್ಲ. ಅವಕಾಶವೇ ಕೊಡದೆ ಅವರ ಬಗ್ಗೆ ಟೀಕೆ ಟಿಪ್ಪಣಿ ಮಾಡುತ್ತಾ ಹೋದೆವು ಅಂದರೆ ಬಹಳ ತಪ್ಪಾಗುತ್ತದೆ. ಮತ್ತು ನಾವೆಲ್ಲರೂ ಆ ಸಮೂಹದಿಂದ ಬೆಳೆದು ಬಂದವರೇ. ನಾವೇ ಶಾಸಕರು ಅಂದ ಕೂಡಲೇ ಮೇಲಿಂದ ಬೆಳೆದು ಬಂದಿದ್ದೇವೆ, ನಮಗೆಲ್ಲಾ ಭಾರಿ ಬುದ್ಧಿ ಇದೆ. ಭಾರಿ ಅನುಭವ ಇದೆ ಅಂತ ಏನೂ ಅಲ್ಲ. ನಮಗಿಂತ ಹೆಚ್ಚು ಅನುಭವ, ಬುದ್ಧಿ ಇದ್ದಂತಹ ಜನ ಗ್ರಾಮೀಣ ಪ್ರದೇಶದಲ್ಲಿ ಇದ್ದಾರೆ. ಗ್ರಾಮೀಣ ಸಮುದಾಯದಲ್ಲಿ ಇದ್ದಾರೆ. ಆ ಸಮುದಾಯವನ್ನು ಇನ್‌ವಾಲ್ವ್ ಮಾಡಬೇಕು ಎನ್ನುವವರು ನಾವು. ಈಗ ಏನು ವ್ಯವಸ್ಥೆ ಇದೆ ಇದರಲ್ಲಿ ಗ್ರಾಮ ಸಭೆಗಳನ್ನು ಸಬಲೀಕರಣ ಮಾಡುವುದು ನಾವು. ಗ್ರಾಮ ಪಂಚಾಯತಿಗಿಂತ ಹೆಚ್ಚು ಹಿಂದಕ್ಕೆ ನಮ್ಮ ಊರಿನಲ್ಲಿ ಕೆರೆ ಕಟ್ಟೆ ಏನಿದ್ದರೂ ಸಹ ಸಮುದಾಯವೇ ಮಾಡುತ್ತಿತ್ತು. ಆಗ ಊರು ದೈವವೇ ಮಾಡುತ್ತಿತ್ತು. ಈಗ ಬಂತು ಈ ವ್ಯವಸ್ಥೆ ಎಲ್ಲಾ ಬೋರ್‌ವೆಲ್ ಕೊರೆಯುವ ವ್ಯವಸ್ಥೆ ಯಾವಾಗ ಬಂದಿದ್ದು 60ನೇ ವರ್ಷದಿಂದ ಅದರ ಮೊದಲು ಊರಿನವರು ಯಾರೂ ನೀರು ಕುಡಿಯಲಿಲ್ಲವೇ? ಆಗ ವ್ಯವಸ್ಥೆ ಮಾಡಿಕೊಂಡಿದ್ದು ಇಲ್ಲವೇ ನಾವು? ಸರ್ಕಾರದ ಹಣ ಅಷ್ಟೇ ಅಲ್ಲ. ಆ ಸಮುದಾಯವೂ ಸಹಿತ ಹಣಕಾಸನ್ನು ಜೋಡಿಸಿ, ತಾವೂ ಪಾಲ್ಗೊಂಡು ಆ ಕೆಲಸ ಮಾಡುತ್ತಿತ್ತು. ಅದನ್ನೆಲ್ಲಾ ತಿರುಚಿಬಿಟ್ಟೆವು ನಾವು. ಎಲ್ಲವೂ ಸರ್ಕಾರವೇ ಮಾಡಬೇಕು ಎನ್ನುವಂತಹ ಒಂದು ವ್ಯವಸ್ಥೆಯನ್ನು ರೂಪಿಸಿ ನಮಗೆ ನೀಗಲಾರದಂತೆ ಆಗಿ ಈಗ ಕೈ ಎತ್ತಿ ನಿಲ್ಲುವಂತಹ ಪರಿಸ್ಥಿತಿ ಬಂದಿದೆ. ಮೊದಲಿದ್ದ ವ್ಯವಸ್ಥೆಗೆ ನಾವೆಲ್ಲರೂ ಹೋಗೋಣ. ಆಗುವುದಿಲ್ಲ ಎಂದು ಹೇಳಬೇಡಿ, ದಯವಿಟ್ಟು ಅವರಿಗೆ ಅವಕಾಶ ಕೊಡೋಣ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಆಗ ಜನಸಂಖ್ಯೆ ಎಷ್ಟು ಇತ್ತು? ಅಂಡರ್‌ಗ್ರೌಂಡ್ ವಾಟರ್ ಲೆವೆಲ್ ಎಷ್ಟು ಇತ್ತು? ರೈನ್ ಫಾಲ್ ಎಷ್ಟು ಇತ್ತು? ಸಮುದಾಯ ಅಂದರೆ ಒಂದು ಹಳ್ಳಿಯಲ್ಲಿ ಎಷ್ಟು ವಾಸ ಇತ್ತು, ಟ್ಯಾಂಕ್ ಇಷ್ಟು ಇತ್ತು? ಪರ್ ಹೆಡ್ ಸಂಕ್ಷನ್ ಎಷ್ಟು ಆಗುತ್ತಿತ್ತು ಎನ್ನುವುದರ ಬಗ್ಗೆಯೂ ಸಹ ಸ್ವಲ್ಪ ಬೆಳಕು ಚೆಲ್ಲಿ. ಆಗಿನ ವ್ಯವಸ್ಥೆಗೆ ಈಗ ಏಕೆ ಹೋಲಿಸುತ್ತೀರಿ? ಆಗ ಕೆರೆ ನೀರು ಕುಡಿಯುತ್ತಿದ್ದೆವು. ಡಯೇರಿಯಾ ಡಿಫ್ತೀರಿಯಾ ಬರುತ್ತದೆ ಅಂತಾನೇ ಬೋರ್‌ವೆಲ್ ಹಾಕಿಸಿದ್ದು ಮಾನ್ಯ ನಜೀರ್ ಸಾಬರು. ಆಗ ಕೆರೆಯ ನೀರು ಕುಡಿದರೆ ಆಸ್ಪತ್ರೆ ಹಣ ಖರ್ಚು ಮಾಡುವುದಕ್ಕೆ ಆಗುವುದಿಲ್ಲ ಅಂತಾನೇ ಇದನ್ನು ಮಾಡಿದ್ದು ಆಗ ಒಂದು ಸೀಜನ್ ಬಂದರೆ ಹಳ್ಳಿಗಳೆಲ್ಲ ಭೇದಿ ವಾಂತಿ ಯಾವಾಗಲೂ ಆಗುತ್ತಿತ್ತು. ಅದೆಲ್ಲಾ ನಿಲ್ಲಲಿ ಅಂತ ಹೇಳಿ ಈ ವ್ಯವಸ್ಥೆಗೆ ಬಂದಿದ್ದು.

**ಶ್ರೀ ಡಿ.ಆರ್. ಪಾಟೀಲ್** : ಅದೇ ಬರೀ ಬೋರ್‌ವೆಲ್ ಹಾಕಿಕೊಂಡು ಬಂದೆವಲ್ಲಾ ಅದರ ಅನುಭವವೇ ಈಗ. ನೀರು ತೆಗೆಯುತ್ತವಲ್ಲಾ ಅದಕ್ಕಿಂತ ಹೆಚ್ಚು ನೀರು ಇಂಗಿಸುವಂತಹ ಕೆಲಸ ಮಾಡಬೇಕಾಗಿತ್ತಲ್ಲಾ. ಅದನ್ನು ಮಾಡಲೇ ಇಲ್ಲ ನಾವು.

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ. ನೀರು ಇಂಗಿಸಬೇಕು ಎಲ್ಲಾ ಮಾಡಬೇಕು ಎನ್ನುವ ಬಗ್ಗೆ ಇಲ್ಲಿ ಯಾರದೂ ಡಿಸ್‌ಪ್ಯೂಟ್ ಇಲ್ಲ. ಆದರೆ 10 ವರ್ಷಗಳ ಹಿಂದೆ ಮಳೆ ಪ್ರಮಾಣ ಏನು? ಇವತ್ತಿನ ಮಳೆ ಪ್ರಮಾಣ ಏನು? ಅವತ್ತು ವಾಟರ್

ಕಂಜಮ್‌ಶನ್ ರೇಟು ಏನು? ಜನಸಂಖ್ಯೆ ಎಷ್ಟು? ಅವತ್ತು ನೀರು ಎಷ್ಟು ಬೇಕಾಗಿತ್ತು? ಇವತ್ತು ಎಷ್ಟು ಬೇಕಾಗಿದೆ? ಇವತ್ತಿನ ಕಂಜಮ್‌ಶನ್ ರೇಟ್ ಏನು? ಅವತ್ತಿನ ಎಕ್ಸ್‌ಪೆಂಡೇಚರ್ ಎಷ್ಟು? ಇವತ್ತಿನ ಎಕ್ಸ್‌ಪೆಂಡೇಚರ್ ಎಷ್ಟು? ಇದನ್ನೆಲ್ಲಾ ಲೆಕ್ಕ ಹಾಕಬೇಕಾಗುತ್ತದೆ. ಸುಮ್ಮ ಸುಮ್ಮನೇ ಹುಚ್ಚು ಹಿಡಿದು ಯಾರೂ ರಯೋಡಿ ಜೆನರೋ ನಲ್ಲಿ ನಡೆದಂಥ ಬೋರ್‌ವೆಲ್ ಹಾಕಿಸಲು ಹೋಗಲಿಲ್ಲ. ಮಳೆ ಪ್ರಮಾಣ ಪ್ರತಿ ವರ್ಷ ಕಡಿಮೆಯಾಗುತ್ತಿದೆ. ವಿಶ್ವ ಸಮ್ಮೇಳನದಲ್ಲಿ ಒಂದು ವರದಿ ಕೊಟ್ಟಿದ್ದಾರೆ ಓದಿ. ಇಡೀ ಜಗತ್ತಿನಲ್ಲಿ ಪ್ರತಿವರ್ಷ 15 ಪರ್ಸೆಂಟ್ ಮಳೆ ಕಡಿಮೆಯಾಗುತ್ತಿದೆ. Every year 15% rain is reducing in the whole words. ಆಗ ಆ ಪರಿಸ್ಥಿತಿಯನ್ನು ಮೀಟ್ ಮಾಡುವುದಕ್ಕೆ ಬೇಕಾದಂತಹ ವ್ಯವಸ್ಥೆಗಳು ಏನು? ಅದೆಲ್ಲಾ ಗೊತ್ತಿಲ್ಲದೆ ಹಿಂದಿನ ಪರಿಸ್ಥಿತಿ ಹೋಗೋಣ ಅಂದರೆ ಹೇಗೆ? ಹಾಗಾದರೆ ಒಂದು ಕೆಲಸ ಮಾಡೋಣ. ಹಿಂದೆ ಅಸೆಂಬ್ಲಿ ಇರಲಿಲ್ಲ. 1947ಕ್ಕೆ ಮೊದಲು. ಅಸೆಂಬ್ಲಿಯನ್ನು ರದ್ದು ಮಾಡಿ ಹಿಂದಿನದಕ್ಕೆ ಹೋಗೋಣ. ಈಗ ಏಕೆ ಬೇಕು ಅಸೆಂಬ್ಲಿ? ಹಿಂದಿನ ಪರಿಸ್ಥಿತಿಗೆ ಹೋಗೋಣ ಹಾಗಾದರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಕೋರ್ಟ್‌ಗಳು ಬೇಡ. ಎರಡೂ "ನೇಚರ್ ಆಫ್ ಲಾ" ಅಲ್ಲಿಯೇ ಎಕ್ಸಿಕ್ಯೂಟೀವ್ ಆಗಲಿ.

**ಶ್ರೀ ಡಿ ಆರ್ ಪಾಟೀಲ್** : ನಾವು ಕೋರ್ಟ್ ಇರಬಾರದು ಎನ್ನುವವರೇ? ಆ ಗ್ರಾಮ ಪಂಚಾಯಿತಿಯಲ್ಲಿಯೇ ನ್ಯಾಯತೀರ್ಮಾನವಾಗಬೇಕು ಎನುವವರು ನಾವು

**ಶ್ರೀ ಜೆ.ಸಿ. ಮಾಧುಸ್ವಾಮಿ** : ಗೌಡಿಕೆ ಮಾಡುವವರಿಗೆ ಅದು ಸರಿ. ನಮ್ಮಂತಹವರ ಗತಿ ಏನು? ನಾವು ಗೌಡರಲ್ಲಿಗೆ ನಡೆಸಿಕೊಂಡು ಬರುತ್ತೇವೆ. ನಾವೇನು ಮಾಡುವುದು? ನಾವು ಬೇರೆ ಗೌಡರ ಕಡೆ ಕುಳಿತುಕೊಂಡು ಬಂದಿರುವವರು ಸ್ವಾಮಿ.

**ಎಸ್. ಶ್ರೀರಾಜೇಂದ್ರನ್** : ಜೀನ್ಸ್ ಪ್ಯಾಂಟ್‌ಗಳು ಬಂದಿವೆ ನಾಲ್ಕು ಸಲ ಅದನ್ನು ವಾಷ್ ಮಾಡಬೇಕು. ಆವತ್ತು ಜೀನ್ಸ್ ಪ್ಯಾಂಟ್ ಇತ್ತಾ?

(ಶ್ರೀ ಎ.ಟಿ. ರಾಮಸ್ವಾಮಿಯವರು ಅಧ್ಯಕ್ಷ ಪೀಠ ಅಲಂಕರಿಸಿದರು)

**ಚೇರ್ಮನ್** : ಮಾನ್ಯ ಡಿ ಆರ್ ಪಾಟೀಲರೇ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾತನಾಡಿ. ಅಧಿಕಾರ ವಿಕೇಂದ್ರೀಕರಣದ ವಿಷಯ ಬಂದಾಗ ಮಾತನಾಡಿ. ಈಗ ಕುಡಿಯುವ ನೀರಿನ ಸಮಸ್ಯೆಗೆ ಸೀಮಿತವಾಗಿ ಮಾತನಾಡಿ.

**ಶ್ರೀ ಡಿ.ಆರ್. ಪಾಟೀಲ್** : ಈ ಸಮಸ್ಯೆ ಬಗೆಹರಿಯಬೇಕು ಅಂದರೆ ವ್ಯವಸ್ಥೆಯೊಳಗೆ ಈ ಬದಲಾವಣೆ ಬರಲೇಬೇಕು. ವ್ಯವಸ್ಥೆಯಲ್ಲಿ ಬದಲಾವಣೆ ತರದೇ ನಾವು ಈ ಸಮಸ್ಯೆಯನ್ನು ಬಗೆಹರಿಸುತ್ತೇವೆಂದರೆ ಪ್ರತಿ ವರ್ಷ ಜನವರಿ ಮತ್ತು ಫೆಬ್ರವರಿಯಲ್ಲಿ ಈ ಸಮಸ್ಯೆ ಇದ್ದೇ ಇರುತ್ತದೆ. ನಾವು ಚರ್ಚೆ ಮಾಡುತ್ತಲೇ ಇರುತ್ತೇವೆ. 50 ವರ್ಷಗಳಿಂದ ಅವರಿಗೆ ಅಧಿಕಾರ ಕೊಟ್ಟಿಲ್ಲ. ಗ್ರಾಮಪಂಚಾಯತಿಗೆ ಏನೂ ಅಧಿಕಾರ ಕೊಟ್ಟಿಲ್ಲ.

**ಶ್ರೀ ವಾಟಾಳ್ ನಾಗರಾಜ್** : ಮಾನ್ಯ ಪಾಟೀಲರೇ, ತತ್ವ ಆಮೇಲೆ ಹೇಳೋಣ. ಈಗ ಕುಡಿಯುವ ನೀರು ಹೇಗೆ ಮಾಡುವುದು? ತಕ್ಷಣ ನಮಗೆ ಕುಡಿಯುವ ನೀರು ಬೇಕು. ಈಗ ನಾಳೆ ಬೆಳಿಗ್ಗೆ ನಾವು ನಮ್ಮ ಕ್ಷೇತ್ರಕ್ಕೆ ಹೋದರೆ ನೀರು ಕೇಳುತ್ತಾರೆ. ಅದು ಹೇಗೆ ಸ್ವಲ್ಪ ಸೂತ್ರ ಹೇಳಿ ಸ್ವಾಮಿ. ಮಿಕ್ಕಿದ್ದೆಲ್ಲಾ ತತ್ವ ಆಮೇಲೆ ಮಾತನಾಡೋಣ.

**ಶ್ರೀ ಜೆ ಸಿ ಮಾಧುಸ್ವಾಮಿ** : ಜೊತೆಗೆ 2010ಕ್ಕೆ ಅಮೆರಿಕಾ ದೇಶಕ್ಕೂ ಸಹ ಕುಡಿಯುವ ನೀರಿಗೆ ತೊಂದರೆ ಇದೆ ಅಂತ ವರದಿಗಳು ಇವೆ. ಸಮುದ್ರದಲ್ಲಿ ನೀರಿನ ಮಟ್ಟ ರೈಜ್ ಆದರೂ ಕೂಡ ಸಿಹಿ ನೀರಿನ ಮಟ್ಟ ಅಗಾಧವಾಗಿ ಕೆಳಗೆ ಹೋಗುತ್ತದೆ ಅಂತ ಒಂದು ಸೈಂಟಿಫಿಕ್ ರಿಪೋರ್ಟ್ ಇದೆ. ಆ ದಿಕ್ಕಿನಲ್ಲಿ ಸರ್ಕಾರ ಏನು ಯೋಚನೆ ಮಾಡುತ್ತದೆ ಅಂತ ಹೇಳಬೇಕು. According to scientific report, we are going to that era including America, we will face the water problem.

**ಡಾ : ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)** : ಮಾನ್ಯ ಅಧ್ಯಕ್ಷರೆ, ಪ್ರಪಂಚದಲ್ಲಿ 97 ಭಾಗ ನೀರು ಸಮುದ್ರದಲ್ಲಿದೆ, 2.5 ಪರ್ಸೆಂಟ್ ಹಿಮದರೂಪದಲ್ಲಿದೆ, 0.5 ಪರ್ಸೆಂಟ್ ನಮಗೆ ಲಭ್ಯವಾಗುವ ನೀರು ಮಳೆಯ ಆಶ್ರಯದಿಂದಲೇ ಬರುವಂಥದ್ದು. 2.5 ಪರ್ಸೆಂಟ್ ಹಿಮದರೂಪದಲ್ಲಿರುವ ನೀರನ್ನೇ ಮನುಷ್ಯ ಬಳಸಿಕೊಳ್ಳಬೇಕಾಗುತ್ತದೆ. ನಾಗರೀಕತೆ ಹುಟ್ಟಿದ್ದು ಕೂಡ ಸಿಂಧೂ ಸಹ ಕಣಿವೆಯ ಮುಖಾಂತರವೇ induscriminate exploitation of ground water is the main cause for all this problem in the nation. ವಿಶ್ವಸಂಸ್ಥೆಯವರೂ ಕೂಡ ಸರ್ವೆ ಮಾಡಿ, 2025 ಹೊತ್ತಿಗೆ ಭಾರತದಲ್ಲಿ ಕುಡಿಯುವ ನೀರಿನ ತೀವ್ರ ತೊಂದರೆಯಾಗುತ್ತದೆಂದು ಹೇಳಲಾಗಿದೆ. ಸೈಂಟಿಫಿಕ್ ಅಪ್ರೋಚ್ ಮಾಡಬೇಕು, ನಮ್ಮ ಮೂಲ ಯಾವುದಿದೆ ಎಂಬುದನ್ನು ತಿಳಿದುಕೊಳ್ಳಬೇಕು, ಆ ಮೂಲದ ಮುಖಾಂತರ ಹಾರ್ವೆಸ್ಟ್ ಮಾಡಿ ನಮ್ಮ ಅಂತರ್ಜಲದ ಮಟ್ಟ ಹೆಚ್ಚಿಸಿಕೊಳ್ಳುವುದು ಹೇಗೆ ಎನ್ನುತಕ್ಕಂಥದ್ದು, ಈಗ ಮಾನ್ಯ ಶಾಸಕರೆಲ್ಲರದ್ದೂ ಕುಡಿಯುವ ನೀರವ ಸಮಸ್ಯೆ ಇದೆ. ಕಳೆದ ಮೂರು ವರ್ಷಗಳಿಂದ ಬರಗಾಲವಿತ್ತು.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ತಾವೇನು ಉತ್ತರ ಕೊಡುತ್ತಿದ್ದೀರಾ? ಉತ್ತರ ಕೊಡುತ್ತಿದ್ದಾರೆ ನಾವು ಕೇಳುವುದಕ್ಕೆ ತಯಾರಿದ್ದೇವೆ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಮಧ್ಯಪ್ರದೇಶ ಮಾಡಿ ಮಾತನಾಡುವ ಅವಶ್ಯಕತೆ ಇಲ್ಲ, ಉತ್ತರ ಕೊಟ್ಟರೆ ಕೇಳುವುದಕ್ಕೆ ತಯಾರಿದ್ದೇವೆ, ನೀವು ಮಂತ್ರಿಗಳು ನೀವು ಸರ್ಕಾರ, ನಾವು ಸದಸ್ಯರು ಇಂಟರ್‌ವಿನ್ ಆಗುವುದು ಬೇರೆ ಮಂತ್ರಿಗಳು ಇಂಟರ್‌ವಿನ್ ಆಗುವುದು ಬೇರೆ, ನಮಗೂ ಅಂಕಿಅಂಶಗಳು ಗೊತ್ತಿದೆ, ಅಂಡರ್‌ಗ್ರೌಂಡ್ ವಾಟರ್ ಓವರ್ ಎಕ್ಸ್‌ಪ್ಲ್ಯಾಟೇಶನ್ ಆಗುವುದಕ್ಕೆ ನಾವು ಕಾರಣರಲ್ಲ, ಅದನ್ನೆಲ್ಲಾ ನಾವು ಹೇಳುತ್ತೇವೆ.

**ಶ್ರೀ ಹೆಚ್.ಸಿ. ಮಹದೇವಪ್ಪ** : ಮನುಷ್ಯರೇ ಕಾರಣರಲ್ಲವೇ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅಂಡರ್‌ಗ್ರೌಂಡ್ ವಾಟರ್ ಕತೆ ನಮಗೆ ಗೊತ್ತಿಲ್ಲವೇ? ನೀವು ಹೇಳಬೇಕೆ? 97 ಪರ್ಸೆಂಟ್, 2 ಪರ್ಸೆಂಟ್ ನಮಗೂ ಗೊತ್ತಿದೆ, ಅದನ್ನು ನೀವು ಹೇಳುವ ಅವಶ್ಯಕತೆ ಇಲ್ಲ.

**ಶ್ರೀ ಎಸ್. ರಾಜೇಂದ್ರನ್** : ಅದರ ಜೊತೆಗೆ ಇನ್ನೊಂದನ್ನು ಹೇಳಬೇಕು, ತ್ರಿಟೈಮ್ಸ್ ವಾಟರ್ ಒಂದು ಟೈಮ್ ಲ್ಯಾಂಡ್, ಹೊಸದಾಗಿ ಹೇಳುವ ರೀತಿ ಮೂರು ಭಾಗ ನೀರು ಒಂದು ಭಾಗ ಜಮೀನು.

**ಶ್ರೀ ಡಿ.ಆರ್. ಪಾಟೀಲ್** : ಅಧ್ಯಕ್ಷರೆ, ರನ್ ಆಫ್ ವಾಟರ್ ನಮ್ಮ ದೇಶದಲ್ಲಿರುವಷ್ಟು ಬೇರೆ ಎಲ್ಲೂ ಇಲ್ಲ, ಆದರೆ ಅದನ್ನು ಹಾರ್ವೆಸ್ಟಿಂಗ್ ಮಾಡುವಲ್ಲಿ ನಮ್ಮ ಪ್ರಯತ್ನ ಅಷ್ಟು ಸಫಲವಾಗಿಲ್ಲ. ದಯವಿಟ್ಟು ನಮ್ಮ ಕೃಷಿ ಸಚಿವರು, ಆರ್‌ಡಿಪಿಆರ್ ಸಚಿವರು, ಮಾನ್ಯ ಸತ್ಯನಾರಾಯಣರವರು,

ಮೈನರ್ ಇರಿಗೇಷನ್ ಸಚಿವರು ಇವರೆಲ್ಲರೂ ಕೂಡ ಈ ಬಗ್ಗೆ ಸಮಗ್ರವಾದ ಪ್ಲಾನ್ ಮಾಡಬೇಕು, ಇದಕ್ಕೆ ಬೇಕಾದ ಸಂಪನ್ಮೂಲವನ್ನು ಜೋಡಿಸಬೇಕು, ಸಮುದಾಯವನ್ನು ಅದರಲ್ಲಿ ಇನ್‌ವಾಲ್ವ್ ಮಾಡಲೇ ಬೇಕು, ಇದು ಅನಿವಾರ್ಯ. ನಾವು ಒಪ್ಪಲಿ ಒಪ್ಪದೆ ಇರಲಿ ನೀವು ಗ್ರಾಮೀಣ ಸಮುದಾಯವನ್ನು ಇನ್‌ವಾಲ್ವ್ ಮಾಡಿ ಕೆಲಸ ಮಾಡಲು ಕಲಿಯಲಿಲ್ಲವೆಂದರೆ ಈ ಸಮಸ್ಯೆಯನ್ನು ನಮ್ಮಿಂದ ಬಗೆಹರಿಸುವುದಕ್ಕಾಗುವುದಿಲ್ಲ, 55 ವರ್ಷದಲ್ಲಿ ಆಗುವುದಿಲ್ಲವೆನ್ನುವುದನ್ನು ಪ್ರೂವ್ ಮಾಡಿಯೇ ಬಿಟ್ಟಿದ್ದೇವೆ. 55 ವರ್ಷ ಇದದ ವ್ಯವಸ್ಥೆಯೇ ಮುಂದುವರೆದಿತ್ತು, ಅದು ಆಗಿಲ್ಲ ನಾವಂತೂ ಸೋತಿದ್ದೇವೆ. ಒಂದು ಬದಲಾವಣೆ ಮಾಡಿ ಪ್ರಯತ್ನ ನೋಡೋಣ. ಅವರಿಗೆ ಬೇಕಾದಂಥ ಮಾರ್ಗದರ್ಶನ ಮಾಡೋಣ, ಅವರಿಗೇನು ಸಹಾಯ ನಮ್ಮ ಕಡೆಯಿಂದ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡೋಣ ಎನ್ನುವ ಮಾತನ್ನು ಹೇಳುತ್ತೇನೆ. ಸ್ನೇಹಿತರೂ ಮಾತನಾಡುವಾಗ ಗ್ರಾಮಪಂಚಾಯತಿಗೆ ಕೊಟ್ಟ ಅಧಿಕಾರದ ಬಗ್ಗೆ ಮನಸ್ಸಿಗೆ ಬಹಳ ನೋವಾಗುವ ರೀತಿಯಲ್ಲಿ ಮಾತನಾಡಿದ್ದಾರೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಡಿ.ಆರ್. ಪಾಟೀಲು ಮಾತ್ರಾನೇ ಗ್ರಾಮಪಂಚಾಯಿತಿಯ ವಿಕೇಂದ್ರೀಕರಣದ ಪರವಾಗಿದ್ದಾರೆ, ಉಳಿದ ಶಾಸಕರೆಲ್ಲಾ ವಿರೋಧವಿದ್ದಾರೆ ಎಂದು ಅಭಿಪ್ರಾಯ ಬರುವುದಿದೆಯಲ್ಲಾ ಅದು ತಪ್ಪು, ಇವರೊಬ್ಬರೇ ಅಲ್ಲ, ಇವರು ವಾರಸುದಾರರಾಗಿ ವಕಾಲತ್ತು ಹಾಕಬೇಕಾಗಿಲ್ಲ, ನಮಗೂ ವಿಕೇಂದ್ರೀಕಗಣದ್ದು ಗೊತ್ತಿದೆ. ನಾನು ಒಬ್ಬ ಅಧಿಕಾರಿಗೆ ಸವಾಲು ಹಾಕುತ್ತೇನೆ. 1987ರಿಂದ ಗ್ರಾಮ ಪಂಚಾಯಿತಿ ವ್ಯವಸ್ಥೆ ಜಾರಿಗೆ ಬಂದಿದೆ, ಯಾವುದಾದರೂ ಒಂದು ಗ್ರಾಮ ಪಂಚಾಯಿತಿಯನ್ನು ಆಯ್ಕೆ ಮಾಡಿ ನೀವು. 1987–2004ಕ್ಕೆ ಯಾವುದಾದರೂ ಒಂದು ಗ್ರಾಮ ಪಂಚಾಯಿತಿ ಜನರಿಗೆ ಉಪಯೋಗವಾಗುವ ಒಂದು ಶಾಶ್ವತವಾದ ಕೆಲಸವನ್ನು ಮಾಡಿದ್ದರೆ ಒಪ್ಪಿ ಅಪಲಾಜಿ ಕೇಳುವುದಕ್ಕೆ ತಯಾರಿದ್ದೇನೆ ಎಂದು ಸವಾಲು ಹಾಕುತ್ತಿದ್ದೇನೆ ಅದೇ ಅಧಿಕಾರಿ ಹೋಗಿ ನೋಡಿಕೊಂಡು ಬರಲಿ. Let him choose his own panchayat. ಗ್ರಾಮಪಂಚಾಯಿತಿ ವಿಕೇಂದ್ರೀಕರಣ ಇವರಿಗೇನೇ ಗೊತ್ತಿರುವುದು ನಮಗೇನೂ ಗೊತ್ತಿಲ್ಲವೇ? ದಯವಿಟ್ಟು ನಾವು ಅದರ ವಿರುದ್ಧ ಇದ್ದೇವೆ ಎನ್ನುವ ರೀತಿಯಲ್ಲಿ ಮಾತನಾಡಬೇಡಿ. It will give a wrong message.

**ಶ್ರೀ ಹಂಪನಗೌಡ ಬಾದರ್ಲಿ** : ಮಾನ್ಯ ಶ್ರೀರಾಮರೆಡ್ಡಿಯವರೆ, ದಯವಿಟ್ಟು ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಕ ಮಾಡಬೇಡಿ, ಒಳ್ಳೆಯವರೂ ಇದ್ದಾರೆ ಕೆಟ್ಟವರೂ ಇದ್ದಾರೆ, ಗ್ರಾಮಪಂಚಾಯಿತಿ ಅಧ್ಯಕ್ಷರು ಒಳ್ಳೆಯವರು ಇದ್ದಾರೆ, ಇಲ್ಲಿರುವ ಶಾಸಕರಲ್ಲಿ ಒಳ್ಳೆಯವರೂ ಇದ್ದೇವೆ. ಕೆಟ್ಟವರೂ ಇದ್ದೇವೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಹೌದು. ಮಂತ್ರಿಗಳು ಎದ್ದು ನಿಂತು ಉತ್ತರ ಕೊಡುತ್ತಿದ್ದರೆ ಅಧಿಕಾರಿಗಳು ಕುಳಿತುಕೊಂಡು ಉತ್ತರ ಕೊಡುವ ಪರಿಸ್ಥಿತಿ ಬಂದಿದೆ ಏಕೆ ಸುಮ್ಮನೆ ಪ್ರಜಾಪ್ರಭುತ್ವದ ಬಗ್ಗೆ ತಾವೇನು ಮಾತನಾಡುತ್ತೀರಿ?

**ಶ್ರೀ ಬಸವರಾಜ ರಾಯರೆಡ್ಡಿ** : ನೀವು ಮಾತನಾಡುವುದು ಸರಿ ಇದೆ ಎಂದೆ.

**ಶ್ರೀ ಡಿ ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಆಯ್ಕೆಯಾದ ಎಲ್ಲಾ ಸದಸ್ಯರು ಕಾನೂನಿನೊಳಗೆ ಏನು ವ್ಯವಸ್ಥೆಯನ್ನು ನಾವು ರೂಪಿಸಿದ್ದೇವೆ ಎನ್ನುವ ತಿಳುವಳಿಕೆ ಇದ್ದೇ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿದ್ದೇವೆ.

**ಶ್ರೀ ಡಿ.ಆರ್. ಪಾಟೀಲ್** : ಕಾನೂನು ಬದಲಾವಣೆ ಮಾಡಿ, ಕಾನೂನು ಬದಲಾವಣೆ ಮಾಡಿದಾಗ ನಿಮಗೂ ಬುದ್ಧಿಕಲಿಸುವ ಶಕ್ತಿ ಜನರಿಗೆ ಇದ್ದೇ ಇದೆ. ಅವರಿಗೂ ಅಧಿಕಾರ ಏನೇನು ಇದೆ ಎನ್ನುವ ತಿಳುವಳಿಕೆ ಬಂದಿದೆ, ನೀವು ಬದಲಾವಣೆ ಮಾಡಿ, ಬದಲಾವಣೆ ಮಾಡುವುದಕ್ಕೆ ಕಾಂಗ್ರೆಸ್‌ಗೆ ಬಂದಿದ್ದೀರಿ, ನನಗೆ ಬಿಡಿ, ನಿಮಗಂತೂ ಈ ಸಮಸ್ಯೆಯನ್ನು ನಮ್ಮಿಂದ ಬಗೆಹರಿಸುವುದಕ್ಕಾಗುವುದಿಲ್ಲ. 55 ವರ್ಷದಲ್ಲಿ ಆಗುವುದಿಲ್ಲವೆನ್ನುವುದನ್ನು ಪ್ರೂವ್ ಮಾಡಿಯೇ ಬಿಟ್ಟಿದ್ದೇವೆ. 55 ವರ್ಷ ಇದ್ದ ವ್ಯವಸ್ಥೆಯೇ ಮುಂದುವರೆದಿತ್ತು, ಅದು ಆಗಿಲ್ಲ ನಾವಂತೂ ಸೋತಿದ್ದೇವೆ. ಒಂದು ಬದಲಾವಣೆ ಮಾಡಿ ಪ್ರಯತ್ನ ನೋಡೋಣ, ಅವರಿಗೆ ಬೇಕಾದಂಥ ಮಾರ್ಗದರ್ಶನ ಮಾಡೋಣ, ಅವರಿಗೇನು ಸಹಾಯ ನಮ್ಮ ಕಡೆಯಿಂದ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡೋಣ ಎನ್ನುವ ಮಾತನ್ನು ಹೇಳುತ್ತೇನೆ. ಸ್ನೇಹಿತರು ಮಾತನಾಡುವಾಗ ಗ್ರಾಮಪಂಚಾಯತಿಗೆ ಕೊಟ್ಟ ಅಧಿಕಾರದ ಬಗ್ಗೆ ಮನಸ್ಸಿಗೆ ಬಹಳ ನೋವಾಗುವ ರೀತಿಯಲ್ಲಿ ಮಾತನಾಡಿದ್ದಾರೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಡಿ.ಆರ್. ಪಾಟೀಲರು ಮಾತ್ರಾನೇ ಗ್ರಾಮಪಂಚಾಯತಿಯ ವಿಕೇಂದ್ರೀಕರಣದ ಪರವಾಗಿದ್ದಾರೆ, ಉಳಿದ ಶಾಸಕರೆಲ್ಲಾ ವಿರೋಧವಿದ್ದಾರೆ ಎಂದು ಅಭಿಪ್ರಾಯ ಬರುವುದಿದೆಯಲ್ಲಾ ಅದು ತಪ್ಪು, ಇವರೊಬ್ಬರೇ ಅಲ್ಲ, ಇವರು ವಾರಸುದಾರರಾಗಿ ವಕಾಲತ್ತಾಉ ಹಾಕಬೇಕಾಗಿಲ್ಲ. ನಮಗೂ ವಿಕೇಂದ್ರೀಕರಣದ್ದು ಗೊತ್ತಿದೆ. ನಾನು ಒಬ್ಬ ಅಧಿಕಾರಿಗೆ ಸವಾಲು ಹಾಕುತ್ತೇನೆ. 1987ರಿಂದ ಗ್ರಾಮಪಂಚಾಯತಿ ವ್ಯವಸ್ಥೆ ಜಾರಿಗೆ ಬಂದಿದೆ, ಯಾವುದಾದರೂ ಒಂದು ಗ್ರಾಮ ಪಂಚಾಯತಿಯನ್ನು ಆಯ್ಕೆ ಮಾಡಿ ನೀವು. 1987–2004ಕ್ಕೆ ಯಾವುದಾದರೂ ಒಂದು ಗ್ರಾಮ ಪಂಚಾಯತಿ ಜನರಿಗೆ ಉಪಯೋಗವಾಗುವ ಒಂದು ಶಾಶ್ವತವಾದ ಕೆಲಸವನ್ನು ಮಾಡಿದ್ದಾರೆ ಒಪ್ಪಿ ಅಪಲಾಜಿ ಕೇಳುವುದಕ್ಕೆ ತಯಾರಿದ್ದೇನೆ ಎಂದು ಸವಾಲು ಹಾಕುತ್ತಿದ್ದೇನೆ. ಅದೇ ಅಧಿಕಾರಿ ಹೋಗಿ ನೋಡಿಕೊಂಡು ಬರಲಿ ಗ್ರಾಮಪಂಚಾಯತಿ ವಿಕೇಂದ್ರಿಕರಣ ಇವರಿಗೇನೇ ಗೊತ್ತಿರುವುದು ನಮಗೇನೂ ಗೊತ್ತಿಲ್ಲವೇ ದಯವಿಟ್ಟು ನಾವು ಅದರ ವಿರುದ್ಧ ಇದ್ದೇವೆ ಎನ್ನುವ ರೀತಿಯಲ್ಲಿ ಮಾತನಾಡಬೇಡಿ.

**ಶ್ರೀ ಹಂಪನಗೌಡ ಬಾದರ್ಲಿ** : ಮಾನ್ಯ ಶ್ರೀರಾಮರೆಡ್ಡಿಯವರೆ, ದಯವಿಟ್ಟು ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಕ ಮಾಡಬೇಡಿ, ಒಳ್ಳೆಯವರೂ ಇದ್ದಾರೆ ಕೆಟ್ಟವರೂ ಇದ್ದಾರೆ, ಗ್ರಾಮಪಂಚಾಯತಿ ಅಧ್ಯಕ್ಷರು ಒಳ್ಳೆಯವರು ಇದ್ದಾರೆ, ಕೆಟ್ಟವರು ಇದ್ದಾರೆ, ಇಲ್ಲಿರುವ ಶಾಸಕರಲ್ಲಿ ಒಳ್ಳೆಯವರು ಇದ್ದೇವೆ. ಕೆಟ್ಟವರೂ ಇದ್ದೇವೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಹೌದು, ಮಂತ್ರಿಗಳು ಎದ್ದು ನಿಂತು ಕೊಡುತ್ತಿದ್ದಾರೆ ಅಧಿಕಾರಿಗಳು ಕುಳಿತುಕೊಂಡು ಉತ್ತರ ಕೊಡುವ ಪರಿಸ್ಥಿತಿ ಬಂದಿದೆ, ಏಕೆ ಸುಮ್ಮನೆ ಪ್ರಜಾಪ್ರಭುತ್ವದ ಬಗ್ಗೆ ತಾವೇನು ಮಾತನಾಡುತ್ತೀರಿ?

**ಶ್ರೀ ಬಸವರಾಜ ರಾಯರೆಡ್ಡಿ** : ನೀವು ಮಾತನಾಡುವುದು ಸರಿ ಇದೆ ಎಂದೆ.

**ಶ್ರೀ ಡಿ.ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಆಯ್ಕೆಯಾದ ಎಲ್ಲಾ ಸದಸ್ಯರು ಕಾನೂನಿನೊಳಗೆ ಏನು ವ್ಯವಸ್ಥೆಯನ್ನು ನಾವು ರೂಪಿಸಿದ್ದೇವೆ ಎನ್ನುವ ತಿಳುವಳಿಕೆ ಇದ್ದೇ ಚುನಾವಣೆಯಲ್ಲಿ ಆಯ್ಕೆಯಾಗಿ ಬಂದಿದ್ದೇವೆ.

**ಶ್ರೀ ಬಸವರಾಜರಾಯ ರೆಡ್ಡಿ** : ಕಾನೂನು ಬದಲಾವಣೆ ಮಾಡಿದರೆ ಆಯಿತು.

**ಶ್ರೀ ಡಿ.ಆರ್. ಪಾಟೀಲ್** : ಕಾನೂನು ಬದಲಾವಣೆ ಮಾಡಿ, ಕಾನೂನು ಬದಲಾವಣೆ ಮಾಡಿದಾಗ ನಿಮಗೂ ಬುದ್ಧಿಕಲಿಸುವ ಶಕ್ತಿ ಜನರಿಗೆ ಇದ್ದೇ ಇದೆ. ಅವರಿಗೂ ಅಧಿಕಾರ ಏನೇನು ಇದೆ ಎನ್ನುವ ತಿಳುವಳಿಕೆ ಬಂದಿದೆ, ನೀವು ಬದಲಾವಣೆ ಮಾಡಿ, ಬದಲಾವಣೆ ಮಾಡುವುದಕ್ಕೆ ಬಂದಿದ್ದೀರಿ, ನನಗ ಬಿಡಿ, ನಿಮಗಂತೂ ಬದಲಾವಣೆ ಮಾಡುವುದಕ್ಕೆ ಹಕ್ಕೇ ಇಲ್ಲ ದೇಶದಲ್ಲಿ ಈ ಬಗ್ಗೆ ನಮಗೆ ಕಮಿಟ್‌ಮೆಂಟ್ ಇದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಬುದ್ಧಿಕಲಿಸುತ್ತಾರೆಯೇ ಅದೇನು ಕಲಿಸುತ್ತಾರೋ ಕಲಿಸಲಿ, ತಾವೇನು ಹೀಗೆ ಮಾತನಾಡುತ್ತೀರಿ, ಹಾಗಾದರೆ ನಾವೇನು ಮಾತನಾಡಬಾರದು, ಗ್ರಾಮಪಂಚಾಯತಿ ವಿಷಯ ನಾವು ಮಾತನಾಡಬಾರದು ಏಕೆಂದರೆ ಅವರು ನಮಗೆ ಬುದ್ಧಿಕಲಿಸುತ್ತಾರಲ್ಲಾ. Is he the champion of Gram Panchayat? ಅವರೇನು ಬುದ್ಧಿಕಲಿಸುತ್ತಾರೆ. ನಿಂತುಕೊಂಡು ನೀವೇನು ಮಾತನಾಡುತ್ತೀರಿ, ಶಾಸಕರಿಗೆ ಬುದ್ಧಿಕಲಿಸುತ್ತಾರಂತೆ.....

**ಶ್ರೀ ಡಿ.ಆರ್. ಪಾಟೀಲ್** : ನಿಮಗೆ ಮಾತನಾಡುವುದಕ್ಕೆ ಹಕ್ಕಿದೆ, ನನಗೆ ಮಾತನಾಡುವುದಕ್ಕೆ ಹಕ್ಕಿಲ್ಲವೇ

**ಶ್ರೀ ಜೆ.ಸಿ. ಮಾಧುಸ್ವಾಮಿ** : ಗ್ರಾಮಪಂಚಾಯತಿಗಳಿಗೆ ಅಧಿಕಾರಕೊಡಿ ಎಂದು ಹೇಳಿ, ಇಲ್ಲಿಗೆ ಬುದ್ಧಿಕಲಿತುಕೊಂಡೇ ಬಂದಿರುವುದು.

**ಛೇರ್ಮನ್** : ಈಗ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಚರ್ಚೆಯಾಗುತ್ತಿಲ್ಲ, ಕುಡಿಯುವ ನೀರಿನ ಬಗ್ಗೆ ಚರ್ಚೆಯಾಗುತ್ತಿದೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಇಲ್ಲಿ ವಿಕೇಂದ್ರೀಕರಣದ ಬಗ್ಗೆಯಲ್ಲ ಚರ್ಚೆಯಾಗುತ್ತಿರುವುದು. ಕುಡಿಯುವ ನೀರಿನ ಬಗ್ಗೆ ಚರ್ಚೆಯಾಗುತ್ತಿರುವುದು.

**ಶ್ರೀ ಸಿ.ಎಂ. ಉದಾಸಿ(ಹಾನಗಲ್)** : ಸನ್ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಪೂರೈಕೆಯ ಬಗ್ಗೆ ಗ್ರಾಮೀಣ ಭಾಗದಲ್ಲಿ ಹಾಹಾಕಾರ ಎದ್ದಿದೆ ಎಂದು ಇವತ್ತು ಸದನದ ಎಲ್ಲಾ ಸದಸ್ಯರು ಮಾತನಾಡಿಧ್ದಾರೆಂಬುದು ಗಮನಕ್ಕೆ ಬಂದಿದೆ. ನಮ್ಮ ಜಿಲ್ಲೆಗೆ ಪಂಚಾಯತ್‌ರಾಜ್ ಸಚಿವರು ಬಂದಿದ್ದರು, ಅವರು ಬಂದಾಗ ಹಾವೇರಿ ಜಿಲ್ಲೆಯಲ್ಲಿ 600 ಹಳ್ಳಿಗಳಲ್ಲಿ ಸರ್ವೆ ಮಾಡಿದ ಪ್ರಕಾರ 300ಕ್ಕಿಂತ ಹೆಚ್ಚು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಅದಕ್ಕೆ 8 ಕೋಟಿ 75 ಲಕ್ಷ ರೂಪಾಯಿಗಳ ಹಣಬೇಕೆನ್ನುವ ಮಾತುಗಳನ್ನು ಅವರು ಪ್ರಸ್ತಾವನೆಯನ್ನು ಕಳುಹಿಸಿದಾಗ ಹೇಳಿದರು. ಅಲ್ಲಿ ಲಭ್ಯವಿದ್ದ ಹಣವೆಷ್ಟು ಎಂದರೆ 88 ಲಕ್ಷ ರೂಪಾಯಿ, ಈಗ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದ್ದು ಕೋಟಿಗಟ್ಟಲೆ ನಾವು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿದರು, 8 ಕೋಟಿ 87 ಲಕ್ಷ ರೂಪಾಯಿ ಬೇಕೆಂದು ಹೇಳಿದ್ದು ಯಾವಾಗ ಡಿಸೆಂಬರ್ 30ರವರೆಗೆ ಕೊನೆಗೆ ಬೇಕಾದ ಅವಧಿಗೆ 300 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇತ್ತು. ಆದರೆ ನಮಗೆ ತಿಳಿದಂತೆ 450 ಕ್ಕಿಂತ ಹೆಚ್ಚು ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆ. ಸುಮಾರು 15 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಹಾವೇರಿ ಒಂದೇ ಜಿಲ್ಲೆಗೆ ಬೇಕಾಗುತ್ತದೆ. ಹೀಗೆ ಇರುವಾಗ ಇವತ್ತು ಕುಡಿಯುವ ನೀರಿಗೆ ಹಣ ಬಳಕೆಯಾಗುತ್ತಿರುವುದು ಬಹಳಷ್ಟು ಕಡಿಮೆ ಎನ್ನುವುದನ್ನು ಗಮನಕ್ಕೆ ತರುತ್ತಿದ್ದೇನೆ. ಶಾಶ್ವತ ಕುಡಿಯುವ ನೀರಿನ ಪೂರೈಕೆಯ ಬಗ್ಗೆ ಏನು ಮಾಡಬೇಕೆನ್ನುವುದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ.

ಇವತ್ತು ಹಾವೇರಿ ಜಿಲ್ಲೆಯಲ್ಲಿ ವರದಾ ನದಿ ಹರಿದು ಹೋಗಿದೆ, 11 ಬ್ಯಾರೇಜ್‌ಗಳಿದ್ದಾವೆ, ಒಂದು ಬ್ಯಾರೇಜ್‌ನಿಂದ ಮತ್ತೊಂದು ಬ್ಯಾರೇಜ್‌ನ 8 ಕಿ.ಮೀ. ಅಂತರದಲ್ಲಿ ಮತ್ತೊಂದು ಬ್ಯಾರೇಜ್ ಅನ್ನು ಮಾಡಿದ್ದಾದರೆ ಧರ್ಮ ನದಿಯಲ್ಲಿ 13 ಬ್ಯಾರೇಜ್ ಮಾಡುವಂತಹ ಅವಕಾಶಗಳಿದ್ದಾವೆ. ಇದನ್ನು ಶಾಶ್ವತ ಕುಡಿಯುವ ನೀರು ಪೂರೈಕೆಗೆ ಮಾಡಿದ್ದೇ ಆದರೆ ಶೇಕಡ 20ರಷ್ಟಾದರೂ ಕೂಡ ಕುಡಿಯುವ ನೀರಿಗೆ ಅನುಕೂಲ ಕಲ್ಪಿಸಿದಂತಾಗುತ್ತದೆ, ಇಂತಹ ಯೋಜನೆಗಳ ಬಗ್ಗೆ ಇವತ್ತು ಗಂಭೀರವಾಗಿ ಚಿಂತನೆ ಮಾಡುವುದು ಅಗತ್ಯವಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರೆ,. ಮಾನ್ಯ ಮುಖ್ಯಮಂತ್ರಿಗಳು ಆರು ಗಂಟೆಗೆ ಪ್ರತಿಪಕ್ಷದ ಎಲ್ಲಾ ನಾಯಕರನ್ನು ಮತ್ತೆ ಅನೇಕ ಶಾಸಕರನ್ನು ಬಾಗಲಕೋಟೆ ಮತ್ತು ಇತರೆ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ಮಿಟಿಂಗ್‌ನ್ನು ಕರೆದಿದ್ದಾರೆ. ಈಗ ಸಭೆಯನ್ನು ಅಡ್ಜರ್ನ್ ಮಾಡಿ. ನಾಳೆ ಮಾನ್ಯ ಡಿ.ಆರ್. ಪಾಟೀಲರೇ ಮಾತನಾಡುವುದನ್ನು ಮುಂದುವರಿಸಲಿ.

**ಛೇರ್ಮನ್** : ಅವರು ಮುಗಿಸಿಬಿಡಲಿ. ಚರ್ಚೆ ಸಾಕಷ್ಟು ಆಗಿದೆ. ಮುಗಿಸಿ ಮಾನ್ಯ ಡಿ.ಆರ್. ಪಾಟೀಲರೇ, ಎರಡು ನಿಮಿಷದಲ್ಲಿ ಮುಗಿಸಿ. ನೀವು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯ ಬಗ್ಗೆ ಮಾತನಾಡಲಿಕ್ಕೆ ಹೋಗಬೇಡಿ, ನೀವು ಮುಗಿಸಿ. ನಾಳೆ ಅವಕಾಶ ಇಲ್ಲ. ಮುಗಿಸಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಇವತ್ತು ಅಡ್ಜರ್ನ್ ಮಾಡಿ. ನಾಳೆ ನೋಡೋಣ.

**ಛೇರ್ಮನ್** : ಮಾನ್ಯ ಡಿ.ಆರ್. ಪಾಟೀಲರೇ, ತಾವು ಮುಗಿಸಿ.

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಮಾನ್ಯ ಅಧ್ಯಕ್ಷರೆ, ಇದಾದಕೂಡಲೇ ನೆಕ್ಸ್ಟ್ ಸಬ್ಜೆಕ್ಟ್ ನನ್ನದು ಇದೆ. ಪಂಚಾಯತ್‌ರಾಜ್ ಇನ್‌ಸ್ಟಿಟ್ಯೂಷನ್ಸ್ ಎಲೆಕ್ಷನ್ಸ್‌ಗೆ ಮಾರ್ಗಸೂಚಿ ಆಗಿಹೋಗಿದೆ. ನೋಟೀಫಿಕೇಷನ್ಸ್ ಇಷ್ಯೂ ಮಾಡಿದರೆ ನಾನು ಏನು ವಿಚಾರವನ್ನು ಪ್ರಸ್ತಾಪ ಮಾಡಿದರೂ ಅದು ಅಪ್ರಸ್ತುತವಾಗಿಬಿಡುತ್ತೆ. ಇವತ್ತು ಅಡ್ಜರ್ನ್ ಮಾಡುತ್ತೀರಿ ಎಂದು ಹೇಳುತ್ತಿದ್ದೀರಿ. ನಾಳೆ ಅಷ್ಟೊತ್ತಿಗೆ ತೆಗೆದುಕೊಳ್ಳುತ್ತೀರಿ ಎನ್ನುತಕ್ಕಂಥದ್ದು ಗೊತ್ತಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮೊದಲಿಗೆ ಮಾನ್ಯ ಕೆ.ಆರ್. ರಮೇಶ್‌ಕುಮಾರ್ ಅವರದನ್ನು ತೆಗೆದುಕೊಳ್ಳಲಿ.

**ಶ್ರೀ ಕೆ.ಆರ್. ರಮೇಶ್‌ಕುಮಾರ್** : ಏಕೆಂದರೆ ಅವರು ನೋಟೀಫಿಕೇಷನನ್ನು ಇಷ್ಯೂ ಮಾಡಿಬಿಟ್ಟರೆ the whole thing becomes infructuous.

**ಛೇರ್ಮನ್** : ಮಾನ್ಯ ಡಿ.ಆರ್. ಪಾಟೀಲರೇ ತಾವು ಮುಗಿಸಿ.

**ಶ್ರೀ ಡಿ.ಆರ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ಅದಕ್ಕೆ ಸ್ಥಳೀಯ ಸಮಸ್ಯೆಗಳನ್ನು ಪರಿಹಾರ ಮಾಡುವಂಥ ಜವಾಬ್ದಾರಿಯನ್ನು ನಾವು ಸಮುದಾಯಕ್ಕೆ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟರೆ ನಮಗಿಂತ ಹೆಚ್ಚು ಯಶಸ್ವಿಯಾಗಿ ಅವರು ಕೆಲಸ ಮಾಡಬಹುದು ಎನ್ನತಕ್ಕ ಭರವಸೆ ನನ್ನಲ್ಲಿದೆ. ಅದಕ್ಕೆ ದಯವಿಟ್ಟು ಅವರಿಗೆ ನಾವು ಕೊಡಬೇಕು. ಅವರಿಗೆ ಬೇಕಾಗುವಂಥ ಸಹಾಯ, ಸಹಕಾರ, ಮಾರ್ಗದರ್ಶನವನ್ನು ನಾವು ಮಾಡಬೇಕೆನ್ನುವ ಮಾತನ್ನು ನಾನು ಇಲ್ಲಿ ಹೇಳುತ್ತೇನೆ. ಮತ್ತು ಈಗಾಗಲೇ ಸರ್ಕಾರ ಬರಗಾಲ ಪರಿಹಾರ ಸಮಿತಿಯನ್ನು ನೇಮಕ ಮಾಡಿ ಅದಕ್ಕೆ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿ ಸಮಿತಿಯನ್ನು ಇಟ್ಟಿದ್ದಾರೆ. ಅದರ ಮುಖಾಂತರ ನೀವು ಕುಡಿಯುವ ನೀರನ್ನು ತುರ್ತು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಬೇಕಾದ ನಿರ್ಣಯವನ್ನು ನೀವು ತೆಗೆದುಕೊಳ್ಳಬಹುದು. ಅದಕ್ಕೇನೂ ತೊಂದರೆ ಇಲ್ಲ. ಏಕೆ ಈ ರೀತಿ ತಪ್ಪು ಕಲ್ಪನೆಯನ್ನು ಮಾಡಿಕೊಂಡಿದ್ದಾರೋ ಬಹಳ ಜನ ಸ್ನೇಹಿತರು

ಎಂದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಈಗಂತೂ ಯಾವ ಕಾನೂನಿನಲ್ಲೂ ಶಾಸಕರಿಗೆ ಅಧಿಕಾರ ಇಲ್ಲ. ಆದರೆ ನಾವು ಅಧಿಕಾರವನ್ನು ಚಲಾಯಿಸಬೇಕೆನ್ನುತ್ತೇವೆ. ಈ ರೀತಿ back seat driving ನ್ನು ನಾವು ಬಿಡಬೇಕು. ಯಾರಿಗೆ ಜವಾಬ್ದಾರಿ ಇದೆ, ಅವರಿಗೆ ಅಧಿಕಾರವನ್ನು ಕೊಟ್ಟುಬಿಡೋಣ. ಇದು ನನ್ನ ಒತ್ತಾಯ ಸಾರ್.

**ಛೇರ್ಮೆನ್** : ಈಗ ಅನೇಕ ಮಾನ್ಯ ಸದಸ್ಯರುಗಳು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚೆ ಮಾಡಲಿಕ್ಕೆ ಪತ್ರಗಳನ್ನು ಕೊಟ್ಟಿದ್ದಾರೆ. ಈಗ ನಾಳೆ ಇನ್ನೂ ಕೂಡ ಬಹಳ ಪ್ರಮುಖವಾದ ಕಾರ್ಯಕಲಾಪಗಳನ್ನು ಸಭೆಯಲ್ಲಿ ಕೈಗೆತ್ತಿಕೊಳ್ಳಬೇಕಾಗಿರುವುದರಿಂದ ಸಚಿವರು ಉತ್ತರ ಕೊಟ್ಟಮೇಲೆ ಅವರಿಗೆ ಕ್ಲಾರಿಫಿಕೇಷನನ್ನು ಕೇಳುವುದಕ್ಕೆ ಅವರಿಗೆ ಅವಕಾಶವನ್ನು ಮಾಡಿಕೊಡಲಾಗುತ್ತದೆ. ಇವತ್ತಿಗೆ ಈ ಕುಡಿಯುವ ನೀರಿನ ಸಮಸ್ಯೆಯ ಚರ್ಚೆ ಮುಕ್ತಾಯಗೊಂಡಿದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು 6–03 ಗಂಟೆಗೆ ಮುಂದೂಡಲ್ಪಟ್ಟು ಪುನಃ ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

## ಅನುಬಂಧ – I

395(204) : ಶ್ರೀ ಅಭಯ ಪಾಟೀಲ್ (ಬಾಗೇವಾಡಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಘಟ್ಟಪ್ರಭಾ ಹಾಗೂ ಮಲಪ್ರಭಾ ನದಿಗಳಿಂದ ಕೆಲವು ಜನ ಮರಳನ್ನು ಸಾಗಿಸುತ್ತಿದ್ದು, ಇದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಇದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಘಟ್ಟಪ್ರಭಾ ಹಾಗೂ ಮಲಪ್ರಭಾ ನದಿಗಳಿಂದ ಮರಳನ್ನು ಸಾಗಿಸುವುದರಿಂದ ರಸ್ತೆ ಸಂಚಾರ ವಿಪರೀತಗೊಂಡು ರಸ್ತೆಗಳು ಹದಗೆಟ್ಟಿದೆ; ಅವುಗಳ ದುರಸ್ತಿಗೆ ಸರ್ಕಾರದ ಕ್ರಮಗಳೇನು?

ಶ್ರೀ ಧರಂಸಿಂಗ್(ಮುಖ್ಯ ಮಂತ್ರಿಗಳು)

ಅ) ಹೌದು.

ಆ) ಘಟ್ಟಪ್ರಭಾ ಹಾಗೂ ಮಲಪ್ರಭಾ ನದಿ ಪಾತ್ರದಲ್ಲಿ ಅಕ್ರಮ ಮರಳು ಗಣಿಗಾರಿಕೆ ತಡೆಗಟ್ಟಲು ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.

1) 2001–02ನೇ ಸಾಲಿನಿಂದ 2004–05ನೇ ಡಿಸೆಂಬರ್ ಅಂತ್ಯದವರೆಗೆ ಅಕ್ರಮ ಮರಳು ಸಾಗಾಣಿಕೆಯ 185 ಪ್ರಕರಣಗಳನ್ನು ಪತ್ತೆ ಹಚ್ಚಿ ರೂ. 5.98 ಲಕ್ಷ ದಂಡ ವಸೂಲಿ ಮಾಡಲಾಗಿದೆ.

2) 367 ಮರಳು ನಿಕ್ಷೇಪಗಳನ್ನು ಗುರ್ತಿಸಿ ಮರಳು ಹರಾಜು ಅಧಿಸೂಚನೆ ಹೊರಡಿಸಿದೆ,

3) ಮರಳು ಹರಾಜು ಅಧಿಸೂಚನೆ ಹೊರಡಿಸಲಾದ ಪೈಕಿ 224 ಮರಳು ನಿಕ್ಷೇಪಗಳ 711.25 ಎಕರೆ ಪ್ರದೇಶವನ್ನು ಮರಳು ಗಣಿಗಾರಿಕೆಗೆ ಹರಾಜು ಮಾಡಲಾಗಿದೆ. ಹಾಗು ಇದರಿಂದ ರೂ. 66.86 ಲಕ್ಷ ರಾಜಸ್ವ ಸಂಗ್ರಹಿಸಲಾಗಿದೆ.

ಇ) ಮರಳು ಹರಾಜಿನಿಂದ ಸಂಗ್ರಹಿಸಲಾದ ಶೇ 50ರಷ್ಟು ಮೊತ್ತವನ್ನು ಆಯಾ ಗ್ರಾಮ ಪಂಚಾಯಿತಿಗಳಿಗೆ ನೀಡಲಾಗುತ್ತಿದ್ದು. ಸದರಿ ಹಣದಿಂದ ಮರಳು ಸಾಗಾಣಿಕೆಯಿಂದ ಹಾಳಾದ ರಸ್ತೆಗಳ ದುರಸ್ತಿಗೆ ಕ್ರಮ ವಹಿಸಬಹುದಾಗಿದೆ.